ಸಂಪುಟ: 05 ಸಂಚಿಕೆ: 296 ಪುಟಗಳು: 08 ಶುಕ್ರವಾರ 09 ಜನವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

**ಮುಂಜಾನೆ ಮಾತು**

ನಿದ್ರೆಯಲ್ಲಿ
ಕಾಣುವುದು ಕನಸಲ್ಲ,
ನಿದ್ದೆ ಗೆಡುವಂತೆ
ಮಾಡುವುದಿದೆಯಲ್ಲ
ಅದು ನಿಜವಾದ ಕನಸು.

# ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

## ಮನೆಯಲ್ಲೇ ಕುಳಿತು ಜಮೀನಿನ ಇ ಸ್ವತ್ತು ಪಡೆಯುವ ಸೌಲಭ್ಯ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಗ್ರಾಮೀಣ ಭಾಗದ ಜನರಿಗೆ ಮತ್ತು ರೈತರಿಗೆ ಆಸ್ತಿ ದಾಖಲೆಗಳನ್ನು ಪಡೆಯುವ ಪ್ರಕ್ರಿಯೆಯನ್ನು ಅತ್ಯಂತ ಸರಳೀಕರಣಗೊಳಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಮಹತ್ವದ ಹೆಜ್ಜೆಯಿಟ್ಟಿದೆ. ಇಲಾಖೆಯು ನವೀಕರಿಸಿದ 'ಇ-ಸ್ವತ್ತು 2.0' ತಂತ್ರಾಂಶವನ್ನು ಪರಿಚಯಿಸಿದ್ದು, ಇದರಿಂದ ನಿಮ್ಮ ಜಮೀನಿಗೆ ಇ-ಖಾತಾ ಪಡೆಯುವುದು ಈಗ ಹಿಂದೆಂದಿಗಿಂತಲೂ ಸುಲಭವಾಗಿದೆ.

ಈ ನೂತನ ವ್ಯವಸ್ಥೆಯ ಅಡಿಯಲ್ಲಿ ಸಾರ್ವಜನಿಕರು ಆಸ್ತಿ ದಾಖಲೆಗಳಿಗಾಗಿ ಗ್ರಾಮ ಪಂಚಾಯತಿ ಕಚೇರಿಗಳಿಗೆ ಅಲೆದಾಡುವ ಅಗತ್ಯವಿಲ್ಲ. ಬದಲಾಗಿ, ಮನೆಯಲ್ಲೇ ಕುಳಿತು ಆನ್‌ಲೈನ್ ಮೂಲಕ ಆಸ್ತಿ ದಾಖಲೆಗಳನ್ನು ಪಡೆಯಬಹುದಾಗಿದೆ. ಈ ತಂತ್ರಾಂಶದ ಅತ್ಯಂತ ಮಹತ್ವದ ಬದಲಾವಣೆ ಎಂದರೆ 'ಸ್ವಯಂಚಾಲಿತ ಅನುಮೋದನೆ'. ಇ-ಸ್ವತ್ತು ನಮೂನೆಗಳನ್ನು ಪಡೆಯಲು ಒಂದು ನಿರ್ದಿಷ್ಟ ಕಾಲಮಿತಿಯನ್ನು ನಿಗದಿಪಡಿಸಲಾಗುತ್ತದೆ. ಒಂದು ವೇಳೆ ಸಂಬಂಧಪಟ್ಟ ಅಧಿಕಾರಿಗಳು ಈ ನಿಗದಿತ ಅವಧಿಯೊಳಗೆ ಅನುಮೋದನೆ ನೀಡದಿದ್ದಲ್ಲಿ, ತಂತ್ರಾಂಶವು ತಾನಾಗಿಯೇ ಸ್ವಯಂಚಾಲಿತವಾಗಿ ಅನುಮೋದನೆ ನೀಡಲಿದೆ. ಇದು ಅನಗತ್ಯ ವಿಳಂಬ ಮತ್ತು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲಿದೆ.

## ನಗರ ಸ್ಥಳೀಯ ಸಂಸ್ಥೆಗಳ 10 ಲಕ್ಷ ಅನಧಿಕೃತ ಕಟ್ಟಡ, ಎ-ಖಾತಾ!

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರ ಅನುಮೋದನೆ ಪಡೆಯದೆ ರಚಿಸಿರುವ ಬಡಾವಣೆಗಳಲ್ಲಿ ಬಿ ಖಾತಾ ನಿವೇಶನ, ಕಟ್ಟಡ, ಅಪಾರ್ಟ್ಮೆಂಟ್ ಹಾಗೂ ಫ್ಲಾಟ್‌ಗಳಿಗೆ ಎ ಖಾತಾ ನೀಡಲು ಸಂಪುಟ ಒಪ್ಪಿಗೆ ನೀಡಿದೆ. ಈ ಮೂಲಕ ರಾಜ್ಯದ ಜನರಿಗೆ ಗುಡ್ ನ್ಯೂಸ್ ನೀಡಿದೆ. ಗುರುವಾರ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ನಿರ್ಧಾರದಿಂದ ಸುಮಾರು 10 ಲಕ್ಷ ಆಸ್ತಿಗಳ ಒಡೆತನ ಹೊಂದಿದವರಿಗೆ ಅನುಕೂಲ ಆಗಲಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮಾದರಿಯಲ್ಲಿ ನಿಯಮ ರೂಪಿಸಲು ನಿರ್ಧಾರ ಮಾಡಲಾಗಿದೆ.

## ಬಿಜೆಪಿಯಲ್ಲೀಗ ಏಕವ್ಯಕ್ತಿ ವ್ಯವಸ್ಥೆ ಇಲ್ಲ: ಸದಾನಂದ ಗೌಡ

• **ಉದಯವಾಹಿನಿ, ಬೆಂಗಳೂರು**

ಬಿಜೆಪಿಯಲ್ಲಿ ಏಕ ವ್ಯಕ್ತಿ ವ್ಯವಸ್ಥೆ ಇಲ್ಲ, ಪಕ್ಷದ ಪ್ರಮುಖರ ಸಭೆಯಲ್ಲೇ ಎಲ್ಲವನ್ನೂ ತೀರ್ಮಾನ ಮಾಡಲಾಗುತ್ತದೆ. ಸಣ್ಣಪುಟ್ಟ ಸಮಸ್ಯೆ, ವೈಮನಸ್ಸುಗಳನ್ನು ಸರಿಮಾಡಿಕೊಂಡು ಪಕ್ಷವನ್ನು ಬಲಪಡಿಸುತ್ತೇವೆ' ಎಂದು ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪ್ರತಿ ಜಿಲ್ಲೆಯ ಪ್ರಮುಖ ಕಾರ್ಯಕರ್ತರ ಜತೆ ಎರಡು ಗಂಟೆ ಸಭೆ ನಡೆಸಲಾಗುತ್ತಿದೆ. ವಿಧಾನಸಭೆಯ ಎರಡು ಕ್ಷೇತ್ರಗಳ ಉಪಚುನಾವಣೆ, ವಿಧಾನಪರಿಷತ್, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಗಳಿಗೆ ಪಕ್ಷವನ್ನು ಸಜ್ಜು ಮಾಡಲಾಗುತ್ತಿದೆ. ರಾಜ್ಯ ರಾಜಕೀಯದಲ್ಲಿ ಹೊಸ ಅಧ್ಯಾಯಕ್ಕೆ ನಾಂದಿ ಹಾಡುತ್ತೇವೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಜನರಿಗೆ ಸಮಾಧಾನ ತಂದಿಲ್ಲ. ರಾಜ್ಯದ ಅಭಿವೃದ್ಧಿಗೆ ಹಣ ಇಲ್ಲದಿದ್ದರೂ ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಹಣ ನೀಡಿದ್ದಾರೆ. ರಾಜ್ಯ ಸರ್ಕಾರದ ನಿರ್ಧಾರಗಳು, ಆಡಳಿತ ವೈಫಲ್ಯದ ವಿರುದ್ಧದ ಹೋರಾಟಕ್ಕೆ ಪಕ್ಷದ ಕಾರ್ಯಕರ್ತರನ್ನು ಸಜ್ಜುಗೊಳಿಸಲಾಗುವುದು. ಉದ್ಯೋಗ ಖಾತ್ರಿ ಅಪಪ್ರಚಾರದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುವುದು' ಎಂದು ಹೇಳಿದರು.

## ಪಂಚ ರಾಜ್ಯ ಚುನಾವಣೆ: ಕೈ ಹಿರಿಯ ವೀಕ್ಷಕರಾಗಿ ಡಿಕೆಶಿ, ಜಾರ್ಜ್

• **ಉದಯವಾಹಿನಿ, ನವದೆಹಲಿ**

ಈ ವರ್ಷ ಚುನಾವಣೆ ನಡೆಯಲಿರುವ ಐದು ರಾಜ್ಯಗಳಲ್ಲಿ ಚುನಾವಣಾ ಪ್ರಚಾರದ ಮೇಲ್ವಿಚಾರಣೆಗೆ ಹಿರಿಯ ವೀಕ್ಷಕರನ್ನು ಕಾಂಗ್ರೆಸ್ ಪಕ್ಷ ನೇಮಿಸಿದೆ.

ಪಕ್ಷದ ಅಭ್ಯರ್ಥಿಗಳ ಆಯ್ಕೆಗೆ ಸ್ಕ್ರೀನಿಂಗ್ ಕಮಿಟಿಗಳನ್ನು ರಚಿಸಿದ ಕೆಲವು ದಿನಗಳ ಬಳಿಕ ಈ ನೇಮಕಾತಿ ಹೊರಬಿದ್ದಿದೆ. ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಅಸ್ಸಾಂಗೆ ಹಾಗೂ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರನ್ನು ಕೇರಳಕ್ಕೆ ನಿಯೋಜಿಸಲಾಗಿದೆ. ಪಂಚ ರಾಜ್ಯಗಳಲ್ಲಿ ಏಪ್ರಿಲ್‌ನಲ್ಲಿ ಚುನಾವಣೆ ನಡೆಯುವ ಸಂಭವ ಇದೆ. ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಅಸ್ಸಾಂ ಸ್ಕ್ರೀನಿಂಗ್ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ ಬೆನ್ನಲ್ಲೇ ಛತ್ತೀಸಗಢದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್, ಡಿ.ಕೆ. ಶಿವಕುಮಾರ್, ಜಾರ್ಖಂಡ್ ಮಾಜಿ ಶಾಸಕ ಬಂಧು ಟಿರ್ಕಿ ಅವರಿಗೆ ಪ್ರಮುಖ ಹೊಣೆ ವಹಿಸಲಾಗಿದೆ. ಅಸ್ಸಾಂನಲ್ಲಿ ಹತ್ತು ವರ್ಷಗಳಿಂದ ಬಿಜೆಪಿ ಅಧಿಕಾರದಲ್ಲಿದೆ. ಈಶಾನ್ಯ ರಾಜ್ಯದಲ್ಲಿ ಬಿಜೆಪಿ ಓಟಕ್ಕೆ ಕಡಿವಾಣ ಹಾಕಲು ಅಸ್ಸಾಂನತ್ತ ಕಾಂಗ್ರೆಸ್ ನಾಯಕತ್ವವು ಗಮನಹರಿಸುತ್ತಿದೆ.

**ಭಾರತದ ಮೇಲೆ 500% ಸುಂಕ ವಿಧಿಸಲು ಅಧಿಕಾರ ನೀಡುವ ಮಸೂದೆಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನುಮತಿ ನೀಡಿದ್ದಾರೆ. ಈ ಮಸೂದೆ ಸೆನೆಟ್‌ನಲ್ಲಿ ಅಂಗೀಕಾರವಾದರೆ ಆದರೆ ರಷ್ಯಾದ ತೈಲ ಅಥವಾ ಯುರೇನಿಯಂ ಅನ್ನು ಉದ್ದೇಶಪೂರ್ವಕವಾಗಿ ಖರೀದಿಸುವ ರಾಷ್ಟ್ರಗಳ ಮೇಲೆ 500% ರಷ್ಟು ಸುಂಕವನ್ನು ವಿಧಿಸಲು ಅಮೆರಿಕ ಅಧ್ಯಕ್ಷರಿಗೆ ಅಧಿಕಾರ ನೀಡುತ್ತದೆ.**

**ಭಾರೀ ಪ್ರಮಾಣದ ತೆರಿಗೆ ಮಸೂದೆಗೆ ಟ್ರಂಪ್ ಒಪ್ಪಿಗೆ**

**ಭಾರತದ ಮೇಲೆ 500% ಸುಂಕ..**

**ಸುಂಕ ಹೇರಿಕೆಯಿಂದ ಮೋದಿ ಸಂತಸದಿಂದಿಲ್ಲ**

# ಟ್ರಂಪ್‌ಗೆ ದುರಹಂಕಾರ

**ಉತ್ತಮ ಸಂಬಂಧ ಇದೆ**

## ತೆರಿಗೆ ಮಸೂದೆ ಅಂಗೀಕಾರ



**ವಾಷಿಂಗ್ಟನ್:** ರಷ್ಯಾವನ್ನು ಆರ್ಥಿಕವಾಗಿ ದುರ್ಬಲಗೊಳಿಸಲು ಈ ಮಸೂದೆಯನ್ನು ಅಮೆರಿಕ ಸಿದ್ಧಪಡಿಸಿದೆ. ಮಸೂದೆ ಅಂಗೀಕಾರವಾಗದರೆ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವ ಭಾರತ, ಚೀನಾ, ಬ್ರೆಜಿಲ್ ಮೇಲೆ ಅಮೆರಿಕ ಭಾರೀ ಪ್ರಮಾಣದ ತೆರಿಗೆ ವಿಧಿಸುವ ಸಾಧ್ಯತೆಯಿದೆ.

ರಿಪಬ್ಲಿಕನ್ ಪಕ್ಷದ ಸೆನೆಟರ್ ಗ್ರಹಾಂ ಬಿಲ್ ಈ ಮಸೂದೆಯ ಬಗ್ಗೆ ಟ್ರಂಪ್ ಜೊತೆ ಸಭೆ ನಡೆಸಿದ್ದಾರೆ. ಸಭೆಯ ಬಳಿಕ ಪೋಸ್ಟ್ ಮಾಡಿದ ಅವರು, ವಿವಿಧ ವಿಷಯಗಳ ಕುರಿತು ಟ್ರಂಪ್ ಅವರೊಂದಿಗೆ ಸಭೆ ನಡೆಸಲಾಗಿದೆ. ಈ ಸಂದರ್ಭದಲ್ಲಿ ದ್ವಿಪಕ್ಷೀಯ ರಷ್ಯಾ ನಿರ್ಬಂಧ ಮಸೂದೆ ಮಂಡಿಸಲು ಅವರು ಹಸಿರು ನಿಶಾನೆ ನೀಡಿದ್ದಾರೆ ಎಂದು ಹೇಳಿದರು. ಈ ಮಸೂದೆಯು ಚೀನಾ, ಭಾರತ ಮತ್ತು ಬ್ರೆಜಿಲ್‌ನಂತಹ ದೇಶಗಳ ವಿರುದ್ಧ ಅಧ್ಯಕ್ಷ ಟ್ರಂಪ್‌ಗೆ ಭಾರೀ ಪ್ರಮಾಣದ ತೆರಿಗೆ ವಿಧಿಸಲು ಅನುಮತಿ ನೀಡುತ್ತದೆ. ತೈಲವನ್ನು ಖರೀದಿಸುವ ಮೂಲಕ ಉಕ್ರೇನ್ ವಿರುದ್ಧದ ಪುಟಿನ್ ರಕ್ತಪಾತಕ್ಕೆ ಹಣಕಾಸು ಒದಗಿಸುತ್ತದೆ. ಮುಂದಿನ ವಾರದ ಆರಂಭದಲ್ಲಿ ನಡೆಯುತ್ತಿರುವ ಮತದಾನಕ್ಕೆ ನಾನು ಎದುರು ನೋಡುತ್ತಿದ್ದೇನೆ ಎಂದು ಗ್ರಹಾಂ ಬಿಲ್ ಬರೆದುಕೊಂಡಿದ್ದಾರೆ.

ಅಧಿಕಾರಕ್ಕೆ ಬರುವ ಮೊದಲೇ ಟ್ರಂಪ್ ಅವರು ರಷ್ಯಾ ಉಕ್ರೇನ್ ಯುದ್ಧವನ್ನು ನಿಲ್ಲಿಸುತ್ತೇನೆ ಎಂದು ಆಶ್ವಾಸನೆ ನೀಡಿದ್ದರು. ಆದರೆ ಇಲ್ಲಿಯವರೆಗೆ ಹಲವು ಸುತ್ತಿನ ಮಾತುಕತೆ ನಡೆದರೂ ಯುದ್ಧ ಮಾತ್ರ ನಿಲ್ಲುತ್ತಿಲ್ಲ. ಈಗ ಯುದ್ಧ ನಿಲ್ಲಿಸಲು ಟ್ರಂಪ್ ರಷ್ಯಾ ಮಿತ್ರ ದೇಶಗಳ ಮೇಲೆ ತೆರಿಗೆ ಬೆದರಿಕೆ ಹಾಕಲು ಮುಂದಾಗಿದ್ದಾರೆ. ಟ್ರಂಪ್ ಅಧಿಕಾರಕ್ಕೆ ಏರಿದ ಆರಂಭದಲ್ಲಿ ಭಾರತದಿಂದ ಅಮೆರಿಕಕ್ಕೆ ಆಮದಾಗುವ ವಸ್ತುಗಳ ಮೇಲೆ 25% ಸುಂಕ ವಿಧಿಸಿದ್ದರು. ಬಳಿಕ ರಷ್ಯಾದಿಂದ ಕಚ್ಚಾ ತೈಲವನ್ನು ಆಮದು ಮಾಡುತ್ತಿರುವುದಕ್ಕೆ ಪ್ರತಿಯಾಗಿ 25% ದಂಡದ ರೂಪದಲ್ಲಿ ಸುಂಕ ಹೇರಿದ್ದಾರೆ. ಈ ನಿರ್ಧಾರದಿಂದ ಭಾರತದ ಕೆಲವು ವಸ್ತುಗಳಿಗೆ ಈಗ 50% ಸುಂಕ ಹೇರಲಾಗಿದೆ. ಭಾರತ ಮತ್ತು ಅಮೆರಿಕದ ಮಧ್ಯೆ ವ್ಯಾಪಾರ ಒಪ್ಪಂದ ಮಾತುಕತೆ ನಡೆಯುತ್ತಿದ್ದರೂ ಇಲ್ಲಿಯವರಗೆ ಯಾವುದೇ ಸಹಿ ಬಿದ್ದಿಲ್ಲ. ಅಮೆರಿಕ ಡೈರಿ ಮತ್ತು ಕೃಷಿ ಉತ್ಪನ್ನಗಳನ್ನು ಭಾರತದಲ್ಲಿ ಮಾರಾಟ ಮಾಡಲು ಅನುಮತಿ ನೀಡಬೇಕೆಂದು ಬೇಡಿಕೆ ಇರಿಸಿದೆ. ಆದರೆ ಕೇಂದ್ರ ಸರ್ಕಾರ ಈ ಬೇಡಿಕೆಗೆ ಒಪ್ಪಿಗೆ ನೀಡದ ಕಾರಣ ಮಾತುಕತೆ ನಡೆಯುತ್ತಲೇ ಇದೆ.

ಸುಂಕ ಹೇರಿಕೆ ವಿಚಾರ ಸುಪ್ರೀಂನಲ್ಲಿದೆ ಎಂದ ಟ್ರಂಪ್: ರಕ್ಷಣಾ ಸಿದ್ಧತೆಯಿಂದ ಬೇರ್ಪಡಿಸಲಾಗದಂತೆ ಅವರು ವ್ಯಾಪಾರ ನೀತಿಯನ್ನು ರೂಪಿಸಿದರು. ಸುಂಕಗಳ ಕಾರಣದಿಂದಾಗಿ ನಮಗೆ ರಾಷ್ಟ್ರೀಯ ಭದ್ರತೆ ಸಿಕ್ಕಿದೆ ಎಂದು ಟ್ರಂಪ್ ಹೇಳಿದ್ದಾರೆ. ಈ ವಿಷಯವು ಇದೀಗ ಸುಪ್ರೀಂ ಕೋರ್ಟ್‌ನಲ್ಲಿದೆ ಎಂದೂ ಟ್ರಂಪ್ ಹೇಳಿದ್ದಾರೆ. ಹಿಂದಿನ ಆಡಳಿತಗಳು ಜಗತ್ತಿಗೆ ಸಬ್ಸಿಡಿ ನೀಡಿದ್ದವು ಎಂದು ಟ್ರಂಪ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**1** ಭಾರತ ಹಾಗೂ ಚೀನಾ ಮೇಲೆ ಬರೋಬ್ಬರಿ ಶೇ.500% ಸುಂಕ ವಿಧಿಸುವ ಮಸೂದಗೆ ಟ್ರಂಪ್ ಒಪ್ಪಿಗೆ

**2** ರಷ್ಯಾದಿಂದ ತೈಲ ಖರೀದಿಸುವ ದೇಶಗಳನ್ನು ಮಟ್ಟಹಾಕಲು ಟ್ರಂಪ್ ಪ್ಲ್ಯಾನ್, ಮುಂದಿನವಾರ ಮಸೂದೆ ಅಂಗೀಕಾರಕ್ಕೆ ಮತದಾನ ಸಾಧ್ಯತೆ

**3** ಟ್ರಂಪ್ ಮಾಸ್ಟರ್ ಸ್ಟ್ರೋಕ್‌ಗೆ ಭಾರತ ಹಾಗೂ ಚೀನಾ ಪ್ರತಿಕ್ರಿಯೆ ಏನಾಗಿರಲಿದೆ



**ಬರೋಬ್ಬರಿ 500% ಸುಂಕದ ಬರೆ**

ಈ ಮಸೂದೆಯು ಪ್ರಕಾರ ರಷ್ಯಾದಿಂದ ತೈಲ ಖರೀದಿ ನಡೆಸುವ ದೇಶಗಳ ಮೇಲೆ ಬರೋಬ್ಬರಿ 500% ಸುಂಕ ವಿಧಿಸಲಾಗುತ್ತದೆ ಎಂದು ವರದಿಯಾಗಿದೆ. ಇನ್ನು, ಇದರ ಪರಿಣಾಮ ಹೆಚ್ಚಾಗಿ ಚೀನಾ ಹಾಗೂ ಭಾರತದ ಮೇಲೆ ಬೀಳಲಿದೆ. ಇದಕ್ಕೆ ಕಾರಣ ಚೀನಾ ರಷ್ಯಾದ ತೈಲ ಖರೀದಿಯಲ್ಲಿ ನ.1 ಸ್ಥಾನದಲ್ಲಿದ್ದರೆ, ಭಾರತ ಎರಡನೇ ಸ್ಥಾನದಲ್ಲಿದೆ. ಈಗಾಗಲೇ ಟ್ರಂಪ್ ಭಾರತದಿಂದ ಅಮೆರಿಕಾ ಆಮದು ಮಾಡಿಕೊಳ್ಳುವ ಉತ್ಪನ್ನಗಳ ಮೇಲೆ 25% ಸುಂಕ ವಿಧಿಸುವುದರ ಜೊತೆಗೆ, ರಷ್ಯಾದಿಂದ ಭಾರತ ಹೆಚ್ಚಾಗಿ ತೈಲ ಖರೀದಿ ಮಾಡುತ್ತಿದೆ ಎಂಬ ಆರೋಪಿಸಿ ಹೆಚ್ಚುವರಿ 25% ಸುಂಕ ವಿಧಿಸುವ ಮೂಲಕ ಭಾರತದ ಉತ್ಪನ್ನಗಳ ಮೇಲೆ ಬರೋಬ್ಬರಿ ಶೇ.50% ಸುಂಕ ವಿಧಿಸಿದ್ದಾರೆ.

**ರಷ್ಯಾದಿಂದ ತೈಲ ಖರೀದಿ ಮಾಡುವ ದೇಶಗಳಿಗೆ ಅಮೆರಿಕಾ ಶಾಕ್!**

ಈ ಕುರಿತು ತಮ್ಮ ಅಧಿಕೃತ x ಖಾತೆಯಲ್ಲಿ ಬರೆದುಕೊಂಡಿರುವ ಸೌತ್ ಕ್ಯಾರೊಲಿನಾದ ರಿಪಬ್ಲಿಕನ್ ಸೆನೆಟರ್ ಲಿಂಡ್ಸೆ ಗ್ರಹಾಂ ಈ ಮಸೂದೆಯ ಬಗ್ಗೆ ಅಧ್ಯಕ್ಷ ಟ್ರಂಪ್ ಅವರೊಂದಿಗೆ ಮಾತುಕತೆ ನಡೆಸಿದ್ದು, ಅವರು ಇದಕ್ಕೆ ಒಪ್ಪಿಗೆ ಸೂಚಿಸಿದ್ದು, ಮುಂದಿನ ವಾರದಲ್ಲಿ ನಡೆಯುವ ಸಭೆಯಲ್ಲಿ ಈ ಬಗ್ಗೆ ವೋಟಿಂಗ್ ಮಾಡುವ ಮೂಲಕ ಅನುಷ್ಠಾನ ಮಾಡುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ.

**ಭಾರತ ಹಾಗೂ ಚೀನಾ ಮೇಲೆ ಪರಿಣಾಮ**

ಈ ಮಸೂದೆಯು ಭಾರತ, ಚೀನಾ ಮತ್ತು ಬ್ರೆಜಿಲ್ ನಂತಹ ದೇಶಗಳ ಮೇಲೆ ಪರಿಣಾಮ ಬೀಳಲಿದ್ದು, ರಷ್ಯಾದ ಯುದ್ಧಕ್ಕೆ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಗೆ ಈ ದೇಶಗಳಿಂದ ಹಣಕಾಸು ಸಿಗುತ್ತಿದೆ. ಹಾಗಾಗಿ ಈ ದೇಶಗಳ ವಿರುದ್ಧ ಟ್ರಂಪ್ ಕ್ರಮಕ್ಕೆ ಮುಂದಾಗಲಿದ್ದು, ಈ ಮೂಲಕ ರಷ್ಯಾದ ತೈಲ ಖರೀದಿಸುವುದನ್ನು ನಿಲ್ಲಿಸುವಂತೆ ಮಾಡಲು ಸಹಕಾರಿಯಾಗಲಿದೆ ಎಂದು ಗ್ರಾಹಂ ಬರೆದುಕೊಂಡಿದ್ದಾರೆ.ಅಷ್ಟೇ ಅಲ್ಲದೆ, ಈ ನಿರ್ಧಾರ ಸರಿಯಾದ ಸಮಯಕ್ಕೆ ಬಂದಿದ್ದು, ಉಕ್ರೇನ್ ಶಾಂತಿಗೆ ಒಪ್ಪಂದ ಮಾಡಿಕೊಳ್ಳುತ್ತಿದೆ. ಆದರೆ ಪುಟಿನ್ ಸುಮ್ಮನೆ ಮಾತನಾಡುತ್ತಾ ಅಮಾಯಕರನ್ನು ಕೊಲ್ಲುತ್ತಿದ್ದಾರೆ. ಆದರೆ, ಯುದ್ಧ ಯಂತ್ರಕ್ಕೆ ಇಂಧನ ನೀಡುವಂತೆ ರಷ್ಯಾದ ಅಗ್ಗದ ತೈಲ ಖರೀದಿಸುವ ದೇಶಗಳನ್ನು ಶಿಕ್ಷಿಸಲು ಈ ಮಸೂದೆ ಟ್ರಂಪ್ ಅವರಿಗೆ ಅವಕಾಶ ನೀಡಲಿದೆ.

## ಸಂಘದಿಂದ ಸಾಲದ ಬಗ್ಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಹತ್ವದ ಮಾಹಿತಿ

• **ಉದಯವಾಹಿನಿ, ಬೆಂಗಳೂರು**

ಹಣಕಾಸು ಇಲಾಖೆಯವರು ಅನುಮತಿ ನೀಡಿದ ತಕ್ಷಣವೇ 2025ರ ಫೆಬ್ರವರಿ ಹಾಗೂ ಮಾರ್ಚ್ ತಿಂಗಳ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.




ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಈ ಎರಡು ತಿಂಗಳ ಗೃಹಲಕ್ಷ್ಮಿ ಯೋಜನೆ ಹಣ ಬಿಡುಗಡೆ ಕುರಿತಂತೆ ಈಗಾಗಲೇ ಮುಖ್ಯಮಂತ್ರಿಗಳ ಬಳಿ ಮಾತನಾಡಿದ್ದು, ಈ ಬಗ್ಗೆ ಮುಖ್ಯಮಂತ್ರಿಗಳು ಕೂಡ ಸದನದಲ್ಲಿ ಉತ್ತರ ಕೊಟ್ಟಿದ್ದಾರೆ ಎಂದರು.

**ಹಣ ಬಿಡುಗಡೆಯಾಗದಿರುವುದಕ್ಕೆ ಕಾರಣ ಹೇಳಿದ ಸಚಿವೆ**

ಅನರ್ಹ ರೇಷನ್ ಕಾರ್ಡ್ ರದ್ದಾಗಿರುವ ಕಾರಣ ಕೆಲವರಿಗೆ ಹಣ ಸಂದಾಯವಾಗಿಲ್ಲ.

ಆಹಾರ ಇಲಾಖೆಯಿಂದ ಹೊಸ ಡೇಟಾ ಬಂದ ತಕ್ಷಣ ಅವರಿಗೂ ದುಡ್ಡು ರಿಲೀಸ್ ಆಗಲಿದೆ. ರೇಷನ್ ಕಾರ್ಡ್ ಆಧರಿಸಿ ನಾವು ಗೃಹಲಕ್ಷ್ಮಿ ಫಲಾನುಭವಿಗಳಿಗೆ ದುಡ್ಡು ಹಾಕುತ್ತಿದ್ದೇವೆ. ಕೆಲ ರೇಷನ್ ಕಾರ್ಡ್ ರದ್ದಾದಾಗ ದುಡ್ಡು ಹೋಲ್ಡ್ ಆಗಿರಬಹುದು. ಆದರೆ ಅವರು ತೆರಿಗೆ ಪಾವತಿದಾರರಲ್ಲದಿದ್ದಲ್ಲಿ ಹಣ ಸಿಗಲಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

**ಗೃಹಲಕ್ಷ್ಮಿ ಸಂಘಕ್ಕೆ ಪ್ರತಿ ತಿಂಗಳು 200 ರೂಪಾಯಿ ಹಣ**

ಗೃಹಲಕ್ಷ್ಮಿ ಸಹಕಾರ ಸಂಘಕ್ಕೆ ಸದಸ್ಯರಾದವರು ಪ್ರತಿ ತಿಂಗಳು 200 ರೂಪಾಯಿ ಹಣ ಕಟ್ಟಿಕೊಂಡು ಹೋಗಬೇಕು, 6 ತಿಂಗಳು ಆದ ಬಳಿಕ ಸಾಲ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ. ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದ್ದು, ಹೆಚ್ಚು ಕಂಡೀಷನ್‌ಗಳನ್ನು ಹಾಕದೇ ಅರ್ಹರನ್ನು ಗುರುತಿಸಿ ಸಾಲ ನೀಡಲಾಗುವುದು. ಜೊತೆಗೆ ಆರೋಗ್ಯ ವಿಮೆಯನ್ನು ನೀಡುವ ಯೋಚನೆ ಇದೆ ಎಂದು ಸಚಿವರು ಹೇಳಿದರು.



**ಗೃಹಲಕ್ಷ್ಮಿ ಯೋಜನೆ 2 ತಿಂಗಳ ಬಾಕಿ ಹಣ**

ನಮ್ಮ ಇಲಾಖೆ ಹಾಗೂ ಗೃಹ ಇಲಾಖೆ ಸಹಯೋಗದಲ್ಲಿ ಅಕ್ಕ ಪಡೆ ಆರಂಭಿಸಲಾಗಿದೆ. ಬಹಳಷ್ಟು ಮಹಾತ್ವಾಕಾಂಕ್ಷಿ ಇಟ್ಟುಕೊಂಡು ಅಕ್ಕಪಡೆ ಆರಂಭಿಸಲಾಗಿದೆ. ಈಗಾಗಲೇ ಸಿಬ್ಬಂದಿ ನೇಮಿಸಿದ್ದು, ಅವರಿಗೆ ತರಬೇತಿ ನೀಡಲಾಗುತ್ತಿದೆ.

ಬಸ್ ಸ್ಟಾಪ್, ದೇವಸ್ಥಾನ, ಮಾಲ್‌ಗಳಲ್ಲಿ, ಪಾರ್ಕ್‌ಗಳಲ್ಲಿ ಅಕ್ಕ ಪಡೆ ಗಸ್ತು ತಿರುಗಲಿದೆ ಎಂದು ಸಚಿವರು ಹೇಳಿದರು.

ಅಕ್ಕಪಡೆ ಸ್ಕೂಲ್, ಕಾಲೇಜುಗಳಿಗೂ ಹೋಗಿ ಜಾಗೃತಿ ಮೂಡಿಸುವ ಕೆಲಸ ಮಾಡಲಿದ್ದು, ದೂರು ಕೊಡಲು ಅಂಜುವ ಹೆಣ್ಣುಮಕ್ಕಳ ಹೆಸರನ್ನು ಗೌಪ್ಯವಾಗಿ ಇಡಲಾಗುವುದು. ಅಕ್ಕಪಡೆ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ನಡೆಸಲಾಗಿದೆ, ಸಾಮಾಜಿಕ ಜಾಲತಾಣಗಳಲ್ಲಿ ವಂಚನೆಗೊಳಗಾದ ಮಹಿಳೆಯರು, ಕೌಟುಂಬಿಕ ಸಮಸ್ಯೆ ಎದುರಿಸುತ್ತಿರುವ ಹೆಣ್ಣುಮಕ್ಕಳು ಸಹ ದೂರು ನೀಡಬಹುದು ಎಂದು ಹೇಳಿದರು.

ಹುಬ್ಬಳ್ಳಿಯಲ್ಲಿ ಮಹಿಳೆ ವಿವಸ್ತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಸಚಿವರು, ಯಾರೇ ತಪ್ಪು ಮಾಡಿರಲಿ, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ ಎಂಬುದೇ ನನ್ನ ಕೋರಿಕೆ ಎಂದರು.

## ಮನರೇಗಾ ರದ್ದತಿ ವಿರೋಧಿಸಿ ಸಚಿವ ಸಂಪುಟ ಸಭೆಯಲ್ಲಿ 5 ನಿರ್ಣಯಗಳು

### ■ ವಿಬಿಜಿ ರಾಮ್ ಜಿ ಕಾಯಿದೆ ಅಂಗೀಕರಿಸದಿರಲು ರಾಜ್ಯ ಸಚಿವ ಸಂಪುಟ ತೀರ್ಮಾನ

• **ಉದಯವಾಹಿನಿ, ಬೆಂಗಳೂರು**

ಮನರೇಗಾ ಕಾಯ್ದೆ ರದ್ದತಿ ವಿರುದ್ಧ 5 ನಿರ್ಣಯಗಳನ್ನು ಸಿಎಂ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಸಭೆ ಕೈಗೊಂಡಿದೆ. ಗುರುವಾರ ನಡೆದ ಸಂಪುಟ ಸಭೆಯಲ್ಲಿ ಮನರೇಗಾ ರದ್ದು ಹಾಗೂ ವಿಬಿ ಜಿ ರಾಮ್ ಜಿ ಕುರಿತಾಗಿ ಸುದೀರ್ಘ ಚರ್ಚೆ ನಡೆದಿದೆ.

ಮನರೇಗಾ ಕಾಯಿದೆಯನ್ನು ರದ್ದುಪಡಿಸುವುದು ಮತ್ತು ವಿಬಿ ಜಿ ರಾಮ್ ಜಿ ಕಾಯಿದೆಯನ್ನು ಅನುಷ್ಠಾನಗೊಳಿಸುತ್ತಿರುವುದು ರಾಜ್ಯ ಮತ್ತು ರಾಜ್ಯದ ಜನತೆಯ ಮೇಲೆ ಆಗುವ ಪರಿಣಾಮಗಳ ಕುರಿತು ಸಚಿವ ಸಂಪುಟವು ಚರ್ಚಿಸಿದೆ. ಅಲ್ಲದೆ ಸಚಿವ ಸಂಪುಟವು ಅಡ್ವೊಕೇಟ್ ಜನರಲ್ ಅವರೊಂದಿಗೆ ಸಮಾಲೋಚನೆ ನಡೆಸಿದೆ. ಜಿ ರಾಮ್ ಜಿ ಯೋಜನೆಗೆ ರಾಜ್ಯ ಸಚಿವ ಸಂಪುಟ ವಿರೋಧ ವ್ಯಕ್ತಪಡಿಸಿದೆ.

**ಕೇಂದ್ರದ ವಿರುದ್ಧ ಸಮರಕ್ಕೆ ಸಿದ್ಧತೆ!**

ವಿಬಿ ಜಿ ರಾಮ್ ಜಿ ಕಾಯಿದೆಯ ಸಾಂವಿಧಾನಿಕ ಮತ್ತು ಕಾನೂನು ಪರಿಣಾಮಗಳ ಕುರಿತು, ಕಾಯಿದೆಯ ವಿವಿಧ ನಿಬಂಧನೆಗಳ ಕುರಿತು ವಿವರವಾದ ಚರ್ಚೆ ನಡೆಸಿ, ಈ ಕಾಯಿದೆಯನ್ನು ಅಂಗೀಕರಿಸದಿರಲು ಸರ್ವಾನುಮತದಿಂದ ನಿರ್ಧರಿಸಲಾಗಿದೆ

ಅದರಂತೆ ಈ ಕೆಳಗಿನ ಆಧಾರದ ಮೇಲೆ ವಿಬಿ ಜಿ ರಾಮ್ ಜಿ ಕಾಯಿದೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ನಿರ್ಧಾರ ಮಾಡಲಾಗಿದೆ.



**ಐದು ನಿರ್ಣಯಗಳು ಏನೇನು**

- ಕಾಯಿದೆಯು ಭಾರತದ ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಪ್ರತಿಪಾದಿಸಲ್ಪಟ್ಟಿರುವಂತೆ ಉದ್ಯೋಗದ ಹಕ್ಕು ಮತ್ತು ನಾಗರಿಕರ ಜೀವನೋಪಾಯದ ಉಲ್ಲಂಘನೆಯಾಗಿದೆ.
- ಈ ಕಾಯಿದೆಯು ಪಂಚಾಯತ್‌ಗಳ ನ್ಯಾಯಸಮ್ಮತ ಹಕ್ಕುಗಳನ್ನು ಸಂವಿಧಾನದಿಂದ ಪಡೆದುಕೊಂಡಿದ್ದು, ಸಂವಿಧಾನದ 73 ಮತ್ತು 74 ನೇ ತಿದ್ದುಪಡಿಯ ಮನೋಭಾವಕ್ಕೆ ವಿರುದ್ಧವಾಗಿದೆ. ಸ್ಥಳೀಯ ಅವಶ್ಯಕತೆಗಳ ಪ್ರಕಾರ ತಳಮಟ್ಟದ ಯೋಜನಾ ವಿಧಾನದಲ್ಲಿ ರಾಜಿ ಮಾಡಿಕೊಳ್ಳಲಾಗಿದೆ.
- ಸಮಾಲೋಚನಾ ಪ್ರಕ್ರಿಯೆಯಿಂದ ರಾಜ್ಯಗಳನ್ನು ಸಂಪೂರ್ಣವಾಗಿ ಹೊರಗಿಡುವುದು ಮಾತ್ರವಲ್ಲದೆ ರಾಜ್ಯಗಳು 40% ಮೊತ್ತವನ್ನು ಭರಿಸಬೇಕೆಂದು ನಿರೀಕ್ಷಿಸುವ ಮೂಲಕ ಈ ಕಾಯಿದೆಯು ಒಕ್ಕೂಟ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ, ಮತ್ತು ರಾಜ್ಯಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಕಪಕ್ಷೀಯವಾಗಿ ಕೇಂದ್ರವು ನಿರ್ಧರಿಸಿದ ನಿಯಮಗಳು ಮತ್ತು ಷರತ್ತುಗಳನ್ನು ನಿರ್ಧರಿಸಿದೆ.
- ವಿಬಿ ಜಿ ರಾಮ್ ಜಿ ಕಾಯಿದೆ ಅನುಷ್ಠಾನ ಗ್ರಾಮೀಣ ಜನರ ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳ ಗಂಭೀರ ಉಲ್ಲಂಘನೆಯಾಗಿದೆ, ಒಂದೆಡೆ ಕೇಂದ್ರ ಸರ್ಕಾರವು ಸೂಚಿಸಿದ ಪ್ರದೇಶಗಳಲ್ಲಿ ಮಾತ್ರ ಕೆಲಸಗಳು ಲಭ್ಯವಿರುತ್ತವೆ ಮತ್ತು ಇನ್ನೊಂದೆಡೆ ರಾಜ್ಯ ಸರ್ಕಾರಗಳು ನಿಗದಿಪಡಿಸಿದ ಕನಿಷ್ಠ ವೇತನಕ್ಕೆ ಯಾವುದೇ ಖಾತರಿಯಿಲ್ಲದೆ ಕೇಂದ್ರವು ನಿಗದಿಪಡಿಸಿದ ದರದಲ್ಲಿ ವೇತನ ಲಭ್ಯವಿರುತ್ತದೆ.
- ಈ ಕಾಯಿದೆಯು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಕಲ್ಪಿಸಿದ ಗ್ರಾಮ ಸ್ವರಾಜ್‌ನ ಸ್ಫೂರ್ತಿಯನ್ನು ಸೋಲಿಸುತ್ತದೆ, ಏಕೆಂದರೆ ಪಂಚಾಯತ್‌ಗಳಿಗೆ ಸ್ಥಳೀಯ ಅವಶ್ಯಕತೆಗಳಿಗೆ ಅಥವಾ ಕಾಮಗಾರಿಗಳ ಆದ್ಯತೆಗೆ ಅನುಗುಣವಾಗಿ ಕೆಲಸಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವಿಲ್ಲ, ಆದರೆ ಕೇಂದ್ರ ಸರ್ಕಾರವು ನಿರ್ಧರಿಸುವ ಪ್ರಮಾಣಿತ ಹಂಚಿಕೆಗೆ ಸೀಮಿತವಾಗಿರುತ್ತದೆ.




ಹೀಗಾಗಿ ಮನರೇಗಾ ಯೋಜನೆಯ ಕಾಯ್ದೆಯ ಸಿಂಧುತ್ವವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಮತ್ತು ವಿಶೇಷ ಗ್ರಾಮ ಸಭೆಗಳನ್ನು ನಡೆಸುವ ಮೂಲಕ ಕಾಯಿದೆಯ ದುಷ್ಪರಿಣಾಮಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಮೂಲಕ ಈ ಜನವಿರೋಧಿ ಕಾನೂನನ್ನು ಜನಸಾಮಾನ್ಯರ ನ್ಯಾಯಾಲಯಕ್ಕೆ ಕೊಂಡೊಯ್ಯಲು ಸಚಿವ ಸಂಪುಟ ನಿರ್ಧರಿಸಿದೆ.

**ಈ ದಿನದ ದರ** ಪೆಟ್ರೋಲ್: 103.81 ₹/L ಡೀಸೆಲ್ : 90.99 ₹/L ಬಂಗಾರ: ₹13,800/Gram24ct ₹12,650/Gram22ct ಬೆಳ್ಳಿ: ₹252.00/Gram

# ಕನ್ನಡ ನಾಡಿನ ಕಲೆ, ಸಂಸ್ಕೃತಿಯ ರಕ್ಷಣೆ, ಬೆಳವಣಿಗೆಯು ನಮ್ಮೆಲ್ಲರ ಜವಾಬ್ದಾರಿ: ಎಂ. ಜಯಕುಮಾರ್

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಇಂದಿನ ಆಧುನಿಕ ತಂತ್ರಜ್ಞಾನ ಯುಗದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಪರಂಪರೆಯು ಮರೆಯಾಗುತ್ತಿದ್ದು, ಅದನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಹಾಪ್ ಕಾಮ್ಸ್‌ನ ಮಾಜಿ ನಿರ್ದೇಶಕ, ಸಮಾಜಸೇವಕ ಎಂ.ಜಯಕುಮಾರ್ ಅಭಿಪ್ರಾಯಪಟ್ಟರು. ಅವರು ಕೆಂಗೇರಿ ಉಪನಗರದ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ರಂಗಪರಂಪರೆ ಟ್ರಸ್ಟ್, ಅಮರೇಶ್ವರ ವಿಜಯ ನಾಟಕ ಮಂಡಳಿ, ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾಸಂಘ ಕಲ್ಪತರು ಸಾಂಸ್ಕೃತಿಕ ಸಾಮಾಜಿಕ ಮತ್ತು ಕ್ರೀಡಾ ಟ್ರಸ್ಟ್‌ನ ಸಂಯುಕ್ತಾಶ್ರಯದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನಾಚರಣೆಯ ಅಂಗವಾಗಿ ಮೂರು ದಿನಗಳ ನಾಟಕೋತ್ಸವ ಪ್ರದರ್ಶನದಲ್ಲಿ ಭಾಗವಹಿಸಿ ಮಾತನಾಡಿದರು. ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘವು, ಕಳೆದ 40 ವರ್ಷಗಳಿಂದ ಪೌರಾಣಿಕ, ಜಾನಪದ, ಸಾಮಾಜಿಕ, ಹಾಸ್ಯ, ನಾಟಕ, ನೃತ್ಯ ಸಂಗೀತ ರಸಮಂಜರಿ ಸೇರಿದಂತೆ ಹಲವು ಪ್ರಕಾರಗಳ ಕನ್ನಡ ನಾಡು, ನುಡಿ, ಕಲೆಯನ್ನು ನಾಟಕ ರೂಪದಲ್ಲಿ ಸಿದ್ದಪಡಿಸಿ 600ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿರುವುದು ಶ್ಲಾಘನೀಯವಾದದು. ಇದರ ಜೊತೆಗೆ ಸಂಘದ ಕೇಂದ್ರದಿಂದ ವರ್ಷವಿಡೀ ಉಚಿತ ರಂಗ ತರಬೇತಿ ಕಾರ್ಯಗಾರಗಳನ್ನು ನಡೆಸುತ್ತಾ ಬರುತ್ತಿರುವುದು, ಶಾಲಾ-ಕಾಲೇಜುಗಳಲ್ಲಿ ರಂಗ ಶಿಕ್ಷಣದ ಕಲ್ಪನೆಯಲ್ಲಿ ಕನಿಷ್ಠ ಮೂರರಿಂದ ಆರು ತಿಂಗಳ ಅವಧಿಯ ಉಚಿತ ರಂಗ ತರಬೇತಿ ಕಾರ್ಯಗಳನ್ನು ಹಮ್ಮಿಕೊಂಡು ರಂಗಭೂಮಿಯ ಎಲ್ಲಾ ವಿಭಾಗಗಳ ಬಗ್ಗೆ ತರಬೇತಿ ನೀಡುತ್ತಾ ವಿದ್ಯಾರ್ಥಿಗಳಲ್ಲಿ, ಶಿಕ್ಷಕರಲ್ಲಿ ರಂಗಭೂಮಿಯ ಬಗ್ಗೆ ಅರಿವು, ಆಸಕ್ತಿಯನ್ನು ಮೂಡಿಸುತ್ತಾ ಬಂದಿರುವುದು ಪ್ರಶಂಸನೀಯವಾದದು ಎಂದರು.

**ಮೂರು ದಿನಗಳ ನಾಟಕೋತ್ಸವ**

ಇದೇ ವೇಳೆ ಸಾಲದ ಮಗು, ಶ್ರೀ ಮನ್ಮೋಕವಾಗಿತ್ತು, ಶ್ರೀಕೃಷ್ಣ ಸಂಧಾನ, ಸಾಮಾಜಿಕ ನಗೆ ನಾಟಕ 36 ಅಲ್ಲ 63 ಸಾಮಾಜಿಕ ನಾಟಕ, ಸಂಗೊಳ್ಳಿ ರಾಯಣ್ಣ ಐತಿಹಾಸಿಕ ನಾಟಕ ಹಾಗು ಜಲಗಾರ ನಾಟಕವನ್ನು ಪ್ರಸ್ತುತಪಡಿಸಲಾಯಿತು. ಕಾರ್ಯಕ್ರಮದಲ್ಲಿ ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾಸಂಘದ ಸಂಸ್ಥಾಪಕ ಕಾರ್ಯದರ್ಶಿ ಆಂಜನೇಯ, ರಂಗ ಸಂಘಟಕ ಧನ್ವಂತರಿ, ಗಣಪತಿಗೌಡ, ಡಿ, ವೆಂಕಟರಮಣಯ್ಯ, ಆನಂದರಾಜು ಅವರು ನಾಟಕ ನಿರ್ದೇಶನ ಮಾಡಿದರು, ಶಾಂತಲಾ ದೇವಿ,ಅಭಯ ಗಣಪತಿ ದೇವಸ್ಥಾನ ಟ್ರಸ್ಟ್‌ನ ಗೌರವಾಧ್ಯಕ್ಷ ಡಿ. ರಾಮಪ್ಪ, ಸೂಪರ್ ಫೋಟೋ ಡಿಜಿಟಲ್ ಕಲರ್ ಲ್ಯಾಬ್ ನ ಮಾಲೀಕ ಕಾಂತರಾಜು, ಸಮಾಜಸೇವಕರಾದ ಮಹೇಶ್ ಎಚ್.ಎನ್, ಪ್ರೊ.ಜಯರಾಮ್ ಹಿರಿಯ ಪತ್ರಕರ್ತರಾದ ಸುಧೀಂದ್ರ ರಾವ್, ವೆಂಕಟೇಶ್ ಪೈ, ರವಿ ವಿ. ಆರ್, ಪಿ ಆರ್ ಓ ಶಂಕರ್ ಎಸ್.ಎನ್, ಕಲಾವಿದೆ ಅನುಗೌಡ, ಪಾಲಿಕೆ ಮಾಜಿ ಸದಸ್ಯ ವಿ ವಿ ಸತ್ಯನಾರಾಯಣ ಸೇರಿದಂತೆ ನೂರಾರು ಕಲಾಸಕ್ತರು ನಾಟಕೋತ್ಸವದಲ್ಲಿ ಭಾಗವಹಿಸಿದ್ದರು.

## ಸಿದ್ದಸೂಕ್ತಿ



ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಹಿಂದುಧರ್ಮ ಬ್ರಾಹ್ಮಣಧರ್ಮವಲ್ಲ

ಕೆಲ ಲಿಂಗಾಯತರು ದಲಿತರು ನಾಸ್ತಿಕರು ವಿರೋಧಿಗಳು ಹಿಂದುಧರ್ಮ ಬ್ರಾಹ್ಮಣರ ಧರ್ಮ ನಮ್ಮದಲ್ಲ ಎನ್ನುವರು. ಅಸ್ಪೃಶ್ಯತೆ ತಾರತಮ್ಯ ಹಿಂದುಧರ್ಮಕ್ಕಂಟಿಸುವರು. ಈ ಆರೋಪ ನಡೆ ಸರಿಯಲ್ಲ. ಹಿಂದು ಬ್ರಾಹ್ಮಣಮಾತ್ರನಲ್ಲ. ಹತ್ತಾರು ಸಾವಿರ ವರ್ಷಗಳಾಚೆ ಗುಣಕರ್ಮಗಳಡಿ ಹಿಂದು ಬ್ರಾಹ್ಮಣನೊಂದಿಗೆ ಕ್ಷತ್ರಿಯ ವೈಶ್ಯ ಶೂದ್ರನೂ ಸೇರುತ್ತಾನೆ. ಸಮಾನತೆಯ ಸಂವಿಧಾನದಡಿಯಲ್ಲೂ ಉಂಟು ಮೇಲಾಧಿಕಾರಿ ಮುಖ್ಯ ಸಹಾಯಕ ಸರ್ವೋಚ್ಚ ಪ್ರಥಮದರ್ಜೆ ದ್ವಿತೀಯದರ್ಜೆ.... ವ್ಯವಹಾರದಲ್ಲಿ ಸರ್ವ ಸಮಾನತೆ ಅಸಾಧ್ಯ. ಅದು ಭಾವನಾತ್ಮಕ. ಇಂದು ಒಬ್ಬ ಕುಡಿ ಬೆಳೆದು ಮುಂದೆ ಹತ್ತು ಹಲವರು. ಇಂದಿನ ಆಸ್ತಿಗೆ ಒಬ್ಬ ಹಕ್ಕುದಾರ ಮುಂದೆ ಹತ್ತು ಹಲವರೂ ಹಕ್ಕುದಾರರು. ಅಂದಿನ ನಾಲ್ಕುವಿಧ ಹಿಂದುಗಳು ಇಂದು ನೂರಾರುವಿಧ. ಈ ನಾವೆಲ್ಲ ಹಿಂದುಗಳೇ. ಬ್ರಾಹ್ಮಣಮಾತ್ರ ಹಿಂದು, ಹಿಂದುಧರ್ಮ ಬ್ರಾಹ್ಮಣರದ್ದು ಎನ್ನುವುದಾದರೆ ಬ್ರಾಹ್ಮಣರಲ್ಲದ ವ್ಯಾಸ ಕೃಷ್ಣ ವಾಲ್ಮೀಕಿ ರಾಮ ಕಾಳಿದಾಸಾದಿಗಳನ್ನು ಬ್ರಾಹ್ಮಣರೇಕೆ ಪೂಜಿಸಬೇಕು ಅನುಸರಿಸಬೇಕು? ಇವರು ಹೇಳಿದ ಬ್ರಹ್ಮಸೂತ್ರ ಭಗವದ್ಗೀತೆ ಮಹಾಭಾರತ ರಾಮಾಯಣಾದಿಗಳು ಹಿಂದುಧರ್ಮದವುಗಳಲ್ಲವೆನ್ನೋಣವೇ? ಹೌದೆನ್ನುವುದಾದರೂ ಸರಿಯೇ, ಬನ್ನಿ ಹೆಸರಾಭಿಮಾನ ತೊರೆದು ಈ ಎಲ್ಲಾ ಗ್ರಂಥಗಳಲ್ಲಿ ಹೇಳಿದ ಉದಾತ್ತ ಅಂಶಗಳನ್ನು ಗೌರವಿಸಿ ಪಾಲಿಸಿ ಸುಖಿಗಳಾಗಿರೋಣ. ಕಾಲಕ್ಕೆ ಅನ್ವಯವಾಗದ ಅವಾಸ್ತವ ವಿರೋಧಾಂಶಗಳನ್ನು ಕೈ ಬಿಡೋಣ!!

## ನೃತ್ಯ ಕಲಾರ್ಪಣ; ನವರಸ ರಂಜನಿ

• ಉದಯವಾಹಿನಿ, ಬೆಂಗಳೂರು

ಸಪ್ತಸ್ವರ ನೃತ್ಯಾಲಯ ಕಲ್ಚರಲ್ ಆರ್ಟ್ಸ್ ಸೆಂಟರ್ ವತಿಯಿಂದ ಜನವರಿ 10, ಶನಿವಾರ ಮಧ್ಯಾಹ್ನ 3-30ಕ್ಕೆ ನಗರದ ಮಲ್ಲತ್ತಳ್ಳಿಯ ಕಲಾಗ್ರಾಮದ ಸಮುಚ್ಚಯ ಭವನದಲ್ಲಿ ನೃತ್ಯಾರ್ಪಣ ಶೀರ್ಷಿಕೆಯಲ್ಲಿ ನವರಸ ರಂಜನಿ, ಭೈರವಮ್ ಎಂಬ ವಿಶೇಷ ನೃತ್ಯ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಾಟ್ಯೇಶ್ವರ ನೃತ್ಯ ಶಾಲೆಯ ಅಧ್ಯಕ್ಷರಾದ 'ಕಲಾಯೋಗಿ' ಗುರು ಶ್ರೀ ಕೆ.ಪಿ. ಸತೀಶಬಾಬು, ಕಾರ್ಯದರ್ಶಿಯಾದ ವಿದುಷಿ ಶ್ರೀಮತಿ ವಾಣಿ ಸತೀಶಬಾಬು, ನೃತ್ಯ ಲಹರಿ ಕಲಾ ಕೇಂದ್ರದ ನಿರ್ದೇಶಕರಾದ ವಿದುಷಿ ಶ್ರೀಮತಿ ರೂಪಾ ಗಿರೀಶ್ ಇವರುಗಳು ಉಪಸ್ಥಿತರಿರುವರು ಎಂದು ಸಪ್ತಸ್ವರ ನೃತ್ಯಾಲಯದ ಸಂಸ್ಥಾಪಕರೂ ಗುರುಗಳೂ ಆದ ವಿದುಷಿ ಶ್ರೀಮತಿ ಮಂಜುಳಾ ಜಗದೀಶ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## ಕುವೆಂಪು ಕನ್ನಡದ ಅಸ್ಮಿತೆ ಉಪೇಂದ್ರ ಕುಮಾರ್ ಅಭಿಮತ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕುವೆಂಪು ಕನ್ನಡದ ಅಸ್ಮಿತೆ. ಕನ್ನಡ, ಭಾರತೀಯ ಮತ್ತು ಪಾಶ್ಚಿಮಾತ್ಯ ಸಾಹಿತ್ಯವನ್ನು ಜೀರ್ಣಿಸಿಕೊಂಡು, ಸದಾ ಜೀವಂತವಾಗಿರುವ ಸಾಹಿತ್ಯ ಕೊಟ್ಟ, ಜಗದಕವಿ ಯುಗದ ಕವಿ ಕುವೆಂಪು ಎಂದು ಸಾಹಿತಿ ಉಪೇಂದ್ರ ಕುಮಾರ್ ಎಂ.ಆರ್. ತಿಳಿಸಿದರು. ಮಹದೇವಪುರ ಕ್ಷೇತ್ರದ ದೊಡ್ಡಗುಬ್ಬಿಯ ಶ್ರೀವೀರಭದ್ರೇಶ್ವರ ಸ್ವಾಮಿ ಪ್ರೌಢಶಾಲೆಯಲ್ಲಿ ಕುವೆಂಪು ಸ್ಮರಣಾರ್ಥ ಕಾರ್ಯಕ್ರಮ ಆಯೋಜನೆಗೊಂಡಿತ್ತು. ಅಧ್ಯಕ್ಷತೆವಹಿಸಿದ್ದ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ, ಸಾಹಿತಿ, ಉಪೇಂದ್ರ ಕುಮಾರ್ ಮಾತನಾಡಿದ ಅವರು. ಆಡು ಮುಟ್ಟದ ಸೊಪ್ಪಿಲ್ಲವೆನ್ನುವಂತೆ, ಕುವೆಂಪುರವರು ಪ್ರವೇಶಿಸದ ಸಾಹಿತ್ಯ ಪ್ರಕಾರವಿಲ್ಲ.ಈ ಎಲ್ಲಾ ಪ್ರಕಾರಗಳಲ್ಲಿಯೂ ಮೌಢ್ಯತೆಗಳನ್ನು ದಾಟಿ. ವಿಶ್ವಮಾನವಪ್ರಜ್ಞೆ ತುಂಬಿಕೊಳ್ಳಲು ತಿಳಿಸಿದ್ದಾರೆ.

ಕನ್ನಡ ಅಧ್ಯಾಪಕ ಅಶೋಕ್ ಮಾತನಾಡಿ, ಕುವೆಂಪುರವರು ವಿದ್ಯಾರ್ಥಿಗಳನ್ನು ಗೌರವಾನ್ವಿತ ತಪಸ್ವಿಗಳೆಂದು, ವಿದ್ಯಾರ್ಥಿಗಳು. ಭಕ್ತ ಬೆಳೆಯುವ ಗೆದ್ದಗಳಾಗಬೇಕೆಂದು. ವಿಶ್ವ ಮಾನವರಾಗಿಬೇಕೆಂದು ತಿಳಿಸಿದರು. ಲೇಖಕ ಕನ್ನಡ ಪ್ರಾಧ್ಯಾಪಕ ಶ್ರೀರಾಮ್. ಎಂ. ಕುವೆಂಪು ಮತ್ತು ರಾಜ ಕುಮಾರ್ ರವರ ಕನ್ನಡ ಕಾಯಕ ನಮಗೆ ಸ್ಪೂರ್ತಿ ಶಕ್ತಿಯ ಮಾದರಿಯಾಗಬೇಕೆಂದರು. ವಿದ್ಯಾರ್ಥಿಗಳು ಕುವೆಂಪು ಕುರಿತಂತೆ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು.

## ಕಸಾಪ ವ್ಯವಹಾರದ ನ್ಯಾಯಾಂಗ ತನಿಖೆ ಸರ್ಕಾರಕ್ಕೆ ರಾಜ್ಯಪಾಲರ ಪತ್ರ

• ಉದಯವಾಹಿನಿ, ಬೆಂಗಳೂರು

ಮಹೇಶ ಜೋಶಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಅವಧಿಯ ವ್ಯವಹಾರಗಳ ಬಗೆಗಿನ ತನಿಖೆಗೆ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಆಯೋಗ ರಚಿಸುವ ಬಗ್ಗೆ ವರದಿ ನೀಡಿ ಎಂದು ರಾಜ್ಯಪಾಲರು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಾರೆ. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿದ್ದ ಮಹೇಶ ಜೋಶಿ, ಕೆಲವರು ದುರುದ್ದೇಶದಿಂದ ಕಸಾಪ, ನನ್ನ ಮೇಲೆ, ಕಾರ್ಯಕಾರಿ ಸಮಿತಿಯ ವಿರುದ್ಧ ಅಪಪ್ರಚಾರ ಮಾಡಿಸುತ್ತಾ, ನಿರಂತರ ದೂರು ನೀಡುತ್ತಿದ್ದಾರೆ. ಕಸಾಪ ಹಾಗೂ ನನ್ನನ್ನು ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಲು ಭಗೀರಥ ಪ್ರಯತ್ನ ಮಾಡುತ್ತಿದ್ದಾರೆ.

ವಿಚಾರಣಾಧಿಕಾರಿಯು ವಿಚಾರಣೆ ನಡೆಸದೆ ವರದಿ ನೀಡುವ ಬಗ್ಗೆ ಅನುಮಾನವಿದೆ. ಹೀಗಾಗಿ, ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಕೋರಿದ್ದರು. ರಾಜಕೀಯ ನಂಟು ಹೊಂದಿರುವ ಮಂಡ್ಯದ ಪ್ರೊ. ಜಯಪ್ರಕಾಶ್ ಗೌಡ, ಕೆ.ಟಿ. ಶ್ರೀಕಂಠೇಗೌಡ, ರಾಮನಗರದ ಸಿ.ಕೆ. ರಾಮೇಗೌಡ, ಎಸ್.ಜಿ. ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ವಸುಂಧರಾ ಭೂಪತಿ, ಆರ್.ಜಿ.ಹಳ್ಳಿ ನಾಗರಾಜ್, ಹಂಪ ನಾಗರಾಜಯ್ಯ ಮೊದಲಾದ ಬೆರಳೆಣಿಕೆಯಷ್ಟು ಮಂದಿ ಪೂರ್ವಗ್ರಹ ಪೀಡಿತರಾಗಿದ್ದಾರೆ. ಅಂತಹವರು ನೀಡಿರುವ ದೂರು ಆಧರಿಸಿ ವಿಚಾರಣಾಧಿಕಾರಿಗಳನ್ನು ನೇಮಿಸಲಾಗಿದೆ.

## ಕೋಗಿಲು ವಿವಾದ: 161 ಸಂತ್ರಸ್ತರ ಪೈಕಿ 26 ಮಂದಿಗಷ್ಟೇ ಸಿಗಲಿದೆ ಮನೆ

# ಕೋಗಿಲು ಬಡಾವಣೆ ತೆರವು ಪ್ರಕರಣದ ಗದ್ದಲ

• ಉದಯವಾಹಿನಿ, ಬೆಂಗಳೂರು

ರಾಷ್ಟ್ರ ಮಟ್ಟದಲ್ಲಿ ಸದ್ದು ಗದ್ದಲಕ್ಕೆ ಕಾರಣವಾದ ಕೋಗಿಲು ಬಡಾವಣೆ ತೆರವು ಪ್ರಕರಣದಲ್ಲಿ ಸಂತ್ರಸ್ತರಾದ 161 ಸಂತ್ರಸ್ತ ಕುಟುಂಬಗಳ ಪೈಕಿ ಕೇವಲ 26 ಮಂದಿಗಷ್ಟೇ ಪರ್ಯಾಯವಾಗಿ ಮನೆ ನೀಡಲು ನಿರ್ಧಾರ ಮಾಡಲಾಗಿದೆ. ಈ ಕುರಿತಾಗಿ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಮಾಹಿತಿ ನೀಡಿದ್ದು, 26 ಮಂದಿಯ ದಾಖಲೆ ಪರಿಶೀಲನೆ ನಡೆಸಲಾಗಿದೆ ಎಂದರು.

> **ಯಾರ ಮನೆಗಳನ್ನು ತೆರವು ಮಾಡಲಾಗಿದೆ ಅವರನ್ನು ಪರಿಗಣಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಅವರು ತೀರ್ಮಾನ ಮಾಡಿದ್ದಾರೆ. ಸಂತ್ರಸ್ತರ ಪೈಕಿ ಸ್ಥಳೀಯರು ಹಾಗೂ ಕರ್ನಾಟಕದವರಿಗೆ ಮಾತ್ರ ಮನೆ ಕೊಡುತ್ತೇವೆ. ಅವರು ಐದು ವರ್ಷಗಳ ಕಾಲ ಬೆಂಗಳೂರು ನಿವಾಸಿಗಳು ಆಗಿರಬೇಕು.**
> **- ಜಮೀರ್ ಅಹ್ಮದ್ ಖಾನ್, ವಸತಿ ಸಚಿವ**


ಉದಯವಾಹಿನಿ ಚಿತ್ರ

- **161 ಸಂತ್ರಸ್ತ ಕುಟುಂಬಗಳ ಪೈಕಿ ಕೇವಲ 26 ಮಂದಿಗಷ್ಟೇ ಪರ್ಯಾಯವಾಗಿ ಮನೆ ನೀಡಲು ನಿರ್ಧಾರ.**
- **26 ಮಂದಿಯ ದಾಖಲೆ ಪರಿಶೀಲನೆ ನಡೆಸಲಾಗಿದೆ.**

ಕೋಗಿಲು ಸಂತ್ರಸ್ತರಿಗೆ ಮನೆ ನೀಡುವ ವಿಚಾರವಾಗಿ ಸಚಿವ ಕೃಷ್ಣಬೈರೇಗೌಡ ನನಗೆ ಕರೆ ಮಾಡಿದ್ದರು. 26 ಜನರ ದಾಖಲೆ ಪರಿಶೀಲನೆ ಮುಗಿದಿದೆ ಎಂದು ಹೇಳಿದ್ದಾರೆ. ಇವತ್ತು 26 ಜನರಿಗೆ ಮನೆ ಕೊಡಬಹುದು ಎಂದರು.

**ದಾಖಲೆ ಪರಿಶೀಲನೆ:** ಕೋಗಿಲು ಸಂತ್ರಸ್ತರ ದಾಖಲೆಗಳನ್ನು ಇನ್ನು ಪರಿಶೀಲನೆ ನಡೆಸಲಾಗುತ್ತಿದೆ. ಒಟ್ಟು 261 ಮನೆಗಳ ಪೈಕಿ 161 ಮನೆಗಳನ್ನು ತೆರವು ಮಾಡಲಾಗಿದೆ. ಪರ್ಯಾಯ ವ್ಯವಸ್ಥೆ ಕಲ್ಪಿಸಲು ಅರ್ಜಿಗಳು ಜಾಸ್ತಿ ಬಂದಿವೆ. ಆದರೆ ಅವರಿಗೆಲ್ಲ ಮನೆಗಳು ಕೊಡಲು ಆಗಲ್ಲ ಎಂದರು.



**ಅಕ್ರಮದ ಆರೋಪಿ ಪರಿಚಯ ಇಲ್ಲ:** ಕೋಗಿಲು ಬಡಾವಣೆ ಅಕ್ರಮದ ಆರೋಪಿ ಯಾರು ಎಂಬುದು ನನಗೆ ಗೊತ್ತಿಲ್ಲ ಎಂದು ಸಚಿವ ಜಮೀರ್ ಅಹ್ಮದ್ ಸ್ಪಷ್ಟಪಡಿಸಿದರು. ಆರೋಪ ಕೇಳಿ ಬಂದಿರುವ ವಾಸೀಂ, ವಿಜಯ್ ವಿರುದ್ಧ ದಾಖಲಾದ ಪ್ರಕರಣದ ಕುರಿತು ಪ್ರಶ್ನೆ ಕೇಳಿದಾಗ, ಅವರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಯಾವುದೇ ಸ್ಪಷ್ಟ ಉತ್ತರ ನೀಡದೆ ತೆರಳಿದರು.

**ಏನಿದು ವಿವಾದ?:** ಕೋಗಿಲು ಬಡಾವಣೆಯಲ್ಲಿ ಅಕ್ರಮ ತೆರವು ಹೆಸರಿನಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತೆರವು ಕಾರ್ಯಾಚರಣೆ ನಡೆಸಿತ್ತು. ಇದು ಸಾಕಷ್ಟು ವಿವಾದಕ್ಕೆ ಕಾರಣವಾಗಿತ್ತು. ಕೇರಳದ ಸಿಎಂ ಪಿಣರಾಯ್ ವಿಜಯನ್ ಈ ಬಗ್ಗೆ ಟ್ವೀಟ್ ಮಾಡಿದ್ದರು. ಬಳಿಕ ಕೇರಳದ ಸಂಸದರು ಹಾಗೂ ಶಾಸಕರು ಸ್ಥಳಕ್ಕೆ ಭೇಟಿ ನೀಡಿ ಸಂತ್ರಸ್ತರ ಪರವಾಗಿ ಧ್ವನಿ ಎತ್ತಿದ್ದರು.

**ಆರೋಪಿಗಳ ಬಗ್ಗೆ ಪರಿಚಯವಿಲ್ಲ**

**ಕೋಗಿಲು ಬಡಾವಣೆ ತೆರವು ಪ್ರಕರಣದಲ್ಲಿ 161 ಸಂತ್ರಸ್ತರ ಪೈಕಿ ಕೇವಲ 26 ಮಂದಿಗೆ ಮಾತ್ರ ಪರ್ಯಾಯ ಮನೆ ನೀಡಲು ನಿರ್ಧರಿಸಲಾಗಿದೆ. ದಾಖಲೆ ಪರಿಶೀಲನೆ ನಡೆಸಲಾಗಿದ್ದು, ಬೆಂಗಳೂರಿನಲ್ಲಿ ಐದು ವರ್ಷ ವಾಸವಿರುವ ಸ್ಥಳೀಯರಿಗೆ ಮಾತ್ರ ಮನೆ ನೀಡಲಾಗುವುದು ಎಂದು ಸಚಿವ ಜಮೀರ್ ಅಹ್ಮದ್ ತಿಳಿಸಿದ್ದಾರೆ. ಅಕ್ರಮದ ಆರೋಪಿಗಳ ಬಗ್ಗೆ ತನಗೆ ಪರಿಚಯವಿಲ್ಲ ಎಂದೂ ಸ್ಪಷ್ಟಪಡಿಸಿದರು.**

## ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಅಗತ್ಯ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಡಿಜಿಟಲೀಕರಣ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಕೆಯ ಇಂದಿನ ಕಾಲಘಟ್ಟಕ್ಕೆ ತಕ್ಕಂತೆ ಶಿಕ್ಷಣ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಪರಿವರ್ತನೆ ತರಬೇಕಾದ ಅಗತ್ಯವಿದೆ ಎಂದು ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಬಿ. ರಮೇಶ್ ಅಭಿಪ್ರಾಯಪಟ್ಟರು. ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಮತ್ತು ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಸ್ಟಡೀಸ್ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡಿದ್ದ ನೆಕ್ಸ್ ಎಡ್ಜ್ 2026 ಉದ್ಯಮ ಆಡಳಿತ ನಿರ್ವಹಣೆ ಸಮಾವೇಶದಲ್ಲಿ ಭಾಗವಹಿಸಿ, ಮಾತನಾಡಿದರು. ಉದ್ಯಮ ವಲಯದ ಹೊಸ ಅಗತ್ಯಗಳಿಗೆ ಅನುಗುಣವಾಗಿ ಉನ್ನತ ಶಿಕ್ಷಣ ಪಠ್ಯಕ್ರಮದಲ್ಲಿ ಸೂಕ್ತ ಪರಿಷ್ಕರಣೆ ಮಾಡುವ ಪ್ರಕ್ರಿಯೆಯನ್ನು ವಿಶ್ವವಿದ್ಯಾಲಯ ಈಗಾಗಲೇ ಪ್ರಾರಂಭಿಸಿದೆ. ಈ ನಿಟ್ಟಿನಲ್ಲಿ ಉದ್ಯೋಗ ಕೌಶಲ ಅಭಿವೃದ್ಧಿ ಮತ್ತು ಪರೀಕ್ಷಾ ಪೂರ್ವ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ವಿವಿಧ ಉದ್ಯಮ ಸಂಸ್ಥೆಗಳ ಸಹಭಾಗಿತ್ವದ ಮೂಲಕ ನೇರ ನೇಮಕಾತಿ ಅವಕಾಶಗಳನ್ನು ಸೃಷ್ಟಿಸಲಾಗುತ್ತಿದೆ ಎಂದು ಅವರು ವಿವರಿಸಿದರು.

ಕೇವಲ ಪದವಿ ಪಡೆಯಲು ಸೀಮಿತವಾಗದೆ, ಅತ್ಯಾಧುನಿಕ ತಂತ್ರಜ್ಞಾನ ಬಳಕೆಯ ಕೌಶಲ ಹಾಗೂ ಉದ್ಯಮಶೀಲತೆಯನ್ನು ರೂಢಿಸಿಕೊಳ್ಳಬೇಕು. ಈ ಮೂಲಕ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಕರ್ನಾಟಕ ರಾಜ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಟಿ.ಆರ್.ಪರುಶರಾಮನ್, ಮುಂದಿನ ದಶಕವು ತಂತ್ರಜ್ಞಾನ ಪಾರಮ್ಯದ ಆಳ್ವಿಕೆಯ ಕಾಲವಾಗಲಿದೆ. ಭಾರತದ ಆರ್ಥಿಕತೆಯು ಸೇವಾ ವಲಯದ ಆದ್ಯತೆಯ ಕಡೆಯಿಂದ ಉತ್ಪನ್ನ ತಯಾರಿಕಾ ಕ್ಷೇತ್ರದತ್ತ ಹೊರಳುತ್ತಿದೆ. ಮಧ್ಯಮ ಮತ್ತು ಸಣ್ಣ ಉದ್ಯಮಗಳಿಗೆ ಸುವರ್ಣ ಕಾಲ ಪ್ರಾರಂಭವಾಗುವ ಸಾಧ್ಯತೆ ದಟ್ಟವಾಗಿದೆ ಎಂದು ವಿಶ್ಲೇಷಿಸಿದರು.

# ಬೆಂಗಳೂರು ವಿಮಾನ ನಿಲ್ದಾಣ; ಕೆಐಎ ಹೊಸ ಪಾರ್ಕಿಂಗ್ ನಿಯಮ: ಸಚಿವ ತರಾಟೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಟ್ಯಾಕ್ಸಿ ನಿಲುಗಡೆಗೆ ರೂಪಿಸಿರುವ ಹೊಸ ಪಾರ್ಕಿಂಗ್ ನಿಯಮ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಸಾರಿಗೆ ಸಚಿವ ರಾಮಲಿಂಗ ರೆಡ್ಡಿ, ಅಧಿಕಾರಿಗಳನ್ನು ತರಾಟೆಗೆ ತೆಗದುಕೊಂಡರು. ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿದ ಸಚಿವರು ಚಾಲಕರೊಂದಿಗೆ ಮಾತುಕತೆ ನಡೆಸಿದರು. ನೂತನ ವಾಹನ ನಿಲುಗಡೆ ವ್ಯವಸ್ಥೆಯಿಂದ ಸ್ಥಳೀಯ ಟ್ಯಾಕ್ಸಿ ಚಾಲಕರಿಗೆ ಉಂಟಾಗಿರುವ ಸಮಸ್ಯೆ ಆಲಿಸಿದರು.

ಬಳಿಕ ವಿಮಾನ ನಿಲ್ದಾಣದ ಅಧಿಕಾರಿಗಳ ಕ್ರಮಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಓಲಾ, ಉಬರ್ ಸೇರಿದಂತೆ ಅಗ್ರಿಗೇಟರ್ ಟ್ಯಾಕ್ಸಿಗಳಿಗೆ ಟರ್ಮಿನಲ್ ಸಮೀಪದಲ್ಲೇ ನಿಲುಗಡೆಗೆ ಅವಕಾಶ ನೀಡಿ, ಸ್ಥಳೀಯ ಹಾಗೂ ಇತರ ಖಾಸಗಿ ಟ್ಯಾಕ್ಸಿಗಳಿಗೆ ಒಂದು ಕಿಲೋ ಮೀಟರ್ ದೂರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿರುವುದು ಯಾವ ನ್ಯಾಯ ಎಂದು ತರಾಟೆಗೆ ತೆಗೆದುಕೊಂಡರು.


ವಯಸ್ಸಾದವರು, ಸಣ್ಣ ಮಕ್ಕಳಿರುವ ಕುಟುಂಬಗಳು ಹಾಗೂ ಆರೋಗ್ಯ ಸಮಸ್ಯೆಗಳಿಂದ ಬಳಲುವ ಪ್ರಯಾಣಿಕರು ದೂರದ ಪಾರ್ಕಿಂಗ್ ಪ್ರದೇಶದಿಂದ ಲಗೇಜ್ ಹೊತ್ತು ಟ್ಯಾಕ್ಸಿ ಹುಡುಕಿಕೊಂಡು ಬರಬೇಕಾದ ಸ್ಥಿತಿ ನಿರ್ಮಾಣವಾಗಿದೆ. ನೂತನ ಪಾರ್ಕಿಂಗ್ ವ್ಯವಸ್ಥೆ ಮೇಲ್ನೋಟಕ್ಕೆ ಖಾಸಗಿ ಅಗ್ರಿಗೇಟರ್‌ಗಳಿಗೆ ಪರೋಕ್ಷ ಸಹಕಾರ ನೀಡುವಂತೆ ಕಾಣುತ್ತಿದೆ ಎಂದು ಸಚಿವರು ಟೀಕಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ರಾಮಲಿಂಗಾರೆಡ್ಡಿ, ಸ್ಥಳೀಯ ಚಾಲಕರು ಹಲವು ವರ್ಷಗಳಿಂದ ಕಡಿಮೆ ದರದಲ್ಲಿ ಸೇವೆ ನೀಡುತ್ತಿದ್ದಾರೆ. ಬಿಎಂಟಿಸಿ ಹವಾನಿಯಂತ್ರಿತ ಬಸ್‌ನಲ್ಲಿ ಬೆಂಗಳೂರಿಗೆ 300 ಟಿಕೆಟ್ ದರ ನಿಗದಿ ಪಡಿಸಲಾಗಿದೆ. ಆದರೆ ಹೊಸ ಪಾರ್ಕಿಂಗ್ ವ್ಯವಸ್ಥೆಯಿಂದ ಟ್ಯಾಕ್ಸಿ ಚಾಲಕರಿಗೂ ಸಾರ್ವಜನಿಕರಿಗೂ ತೊಂದರೆಯಾಗುತ್ತಿದೆ ಎಂದು ಹೇಳಿದರು.

ಈ ಸಮಸ್ಯೆಗೆ ವಿಮಾನ ನಿಲ್ದಾಣ ಪ್ರಾಧಿಕಾರವೇ ಸೂಕ್ತ ಪರಿಹಾರ ನೀಡಬೇಕು. ಈ ಕುರಿತು ಸಂಸದ ಡಾ. ಕೆ. ಸುಧಾಕರ್ ಅವರೊಂದಿಗೆ ದೂರವಾಣಿ ಮೂಲಕ ಚರ್ಚೆ ನಡೆಸಲಾಗಿದೆ. ಕೇಂದ್ರ ವಿಮಾನಯಾನ ಸಚಿವಾಲಯದೊಂದಿಗೆ ಮಾತುಕತೆ ನಡೆಸಿ ಪರಿಹಾರ ಒದಗಿಸುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

**ಬಿಎಂಟಿಸಿ ವಾಯು ವಜ್ರಕ್ಕೂ ಕುತ್ತು:** ಬಿಎಂಟಿಸಿ ಬಸ್ ನಿಲುಗಡೆ ವ್ಯವಸ್ಥೆಯಲ್ಲೂ ಕಡಿತ ಮಾಡಿರುವುದನ್ನು ಉಲ್ಲೇಖಿಸಿದ ಸಚಿವ ರಾಮಲಿಂಗ ರೆಡ್ಡಿ ಈ ಹಿಂದೆ 14 ಬಸ್ ಬೇಗಳನ್ನು ನೀಡಲಾಗಿದೆ. ಇದೀಗ ಅದನ್ನು 7ಕ್ಕೆ ಇಳಿಸಲಾಗಿದೆ. ಇದರಿಂದ ದೂರದ ಟ್ಯಾಕ್ಸಿ ನಿಲುಗಡೆಗೆ ತೆರಳಲು ಸಾಧ್ಯವಾಗದ ಪ್ರಯಾಣಿಕರು ದುಬಾರಿ ಅಗ್ರಿಗೇಟರ್ ಟ್ಯಾಕ್ಸಿಗಳನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು. ಈ ಅಸಮಾನತೆಯನ್ನು ನಿವಾರಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಯೊಂದಿಗೆ ಚರ್ಚಿಸಿ ಸಂಬಂಧಿಸಿದ ಪ್ರಾಧಿಕಾರಗಳೊಂದಿಗೆ ಪತ್ರವ್ಯವಹಾರ ನಡೆಸಿ ಸೂಕ್ತ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ರಾಮಲಿಂಗ ರೆಡ್ಡಿ ಭರವಸೆ ನೀಡಿದರು.

## ಧನುಷ್ ರಾಜ್, ಪತ್ನಿ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲು

• ಉದಯವಾಹಿನಿ, ಬೆಂಗಳೂರು



ಕೌಟುಂಬಿಕ ಕಲಹ, ವರದಕ್ಷಿಣೆ ವಿಚಾರವಾಗಿ ನಟ ಧನುಷ್ ರಾಜ್, ಅವರ ಪತ್ನಿ ಆಶ್ರಿತಾ ಅವರು ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದು, ಈ ಸಂಬಂಧ ಗಿರಿನಗರ ಹಾಗೂ ಬೆಂಗಳೂರು ದಕ್ಷಿಣ ವಿಭಾಗದ ಮಹಿಳಾ ಠಾಣೆಯಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಾಗಿವೆ. ಒಂಬತ್ತು ತಿಂಗಳ ಹಿಂದೆ ದಾಂಪತ್ಯಕ್ಕೆ ಜೀವನಕ್ಕೆ ಕಾಲಿಟ್ಟಿದ್ದರು.

ಕೆಲಸದ ನಿಮಿತ್ತ ವಿದೇಶಕ್ಕೆ ಹೋಗಿದ್ದೆ. ಅದನ್ನೇ ತಪ್ಪಾಗಿ ಅರ್ಥೈಸಿಕೊಂಡಿರುವ ಆಶ್ರಿತಾ ಅವರು ಅನುಮಾನ ಪಡುತ್ತಿದ್ದಾರೆ. ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಹೊರಗಿನಿಂದ ಗೂಂಡಾಗಳನ್ನು ಕರೆಸಿ, ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ. ಆಶ್ರಿತಾ ಅವರೇ ಶೌಚಾಲಯದ ಕೊಠಡಿಗೆ ತೆರಳಿ ಗಾಜು ಒಡೆದುಕೊಂಡು ಕೈಗೆ ಚುಚ್ಚಿಕೊಂಡಿದ್ದರು. ಅದನ್ನು ನನ್ನ ಮೇಲೆ ಹೊರಿಸಲು ಪ್ರಯತ್ನಿಸಿದ್ದಾರೆ ಎಂದು ಆರೋಪಿಸಿ ಧನುಷ್ ಅವರು ಗಿರಿನಗರ ಠಾಣೆಗೆ ದೂರು ನೀಡಿದ್ದಾರೆ.

ಧನುಷ್ ಅವರಿಗೆ ಬೇರೆ ಹುಡುಗಿಯ ಜತೆಗೆ ಸ್ನೇಹವಿದೆ. ಅವರ ಮೊಬೈಲ್ ಫೋನ್ ಪರಿಶೀಲಿಸಿದಾಗ ಫೋಟೋಗಳು ಸಿಕ್ಕಿದ್ದವು. ಸುಳ್ಳು ಹೇಳಿ ವಿದೇಶಕ್ಕೆ ಹೋಗಿದ್ದರು. ಪ್ರಶ್ನಿಸಿದಾಗ ಹಲ್ಲೆ ನಡೆಸಿದ್ದಾರೆ ಎಂದು ಆಶ್ರಿತಾ ಅವರು ದಕ್ಷಿಣ ವಿಭಾಗದ ಮಹಿಳಾ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

**ಹಣಕ್ಕೆ ಬೇಡಿಕೆ:** ಮದುವೆ ಸಂದರ್ಭದಲ್ಲಿ ಪೋಷಕರು 50 ಗ್ರಾಂ ಚಿನ್ನಾಭರಣ ನೀಡಿದ್ದರು. ಈಗ ಮತ್ತೆ 8 ಲಕ್ಷ ಹಣ ತರುವಂತೆ ಪೀಡಿಸುತ್ತಿದ್ದಾರೆ' ಎಂದು ಅವರು ದೂರಿದ್ದಾರೆ. ಶಿವಾಜಿ ಸೂರತ್ಕಲ್' ಸೇರಿದಂತೆ ಕೆಲವು ಸಿನಿಮಾ ಹಾಗೂ ಕಿರುತೆರೆಯಲ್ಲಿ ಧನುಷ್ ರಾಜ್ ಅವರು ನಟಿಸಿದ್ದಾರೆ.

## ವಸ್ತುಗಳ ಪುನರ್‌ಬಳಕೆಗೆ ಕಾಯ್ದೆ ತರುತ್ತೇವೆ: ಈಶ್ವರ ಖಂಡ್ರೆ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಪರಿಸರದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳನ್ನು ತಡೆಯುವ ನಿಟ್ಟಿನಲ್ಲಿ ವಸ್ತುಗಳ ಪುನರ್‌ಬಳಕೆಗೆ ಹೆಚ್ಚು ಒತ್ತು ನೀಡಲು ಕಠಿಣ ಕಾಯ್ದೆ ರೂಪಿಸಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ, ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು. ಪರಿಸರ ಸಂರಕ್ಷಣೆ ವಲಯದಲ್ಲಿ ಕೆಲಸ ಮಾಡುತ್ತಿರುವ ಫೆವಾರ್ಡ್, ವಿಶ್ವ ಯುವಕ ಕೇಂದ್ರ, ಡಿಜಿಪಿಕ್ ಸಂಸ್ಥೆಗಳು ನಗರದಲ್ಲಿ ಆಯೋಜಿಸಿರುವ 'ಪರಿಸರ ಸುಸ್ಥಿರತೆ' ಕುರಿತ ಎರಡು ದಿನಗಳ ದಕ್ಷಿಣ ಭಾರತ ಪ್ರತಿನಿಧಿಗಳ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಮನುಷ್ಯನ ಜೀವನ ಶೈಲಿ ಬದಲಾದ ನಂತರವೂ ಎಲ್ಲವೂ ದುರ್ಬಳಕೆ ಹಂತಕ್ಕೆ ಬಂದಿದೆ. ನಮ್ಮ ಕ್ಷಣಿಕ ಬದುಕಿಗೆ ಏನೆಲ್ಲ ವಸ್ತುಗಳನ್ನು ಬಳಸಿ ತ್ಯಾಜ್ಯ ಸೃಷ್ಟಿಸುತ್ತಿದ್ದೇವೆ ಎಂದು ಗಮನಿಸಿದರೆ ಅದರ ಅರಿವು ಆಗಬಹುದು. ನಾವು ಬಳಸುವ ವಸ್ತುಗಳನ್ನು ಮರು ಬಳಕೆ ಮಾಡುವ ಮನೋಭಾವ ಬೆಳೆಸಲೇಬೇಕು. ಕಾಯ್ದೆ ಮೂಲಕವೂ ಇದನ್ನು ಅನುಷ್ಠಾನಗೊಳಿಸಬೇಕಿದೆ. ಐರೋಪ್ಯ ದೇಶಗಳಲ್ಲಿ ಮರುಬಳಕೆ ವಲಯ ವೃತ್ತಾಕಾರದ ಆರ್ಥಿಕ ಮಾದರಿಯಾಗಿ ಬೆಳೆದಿದೆ. ಇದನ್ನು ನಮ್ಮಲ್ಲೂ ಅಳವಡಿಸಿಕೊಂಡರೆ ಪರಿಸರದ ಹೊರೆ ಕಡಿಮೆ ಮಾಡಬಹುದು ಎಂದು ಸಲಹೆ ನೀಡಿದರು.

ಪರಿಸರ ಸುಸ್ಥಿರತೆಗೆ ವಿಶ್ವಸಂಸ್ಥೆ ನಾಲ್ಕು ದಶಕಗಳ ಹಿಂದೆ ಘೋಷಣೆ ಮಾಡಿ ನೀತಿಗಳನ್ನು ಜಾರಿಗೊಳಿಸಿದೆ. ಈ ನಿಟ್ಟಿನಲ್ಲಿ ಭಾರತದಲ್ಲೂ ಚಟುವಟಿಕೆಗಳು ನಡೆಯುತ್ತಿವೆ. ಹವಾಮಾನ ವೈಪರಿತ್ಯದ ಅನಾಹುತಗಳನ್ನು ತಗ್ಗಿಸುವ ಪ್ರಯತ್ನವೂ ಹೆಚ್ಚಿಸಬೇಕಿದೆ. ತ್ಯಾಜ್ಯಗಳು ನದಿ ಸೇರುವುದನ್ನು ತಪ್ಪಿಸಬೇಕು. ಸಂಯೋಜಿತ ಸಂಶೋಧನಾ ಚಟುವಟಿಕೆ, ಪರಿಸರ ಸ್ನೇಹಿ ಯೋಜನೆಗಳ ಜೊತೆಗೆ ಬೇರೆ ಕಡೆಯ ಮಾದರಿ ಅಭ್ಯಾಸಗಳನ್ನು ಎಲ್ಲೆಡೆ ಬಳಸಿಕೊಳ್ಳಬೇಕು ಎಂದು ಹೇಳಿದರು.

ಹವಾಮಾನ ಬದಲಾವಣೆಯಿಂದ ದುಷ್ಪರಿಣಾಮ ಉಂಟಾಗುತ್ತಿದೆ. ಜಾಗತಿಕ ತಾಪಮಾನ ಏರಿಕೆಯಾಗಿದೆ. ಸುನಾಮಿ, ಮೇಘಸ್ಫೋಟಗಳೂ ಹೆಚ್ಚಿವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಈ ಬಾರಿ ಮಳೆ ಮಿತಿ ಮೀರಿ ಸುರಿದಿದ್ದರಿಂದ ಸುಮಾರು 20 ಸಾವಿರ ಕೋಟಿ ಮೌಲ್ಯದ ಬೆಳೆ ಹಾನಿಯಾಯಿತು. ಸರ್ಕಾರ 2 ಸಾವಿರ ಕೋಟಿ ಪರಿಹಾರ ನೀಡಿದರೂ ನಷ್ಟದ ಪ್ರಮಾಣದಿಂದ ರೈತರು ತೊಂದರೆ ಅನುಭವಿಸಿದರು ಎಂದು ತಿಳಿಸಿದರು.

# 1 ಲಕ್ಷ ಸಹಿಗಳನ್ನು ಸಂಗ್ರಹಿಸುವ ಗುರಿ ಹೊಂದಿರುವ ಆಮ್ ಆದ್ಮಿ ಪಕ್ಷ

## ನಮ್ಮ ಮೆಟ್ರೋದಲ್ಲಿ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಪಾಸ್ ನೀಡುವಂತೆ ಒತ್ತಾಯ; ಮೊದಲ ದಿನವೇ 600 ಸಹಿ ಸಂಗ್ರಹ

• ಉದಯವಾಹಿನಿ, ಬೆಂಗಳೂರು

ಕಳೆದ ವರ್ಷದಿಂದ ಮೆಟ್ರೋ ಪ್ರಯಾಣದ ದರ ಭಾರಿ ದುಬಾರಿ ಈ ಬಗ್ಗೆ ಸಂಸದ ತೇಜಸ್ವಿ ಅವರು ಪ್ರಸ್ತಾಪ ಮಾಡುತ್ತಲಿರುತ್ತಾರೆ. ಜೊತೆಗೆ ಹಲವರು ಪ್ರತಿಭಟನೆ ನಡೆಸಿದ್ದರೂ ಕೂಡ.ಸದ್ಯ ಆಮ್ ಆದ್ಮಿ ಪಕ್ಷವು ಈ ಬಗ್ಗೆ ದನಿಯೆತ್ತಿದೆ. ನಮ್ಮ ಮೆಟ್ರೋದಲ್ಲಿ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದ ಪಾಸ್‌ಗಳನ್ನು ನೀಡಬೇಕೆಂದು ಒತ್ತಾಯಿಸಿ, ಬುಧವಾರ ಅರಮನೆ ರಸ್ತೆಯ ಸಮೀಪವಿರುವ ಆರ್‌ಸಿ ಕಾಲೇಜಿನ ಬಳಿ ಬೃಹತ್ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಿದೆ. ನಮ್ಮ ಮೆಟ್ರೋದಲ್ಲಿ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಪಾಸ್ ನೀಡಬೇಕೆಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಯುವ ಘಟಕದ ಸದಸ್ಯರು ವಿದ್ಯಾರ್ಥಿಗಳಿಂದ ಸಹಿಸಂಗಣ

**ಆರ್‌ಸಿ ಕಾಲೇಜಿನ ಬಳಿ ಸಹಿ ಸಂಗ್ರಹ**

**ಬೆಂಗಳೂರಿನ ಟ್ರಾಫಿಕ್ ಸಮಸ್ಯೆಯಿಂದಾಗಿ, ವಿದ್ಯಾರ್ಥಿಗಳು ಸೇರಿದಂತೆ ಹಲವರು ಮೆಟ್ರೋ ಅವಲಂಬಿಸಿಕೊಳ್ಳುತ್ತಾರೆ. ಆದರೆ, ಮೆಟ್ರೋ ಪ್ರಯಾಣದ ಟಿಕೆಟ್ ದರ ದುಬಾರಿಯಾಗಿರೋದ್ರಿಂದ ಸಂಕಷ್ಟ ಎದುರಿಸಬೇಕಾದ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದ ಪಾಸ್ ನೀಡುವಂತೆ ಒತ್ತಾಯಿಸಿ ಆಮ್ ಆದ್ಮಿ ಪಕ್ಷವು ಆರ್‌ಸಿ ಕಾಲೇಜಿನ ಬಳಿ ಸಹಿ ಸಂಗ್ರಹಿಸಿದೆ.**


ಉದಯವಾಹಿನಿ ಚಿತ್ರ

ಅಭಿಯಾನವಕ್ಕೆ ಗುರುವಾರ ಚಾಲನೆ ನೀಡಿದರು.

**ಸರಿಯಾದ ಸಮಯಕ್ಕೆ ಶಾಲೆ ತಲುಪಲಾಗಲ್ಲ:** ಅಭಿಯಾನದ ಆರಂಭವನ್ನು ನಗರದ ಆರ್.ಸಿ. ಕಾಲೇಜಿನ ಬಳಿ ನಡೆಸಲಾಯಿತು. ಇದೇ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪಕ್ಷದ ಯುವ ಘಟಕದ ರಾಜ್ಯಾಧ್ಯಕ್ಷ ಲೋಹಿತ್ ಹನುಮಾಪುರ ಮಾತನಾಡಿ ಅತ್ಯಂತ ದುಬಾರಿ ವೆಚ್ಚದ ನಮ್ಮ ಮೆಟ್ರೋ ದಿಂದಾಗಿ ವಿದ್ಯಾರ್ಥಿ ಸಮೂಹ ಸಂಪೂರ್ಣ ಮೆಟ್ರೋ ಅನುಕೂಲವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಬೆಂಗಳೂರಿನ ಸಂಚಾರ ಒತ್ತಡಗಳಿಂದಾಗಿ ಸಮಯಕ್ಕೆ ಸರಿಯಾಗಿ ತಲುಪಲಾಗದೆ ಸಾಕಷ್ಟು ಪರದಾಡುತ್ತಿದ್ದಾರೆ.

**ಸರ್ಕಾರದ ಮೇಲೆ ಒತ್ತಡ ತರಲು ಸಹಿ ಸಂಗ್ರಹ**

ಇದರಿಂದಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವು ಸಹ ಕುಸಿಯುತ್ತಿದ್ದು ಈ ಕೂಡಲೇ ರಾಜ್ಯ, ಕೇಂದ್ರ ಸರ್ಕಾರಗಳು ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಪಾಸ್‌ಗಳನ್ನು ವಿತರಿಸಬೇಕು.ಇದಕ್ಕಾಗಿ ಸರ್ಕಾರವನ್ನು ಒತ್ತಾಯಿಸಲು ನಾವು ಲಕ್ಷಾಂತರ ವಿದ್ಯಾರ್ಥಿ ಸಮೂಹಗಳಿಂದ ಸಹಿ ಸಂಗ್ರಹಣ ಅಭಿಯಾನವನ್ನು ನಡೆಸುತ್ತಿದ್ದೇವೆ.

ಆಗಲಾದರೂ ಸರ್ಕಾರಗಳು ಎಚ್ಚೆತ್ತುಕೊಳ್ಳ ಬೇಕು . ಈ ಕೂಡಲೇ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಧಾವಿಸಬೇಕಾಗಿದೆ ಎಂದು ಆಗ್ರಹಿಸಿದರು. ಇದೇ ಸಂದರ್ಭದಲ್ಲಿ ಯುವ ಘಟಕದ ಉಪಾಧ್ಯಕ್ಷ ಉಮೇಶ್ ಗೌಡ ಮಾತನಾಡಿ ನಾವು ಸತತವಾಗಿ ಬೆಂಗಳೂರಿನ ಎಲ್ಲಾ ಶಾಲಾ ಕಾಲೇಜುಗಳ ಬಳಿ ತೆರಳಿ ಸರ್ಕಾರದ ಮೇಲೆ ಒತ್ತಡ ತರಲು ಸಹಿ ಸಂಗ್ರಹಣೆಯನ್ನು ಮಾಡುತ್ತಿದ್ದೇವೆ.

ವಿದ್ಯಾರ್ಥಿ ಸಮೂಹ ಈ ಅಭಿಯಾನಕ್ಕೆ ಸಂಪೂರ್ಣ ಬೆಂಬಲವನ್ನು ಈಗಾಗಲೇ ಸೂಚಿಸುತ್ತಿದ್ದಾರೆ. ಎಲ್ಲರೂ ತಮ್ಮ ತಮ್ಮ ವೈಯಕ್ತಿಕ ಸಾಮಾಜಿಕ ಜಾಲತಾಣಗಳ ಖಾತೆಗಳ ಮೂಲಕ ಸರ್ಕಾರದ ಮೇಲೆ ಒತ್ತಡ ತರಬೇಕು. ಪಕ್ಷಾತೀತವಾಗಿ ಎಲ್ಲಾ ನಾಯಕರುಗಳು ವಿದ್ಯಾರ್ಥಿಗಳ ಅನುಕೂಲಕ್ಕೆ ಕೂಡಲೇ ಭಾವಿಸಬೇಕು ಎಂದು ಒತ್ತಾಯಿಸಿದರು.

**ವಿದ್ಯಾರ್ಥಿಗಳಿಗೆ ಯಾವುದೇ ಸೌಲಭ್ಯವಿಲ್ಲ**

**ಕಳೆದ ವರ್ಷದ ಫೆಬ್ರವರಿಯಲ್ಲಿ ಮೆಟ್ರೋ ದರ ಏರಿಕೆಯಾದ ನಂತರ ವಿದ್ಯಾರ್ಥಿಗಳಿಂದ ರಿಯಾಯಿತಿ ಪಾಸ್‌ಗಾಗಿ ಬೇಡಿಕೆ ಹೆಚ್ಚಾಗಿದೆ. ಪ್ರಸ್ತುತ, 15 ಕಿಲೋಮೀಟರ್‌ಗಿಂತ ಹೆಚ್ಚು ಪ್ರಯಾಣಿಸುವ ವಿದ್ಯಾರ್ಥಿಗಳು ತಿಂಗಳಿಗೆ ಟಿಕೆಟ್‌ಗಾಗಿ 3,360 ರೂ.ನಿಂದ 4,320 ರೂ.ವರೆಗೆ ವ್ಯಯಿಸುತ್ತಿದ್ದಾರೆ. ಸದ್ಯದ ನಿಯಮದಂತೆ ಸ್ಮಾರ್ಟ್ ಕಾರ್ಡ್ ಬಳಸುವವರಿಗೆ ಪೀಕ್ ಅವರ್‌ನಲ್ಲಿ ಶೇ. 5, ಉಳಿದ ಸಮಯದಲ್ಲಿ ಶೇ. 10 ರಷ್ಟು ಮಾತ್ರ ರಿಯಾಯಿತಿ ಸಿಗುತ್ತಿದೆ. ಆದರೆ, ವಿದ್ಯಾರ್ಥಿಗಳಿಗೆ ಪ್ರತ್ಯೇಕವಾದ ಯಾವುದೇ ವಿಶೇಷ ರಿಯಾಯಿತಿಗಳನ್ನು ನಮ್ಮ ಮೆಟ್ರೋ ಇದುವರೆಗೆ ಘೋಷಿಸಿಲ್ಲ.**

# ಹನುಮೋತ್ಸವ ಸಮಿತಿ ಸದಸ್ಯರ ವಿರುದ್ಧ ಕೇಸ್ : ಬೃಹತ್ ಪ್ರತಿಭಟನೆ

## ■ ಮೊದಲ ಬಾರಿಗೆ ಸರ್ವಸಮಾಜದ ಜೊತೆಗೆ ಪಕ್ಷಾತೀತವಾಗಿ ಜಾತ್ಯಾತೀತವಾಗಿ ಹನುಮ ಜಯಂತಿ ಆಚರಣೆ

• **ಉದಯವಾಹಿನಿ, ಗುಂಡ್ಲುಪೇಟೆ**

ಪಟ್ಟಣದಲ್ಲಿ ಆಯೋಜಿಸಿದ್ದ ಹನುಮ ಜಯಂತಿ ಕಾರ್ಯಕ್ರಮದ ಸಮಿತಿ ಸದಸ್ಯರ ವಿರುದ್ಧ ಪ್ರಕರಣ ದಾಖಲಿಸಿರುವುದನ್ನ ಖಂಡಿಸಿ ಬಿಜೆಪಿ ಚಾಮರಾಜನಗರ ಜಿಲ್ಲಾಧ್ಯಕ್ಷ ನಿರಂಜನ್ ಕುಮಾರ್ ನೇತೃತ್ವದಲ್ಲಿ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ಪಟ್ಟಣದ ಹನುಮ ದೇಗುಲದಿಂದ ಹೊರಟ ಪ್ರತಿಭಟನಾ ಕಾಲ್ನಡಿಗೆ ಜಾಥಾ ಪ್ರವಾಸಿ ಮಂದಿರ ವೃತ್ತದ ಮೂಲಕ ಎಂಡಿಸಿಸಿ ಬ್ಯಾಂಕ್ ವೃತ್ತದಲ್ಲಿ ಸಾಗಿ ತಹಶೀಲ್ದಾರ್ ಕಚೇರಿ ಮುಂಭಾಗ ಜಮಾಯಿಸಿದರು. ಈ ವೇಳೆ ಸರ್ಕಾರ ಹಾಗೂ ಶಾಸಕ ಗಣೇಶ್ ಪ್ರಸಾದ್, ಪೊಲೀಸ್ ಇಲಾಖೆ ವಿರುದ್ಧ ಧಿಕ್ಕಾರದ ಘೋಷಣೆಗಳನ್ನ ಕೂಗಿ ಆಕ್ರೋಶ ಹೊರಹಾಕಿದರು.

**ಬೆದರಿಕೆಗೆ ಜಗ್ಗುವವರು ನಾವಲ್ಲ**

ಮಾಜಿ ಶಾಸಕ ನಿರಂಜನ್ ಕುಮಾರ್ ಮಾತನಾಡಿ ಪಟ್ಟಣದಲ್ಲಿ ಮೊದಲ ಬಾರಿಗೆ ಸರ್ವಸಮಾಜದ ಜೊತೆಗೆ ಪಕ್ಷಾತೀತವಾಗಿ ಜಾತ್ಯಾತೀತವಾಗಿ ಹನುಮ ಜಯಂತಿ ಆಚರಣೆ ಸಾಂಗವಾಗಿ ನಡೆಯಿತು, ಕಾರ್ಯಕ್ರಮಕ್ಕೆ ಸರ್ವರಿಗೂ ಆಹ್ವಾನ ನೀಡಲಾಗಿತ್ತು ಅದರಂತೆ ಶಾಸಕರಿಗೂ ಆಹ್ವಾನ ನೀಡಲಾಗಿದೆ ಆದರೆ ಜಯಂತಿಗೆ ಪಾಲ್ಗೊಳ್ಳದೆ ದೂರ ಉಳಿದರು ಅವರ ನಡೆ



ಉದಯವಾಹಿನಿ ಚಿತ್ರ

**ಗೋವಿನಾಯಕ್ ಪ್ರಶ್ನೆಗೆ ತಬ್ಬಿಬ್ಬಾದ ಅಧಿಕಾರಿಗಳು**

**ಹಿಂದೂಗಳನ್ನ ಹತ್ತಿಕ್ಕುವ ಕುಟಿಲ ತಂತ್ರಗಾರಿಕೆಯಲ್ಲಿ ಮುಳುಗಿರುವ ಪೊಲೀಸ್ ಇಲಾಖೆ ಮನೆಗಳ್ಳತನ ದರೋಡೆ ಪ್ರಕರಣ ಭೇದಿಸುವಲ್ಲಿ ವಿಫಲವಾಗಿದೆ, ಸಾಮಾಜಿಕ ಜಾಲತಾಣಗಳಲ್ಲಿ ಘಟನೆ ಸಂಬಂಧ ಪೋಸ್ಟ್ ಹಾಕಿದ್ದರೂ ಸಹ ಆಸಕ್ತಿ ತೋರದ ಅಧಿಕಾರಿಗಳು ಹಿಂದೂಗಳಿಗೆ ಕಠಿಣ ನಿಯಮಗಳನ್ನ ಹೇರಲು ಹೊರಟಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಗೋವಿನಾಯಕ್ ಪ್ರಶ್ನೆಗೆ ತಬ್ಬಿಬ್ಬಾದ ಪೊಲೀಸ್ ಅಧಿಕಾರಿಗಳು ಸಮಜಾಯಿಷಿ ನೀಡಿ ಜಾರಿಕೊಂಡಿದ್ದು ಕಂಡುಬಂತು.**

ಹಿಂದೂ ಹಬ್ಬ ಆಚರಣೆಗೆ ಕುರಿತು ಅವರಿಗಿರುವ ಅಭಿಮಾನವನ್ನ ತೋರಿಸುತ್ತದೆ ಎಂದರು. ಶಾಸಕರು ಭಾಗಿಯಾಗಲು ಇಚ್ಛೆ ಇಲ್ಲದಿದ್ದರೆ ಸುಮ್ಮನಿರಬೇಕಿತ್ತು ಅವರ ಪಕ್ಷದ ಹಿಂದೂಗಳನ್ನು ಸಹ ಪಾಲ್ಗೊಳ್ಳದಂತೆ ತಡೆದಿದ್ದು ಸರಿಯಲ್ಲ ಎಂದು ಕಿಡಿಕಾರಿದರು.

ಹಿಂದೂ ಹಬ್ಬ ಆಚರಣೆಗಳಿಗೆ ಯಾವ ದೊಣ್ಣೆ ನಾಯಕನ ಅಪ್ಪಣೆ ಅವಶ್ಯಕತೆಯಿಲ್ಲ, ಹಿಂದೂ ಧರ್ಮದ ಅವನಾಶಕ್ಕೆ ಮುಂದಾಗಿರುವ ಶಾಸಕರ ಬೆದರಿಕೆಗೆ ಜಗ್ಗುವವರು ನಾವಲ್ಲ ಎಂದು ಗುಡುಗಿದರು. ಪ್ರತಿಭಟನೆ ವೇಳೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಎನ್. ಮಲ್ಲೇಶ್,

**ರೈತಪರ ಕೆಲಸ ಮಾಡುವಲ್ಲಿ ವಿಫಲ**

ಡಿ . ಮೊದಲ ವಾರದಲ್ಲಿ ಕೆರೆಗಳಿಗೆ ನೀರು ತುಂಬಿಸಲಾಗುವುದು ಎಂಬ ಶಾಸಕರ ಭರವಸೆ ಹುಸಿಯಾಗಿದೆ ರೈತರ ಕಣ್ಣೊರೆಸುವ ತಂತ್ರಗಾರಿಕೆ ಅನುಸರಿಸಿ ಮೊದಲೆರಡು ದಿನ ನೀರು ಹರಿಸಿ ಬಳಿಕ ತಣ್ಣಗಾದ ನಿಮ್ಮ ಜಾಣನಡೆ ಎಲ್ಲರಿಗೂ ಅರಿವಿದೆ, ನೀವು ನುಡಿದಂತೆ ನಡೆದ ಶಾಸಕರಲ್ಲ ನುಡಿದಂತೆ ನಡೆಯದ ಶಾಸಕರು ಎಂದು ಕಾಲೆಳೆದರು. ತಾಲ್ಲೂಕಿನಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ ಕಚೇರಿಯಲ್ಲಿ ಸಾರ್ವಜನಿಕ ಕೆಲಸಗಳಾಗುತ್ತಿಲ್ಲ, ಅಧಿಕಾರಿಗಳ ಮೇಲೆ ಹಿಡಿತವಿರದ ಶಾಸಕರಿಂದ ಕ್ಷೇತ್ರದ ಅಭಿವೃದ್ಧಿ ಹೇಗೆ ಸಾಧ್ಯ ಎಂದು ಛೇಡಿಸಿದರು.

ಬಸವರಾಜು, ಹಂಗಳ ಪ್ರಣಯ್, ನಾಗೇಶ್, ಸ್ವಾಮಿ ಕಣ್ಣೇಗಾಲ, ಡಾ.ನವೀನ್ ಮೌರ್ಯ, ಮಹೇಂದ್ರ ಗರಗನಹಳ್ಳಿ, ನಾಗೇಂದ್ರ ಮಾಡ್ರಹಳ್ಳಿ, ಮಲ್ಲೇಶ್, ನಮೋ ಸುರೇಶ್, ಮಂಜು, ಮಹೇಂದ್ರ ಅಂಕಹಳ್ಳಿ, ಮಂಜು ಹುಂಡೀಪುರ, ಸುನಿಲ್ ಮೂಡ್ನ್ಲು, ಮಂಡಲ ಅಧ್ಯಕ್ಷ ಮಹದೇವಪ್ರಸಾದ್, ರೇವಣ್ಣ ಕಬ್ಬಹಳ್ಳಿ,ಶಿವು ವೀರನಪುರ ಸೇರಿದಂತೆ ಮುಖಂಡರು ಕಾರ್ಯಕತರು ಹಾಜರಿದ್ದರು.

# ಮಗು ಮೇಲೆ ಬೀದಿನಾಯಿ ದಾಳಿ

• **ಉದಯವಾಹಿನಿ, ಮಾಗಡಿ:**


ಉದಯವಾಹಿನಿ ಚಿತ್ರ


ಪಟ್ಟಣದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಪಟ್ಟಣದ ಬಾಗೇಗೌಡ ಲೇಔಟ್‌ನಲ್ಲಿ ರಾತ್ರಿ ಬೀದಿನಾಯಿಗಳ ಹಿಂಡು ಮೂರು ವರ್ಷದ ಮಯಾಂಕ್, ಗಾನವಿ ಎಂಬಾಕೆ ಮೇಲೆ ದಾಳಿ ಮಾಡಿವೆ. ಗಾಯಗೊಂಡ ಮಕ್ಕಳಿಗೆ ಮಾಗಡಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಬೀದಿ ನಾಯಿಗಳ ಹಾವಳಿಗೆ ಕಡಿವಾಣ ಹಾಕುವಂತೆ ಪೋಷಕರು ಮನವಿ ಮಾಡಿದ್ದಾರೆ. ಬಾಗೇಗೌಡ ಬಡಾವಣೆಯಲ್ಲಿ 20 ರಿಂದ 25ಕ್ಕೂ ಹೆಚ್ಚು ಬೀದಿ ನಾಯಿಗಳು ವಾಸವಾಗಿವೆ. ಬೀದಿನಾಯಿಗಳ ಹಾವಳಿ ತಪ್ಪಿಸಬೇಕು. ಪುರಸಭೆಯವರು ಕ್ರಮವಹಿಸದಿದ್ದಲ್ಲಿ ಪುರಸಭೆ ಮುಂಭಾಗದಲ್ಲಿ ಪ್ರತಿಭಟಿಸಬೇಕಾಗುತ್ತದೆ ಎಂದು ಬಾಗೇಗೌಡ ಬಡಾವಣೆ ನಿವಾಸಿಗಳು ಎಚ್ಚರಿಕೆ ನೀಡಿದ್ದಾರೆ. ಬೀದಿನಾಯಿಗಳ ಹಾವಳಿ ಹೆಚ್ಚಾಗಿರುವುದರಿಂದ ಸಂತಾನ ಶಕ್ತಿ ಹರಣ ಚಿಕಿತ್ಸೆ ಮಾಡಲು ಯೋಜಿಸಲಾಗಿದೆ. ಮಾಗಡಿ ಪಟ್ಟಣದ ಶಾಲಾ ಕಾಲೇಜು, ಸರ್ಕಾರಿ ಕಚೇರಿ ವಾರ್ಡ್‌ಗಳಲ್ಲಿ ಒಟ್ಟು 95 ನಾಯಿಗಳು ಇದೆ ಎಂಬುದರ ಬಗ್ಗೆ ಮಾಹಿತಿ ಪಡೆಯಲಾಗಿದೆ. ಒಟ್ಟಾರೆ ಪಟ್ಟಣದಲ್ಲಿ 650ಕ್ಕೂ ಹೆಚ್ಚು ನಾಯಿಗಳು ಇದೆ ಎಂದು ಸರ್ವೆ ಮಾಡಿಸಲಾಗಿದೆ ಎಂದು ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕರು ಶ್ರೀನಿವಾಸ್ ತಿಳಿಸಿದರು. ಬಾಗೇಗೌಡರ ಬಡಾವಣೆಯಲ್ಲಿ ಬೀದಿನಾಯಿ ಹಾವಳಿ ಹೆಚ್ಚಾಗಿದೆ. ಇದರ ಹಾವಳಿ ತಪ್ಪಿಸುವ ಕೆಲಸ ಮಾಡಬೇಕು. ನಾಯಿಗಳ ಹಾವಳಿ ಹೆಚ್ಚಾದರೆ ನಾಯಿಯನ್ನು ಹಿಡಿದು ಪುರಸಭೆಯಲ್ಲಿ ಬಿಡಬೇಕಾಗುತ್ತದೆ ಎಂದು ಬಡಾವಣೆ ನಿವಾಸಿ ವಿಶ್ವನಾಥ್ ಎಚ್ಚರಿಕೆ ನೀಡಿದರು.

ಬೀದಿ ನಾಯಿಗಳನ್ನು ಹಿಡಿಯಲು ನಮಗೆ ಅವಕಾಶ ಇಲ್ಲ. ನಾಯಿಗಳಿಗೆ ಸಂತಾನ ಶಕ್ತಿ ಹರಣ ಚಿಕಿತ್ಸೆ ಮಾಡಿ ಮತ್ತೆ ಅದೇ ಸ್ಥಳದಲ್ಲಿ ಬಿಡಬೇಕೆಂಬ ಆದೇಶವಿದೆ. ಬೀದಿನಾಯಿ ಸಂತಾನ ಶಕ್ತಿಹರಣ ಚಿಕಿತ್ಸೆ ಮಾಡಿಸಲು ಟೆಂಡರ್ ಕರೆಯಲಾಗುತ್ತಿದೆ. ಅಲ್ಲಿವರೆಗೂ ಪೋಷಕರು ಚಿಕ್ಕ ಮಕ್ಕಳನ್ನು ಒಂಟಿಯಾಗಿ ಬಿಡದಂತೆ ಎಚ್ಚರ ವಹಿಸಬೇಕು. ನಡೆದಿರುವ ಘಟನೆ ಬಗ್ಗೆ ವರದಿ ತರಿಸಿಕೊಳ್ಳಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಶ್ರೀನಿವಾಸ್ ತಿಳಿಸಿದರು.

# ಮಗಳ ಮೇಲೆ ಮಲತಾಯಿ ಕ್ರೌರ್ಯ; ನಡೆಯಲಾಗದೆ ಬಾಲಕಿ ನರಳಾಟ

• **ಉದಯವಾಹಿನಿ, ಗುಂಡ್ಲುಪೇಟೆ**



ಮಗಳ ಮೇಲೆಯೇ ಮಲತಾಯಿ ಕ್ರೌರ್ಯ ಮೆರೆದಿರುವ ಘಟನೆ ಗುಂಡ್ಲುಪೇಟೆ ಪಟ್ಟಣದ ಕೆ ಎಸ್ ಎನ್ ಬಡಾವಣೆಯಲ್ಲಿ ಬೆಳಕಿಗೆ ಬಂದಿದೆ, ಬಾಲಕಿಯ ಮರ್ಮಾಂಗಕ್ಕೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚುವ ಮೂಲಕ ಚಿತ್ರಹಿಂಸೆ ನೀಡಿರುವುದು ಅಕ್ಕಪಕ್ಕದ ಮನೆಯವರಿಗೆ ಗೊತ್ತಾಗಿದೆ, ಮಲತಾಯಿ ವಿನಾಕಾರಣ ನನಗೆ ಕಳೆದೆರಡು ವರ್ಷಗಳಿಂದಲೂ ಚಿತ್ರಹಿಂಸೆ ನೀಡುತ್ತಿದ್ದಾಳೆ ನನಗೆ ನನ್ನವರೆಂದು ಯಾರು ಇಲ್ಲ ಎಂದು ಬಾಲಕಿ ಕಣ್ಣೀರಾಕಿದ್ದಾಳೆ. ಮೂಲತಃ ತಾಲ್ಲೂಕಿನ ನೇನೇಕಟ್ಟೆ ಗ್ರಾಮದ ಪುಟ್ಟರಾಜಾಚಾರಿ ಎಂಬವರ ಪತ್ನಿ ಸೌಮ್ಯ ಎಂಬಾಕೆ ಬಾಲಕಿಗೆ ದೈಹಿಕವಾಗಿ ಚಿತ್ರಹಿಂಸೆ ನೀಡಿ ವಿಚಿತ್ರವಾಗಿ ಕ್ರೌರ್ಯ ಮೆರೆದಿರುವ ಆರೋಪಿಯಾಗಿದ್ದಾಳೆ, ವೃತ್ತಿಯಲ್ಲಿ ಟೈಲರ್ ಆಗಿರುವ ಪುಟ್ಟರಾಜಾಚಾರಿ ಮೈಸೂರಿನಲ್ಲಿ ಕೆಲಸ ಮಾಡುತ್ತಿರುವುದಾಗಿ ಘಟನೆ ಸಂಬಂಧ ನನಗೇನು ಮಾಹಿತಿ ಇಲ್ಲ ಎಂದು ಸಬೂಬು ಹೇಳಿದ್ದಾರೆ ಆದರೆ ಮಗಳ ಮೇಲೆ ಮಲತಾಯಿ ನಡೆಸುತ್ತಿರುವ ಕ್ರೌರ್ಯ ತಂದೆಗೆ ತಿಳಿದಿಲ್ಲವೇ ಎಂದು ಸ್ಥಳೀಯರು ಪ್ರಶ್ನಿಸಿದ್ದಾರೆ.

**ಪೊಲೀಸ್ ಠಾಣೆಯಲ್ಲಿ ದೂರು ದಾಖಲು**

ಪುಟ್ಟರಾಜಾಚಾರಿಗೆ ಆರೋಪಿತೆ ಎರಡನೇ ಹೆಂಡತಿಯಾಗಿದ್ದು ಹತ್ತು ವರ್ಷಗಳ ಹಿಂದೆಯೇ ಹೆಣ್ಣು ಮಗುವನ್ನ ದತ್ತು ಪಡೆದು ಸಾಕಿ ಸಲಹಿದ್ದಾರೆ ಆದರೆ ದಿನಕಳೆದಂತೆ ಬಾಲಕಿಗೆ ಮಲತಾಯಿ ವಿನಾಕಾರಣ ಚಿತ್ರಹಿಂಸೆ ನೀಡಲು ಆರಂಭಿಸಿದ್ದಾಳೆ . ಏನೇನು ನೆಪವೊಡ್ಡಿ ಬಾಲಕಿಗೆ ಥಳಿಸುವುದು ಮರ್ಮಾಂಗಕ್ಕೆ ಕ್ರೂರವಾಗಿ ಹಲ್ಲೆ ನಡೆಸಿ ವಿಕೃತಿ ಮೆರೆಯುವುದನ್ನ ಮುಂದು ವರಿಸಿಕೊಂಡು ಬಂದಿದ್ದಾಳೆ ಎನ್ನಲಾಗಿದೆ, ಪ್ರತಿನಿತ್ಯ ಚಿತ್ರಹಿಂಸೆ ಸಹಿಸಿಕೊಂಡಿದ್ದ ಬಾಲಕಿ

**ಮಲತಾಯಿ ಪೊಲೀಸರ ಅತಿಥಿ**

**ಮಲತಾಯಿ ಚಿತ್ರಹಿಂಸೆ ಕುರಿತಂತೆ ಮಾಹಿತಿ ಸಂಗ್ರಹಿಸಿದ ಪೊಲೀಸರು ಮಹಿಳೆಯನ್ನ ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಆಸ್ಪತ್ರೆಗೆ ಸಿಡಿಪಿಓ ಹೇಮಾವತಿ ಭೇಟಿ ನೀಡಿ ಸಂತ್ರಸ್ತೆ ಬಾಲಕಿಯ ಹೇಳಿಕೆ ಪಡೆದು ಅಗತ್ಯ ಸೌಲಭ್ಯ ಒದಗಿಸುವ ಹಾಗೂ ಬಾಲಕಿ ಮೇಲೆ ಕ್ರೌರ್ಯ ನಡೆಸಿದ ಮಹಿಳೆ ಮೇಲೆ ಕಾನೂನು ರೀತ್ಯಾ ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದ್ದಾರೆ.**

ಗುರುವಾರ ಬೆಳಗ್ಗೆ ಮಲತಾಯಿಯ ಮಾರಣಾಂತಿಕ ಹಲ್ಲೆ ತಾಳಲಾರದೆ ಜೋರಾಗಿ ಚೀರಾಡಿದ್ದನ್ನ ಗಮನಿಸಿದ ಅಕ್ಕಪಕ್ಕದ ಮನೆಯವರು ಧಾವಿಸಿದ ವೇಳೆ ಆರೋಪಿ ಮಹಿಳೆ ಮೃಗೀಯ ವರ್ತನೆ ಕಂಡು ಬೆಚ್ಚಿಬಿದ್ದಿದ್ದಾರೆ ಕಿರಾತಕಿಯಿಂದ ಬಾಲಕಿಯನ್ನ ರಕ್ಷಣೆ ಮಾಡಿದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

## ಮಿನಿ ನ್ಯೂಸ್

### ಅನಧಿಕೃತವಾಗಿ ಗೃಹ ಬಳಕೆ ಸಿಲಿಂಡರ್ ಬಳಸದಂತೆ ಎಚ್ಚರಿಕೆ

• **ಉದಯವಾಹಿನಿ, ಚನ್ನಪಟ್ಟಣ**

ಚನ್ನಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಲ್ಯಾಣ ಮಂಟಪಗಳು, ಹೋಟೆಲ್‌ಗಳು, ಬೇಕರಿಗಳು, ಬೀದಿ ಬದಿಯ ತಿನಿಸು ವ್ಯಾಪಾರದ ಗಾಡಿಗಳಲ್ಲಿ ಗೃಹಬಳಕೆ ಸಿಲಿಂಡರ್‌ಗಳನ್ನು ಉಪಯೋಗಿಸುತ್ತಿರುವುದು ತಿಳಿದುಬಂದಿದೆ. ಇದು ಲಿಕ್ವಿಫೈಯ್ಡ್ ಪೆಟ್ರೋಲಿಂ ಗ್ಯಾಸ್ ಆರ್ಡರ್-2000 ಉಲ್ಲಂಘಿಸಿದಂತಾಗುತ್ತದೆ. ಹಾಗಾಗಿ, ವಾಣಿಜ್ಯ ಉದ್ದೇಶಗಳಿಗೆ ಗೃಹ ಬಳಕೆ ಸಿಲಿಂಡರ್‌ಗಳನ್ನು ಉಪಯೋಗಿಸುವಂತಿಲ್ಲ. ಇದು ಕಾನೂನು ಬಾಹಿರವಾಗಿರುತ್ತದೆ. ಆದರೂ ಯಾರಾದರೂ ಬಳಸುತ್ತಿರುವುದು ಕಂಡುಬಂದರೆ ಅನಿರೀಕ್ಷಿತವಾಗಿ ಭೇಟಿ ನೀಡಿ ತನಿಖೆ ನಡೆಸಲಾಗುವುದು. ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು. ಆದ್ದರಿಂದ ಎಲ್ಲಾ ಕಲ್ಯಾಣ ಮಂಟಪಗಳು, ಹೋಟೆಲ್‌ಗಳು, ಬೇಕರಿಗಳು, ಬೀದಿ ಬದಿಯ ತಿನಿಸು ವ್ಯಾಪಾರದ ಗಾಡಿಗಳಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಮಾತ್ರ ಉಪಯೋಗಿಸಬೇಕು ಎಂದು ಚನ್ನಪಟ್ಟಣ ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


### ಮಾದರ ಮಹಾಸಭಾ; 10 ಸಾವಿರ ಸದಸ್ಯತ್ವದ ಗುರಿ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಕರ್ನಾಟಕ ಮಾದರ ಮಹಾಸಭಾ ಜಿಲ್ಲಾ ಘಟಕಕ್ಕೆ ಪದಾಧಿಕಾರಿಗಳನ್ನು ನೇಮಿಸಲಾಗಿದೆ. ಮಹಾಸಭಾ ಜಿಲ್ಲಾ ಅಧ್ಯಕ್ಷರಾಗಿ ಪತ್ರೇನಹಳ್ಳಿ ಕೃಷ್ಣಪ್ಪ ನೇಮಕವಾಗಿದ್ದಾರೆ. ನಗರದಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಹಾಸಭಾ ರಾಜ್ಯ ನಾಯಕರು ಪದಾಧಿಕಾರಿಗಳ ಪಟ್ಟಿ ಬಿಡುಗಡೆಗೊಳಿಸಿದರು. ಈ ವೇಳೆ ಮಾತನಾಡಿದ ಪತ್ರೇನಹಳ್ಳಿ ಕೃಷ್ಣಪ್ಪ, ಜಿಲ್ಲೆಯಲ್ಲಿ ಮಾದಿಗ ಸಮಾಜವು ದೊಡ್ಡ ಸಂಖ್ಯೆಯಲ್ಲಿ ಇದೆ. ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ ಎರಡು ಸಾವಿರ ಮಂದಿಯನ್ನು ಮಹಾಸಭಾ ಸದಸ್ಯರನ್ನಾಗಿ ಮಾಡಲಾಗುವುದು ಎಂದು ಹೇಳಿದರು. ಹಿರಿಯರ ಸಹಕಾರದಲ್ಲಿ ಮಹಾಸಭಾಕ್ಕೆ ಸದಸ್ಯತ್ವ ಮಾಡಿಸಲಾಗುವುದು. ಸಮುದಾಯ ಒಗ್ಗೂಡಿಸಲಾಗುವುದು. ಸಹೋದರ ಸಮುದಾಯಗಳ ಜೊತೆ ಸಾಮಾಜಿಕ ಸಾಮರಸ್ಯ ಸಾಧಿಸಲಾಗುವುದು. ನಮ್ಮ ಸಮಾಜವನ್ನು ಗಟ್ಟಿಗೊಳಿಸುವಲ್ಲಿ ಯುವಕರ ಪಾತ್ರ ಹಿರಿದು. ಈ ದಿಕ್ಕಿನಲ್ಲಿ ಎಲ್ಲರೂ ಒಗ್ಗೂಡಿ ಮುನ್ನಡೆಯಬೇಕು ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿಯೇ 10 ಸಾವಿರಕ್ಕೂ ಹೆಚ್ಚು ಸದಸ್ಯತ್ವ ಮಾಡುವ ಗುರಿ ಇದೆ. ಸಮಾಜದ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಮುನ್ನಲೆಗೆ ಬರಬೇಕು. ಈ ದಿಕ್ಕಿನಲ್ಲಿ ಮಹಾಸಭಾ ಕಾರ್ಯನಿರ್ವಹಿಸಲಿದೆ ಎಂದು ಹೇಳಿದರು. ಮಹಾಸಭಾ ರಾಜ್ಯ ಕಾರ್ಯಕಾರಿ ಸದಸ್ಯ ಶಿವಣ್ಣ ಮಾತನಾಡಿ, ರಾಜ್ಯದಲ್ಲಿ ವಿವಿಧ ಜಾತಿ, ಸಮುದಾಯಗಳು ಸಂಘ ರೂಪಿಸಿಕೊಂಡು ಅಭಿವೃದ್ಧಿ ಹೊಂದುತ್ತಿವೆ. ಪರಿಶಿಷ್ಟ ಜಾತಿಯಲ್ಲಿಯೇ ಮಾದಿಗ ಸಮುದಾಯ ಬಹುಸಂಖ್ಯೆಯಲ್ಲಿದೆ ಎಂದು ಹೇಳಿದರು. ಸಮುದಾಯದ 18 ವರ್ಷ ಮೇಲ್ಪಟ್ಟವರು ಸದಸ್ಯರಾಗಬಹುದು. ಸದಸ್ಯತ್ವದ ವಿಚಾರದಲ್ಲಿ ರಾಜ್ಯದಲ್ಲಿಯೇ ಚಿಕ್ಕಬಳ್ಳಾಪುರ ಮಹಾಸಭಾ ಮೊದಲ ಸ್ಥಾನದಲ್ಲಿ ಇದೆ. ಮಾದಿಗ ಸಮಾಜ ಮುಖ್ಯವಾಹಿನಿಗೆ ಬರಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡಲಾಗುವುದು ಎಂದು ಹೇಳಿದರು.

### ಕುರಿಯ ಹೊತ್ತೊಯ್ದ ಚಿರತೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಭಾರತೀನಗರ**

ಸಮೀಪದ ಮೆಣಸಗೆರೆ ಗ್ರಾಮದಲ್ಲಿ ಕಳೆದ ಎರಡು ಮೂರು ದಿನಗಳಿಂದಲೂ ಚಿರತೆ ಕಾಣಿಸಿಕೊಳ್ಳುತ್ತಿದ್ದು, ಬೆಳಿಗ್ಗೆ ಕುರಿಯೊಂದನ್ನು ಹೊತ್ತೊಯ್ದಿದೆ. ಇದೇ ಚಿರತೆ ಮೆಣಸಗೆರೆ ಸಮೀಪದ ಕಾಳಗೆಂಪನದೊಡ್ಡಿ ಬಳಿ ಕಾಣಿಸಿಕೊಂಡು ಜನರನ್ನು ಗಾಬರಿಗೊಳಿಸಿತ್ತು. ಕಳೆದ ಮೂರು ದಿನಗಳಿಂದ ಮೆಣಸಗೆರೆ ಗ್ರಾಮದ ಮನೆಗಳ ಬಳಿ, ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲೂ ಕಾಣಿಸಿಕೊಂಡಿದೆ. ಗ್ರಾಮದ ಮುಖಂಡ ಪಟೇಲ್ ಉಮೇಶ್ ಅವರ ಮನೆ ಬಳಿಯಿಂದ ನಾಯಿಯೊಂದನ್ನು ಹೊತ್ತೊಯ್ದು, ತುಸು ದೂರದಲ್ಲಿನ ಕಬ್ಬಿನ ಗದ್ದೆಯಲ್ಲಿ ನಾಯಿಯನ್ನು ತಿಂದು ಹಾಕಿದೆ. ಇದರಿಂದ ಗ್ರಾಮದ ಜನರು ಆತಂಕಕ್ಕೀಡಾಗಿದ್ದಾರೆ.

ಈ ಬಗ್ಗೆ ಅರಣ್ಯಾಧಿಕಾರಿಗಳಿಗೆ ವಿಷಯ ತಿಳಿಸಿದ್ದು, ಅರಣ್ಯ ಇಲಾಖೆ ಸಿಬ್ಬಂದಿ ಗ್ರಾಮಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ತೆರಳಿದ್ದು ಬಿಟ್ಟರೆ ಚಿರತೆ ಸೆರೆಗೆ ಯಾವುದೇ ರೀತಿಯ ಕ್ರಮವನ್ನು ವಹಿಸಿಲ್ಲ ಎಂದು ಗ್ರಾಮ ಮುಖಂಡರಾದ ಪಟೇಲ್ ಉಮೇಶ್, ಪ್ರಕಾಶ್, ಡಿ.ಎಲ್. ಸತೀಶ್ (ಕೋಡಹಳ್ಳಿ) ಆರೋಪಿಸಿದ್ದಾರೆ. ಕೂಡಲೇ ಬೋನನ್ನು ಇರಿಸಿ ಚಿರತೆಯನ್ನು ಸೆರೆ ಹಿಡಿಯಲು ಕ್ರಮ ವಹಿಸಬೇಕೆಂದು ಒತ್ತಾಯಿಸಿದ್ದಾರೆ.

# ಆನೆಕಾಡು ಬ್ರಾಂಡ್ ಆಹಾರ ಉತ್ಪನ್ನ ಬಿಡುಗಡೆ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕನಕಪುರ**

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಪರಿಸರ ಸೂಕ್ಷ್ಮ ವಲಯದಲ್ಲಿ ಬರುವಂತಹಹಳ್ಳಿಗಳಲ್ಲಿ ಬೆಳೆದಿರುವಂತಹ ಆಹಾರ ಉತ್ಪನ್ನಗಳನ್ನು ಅನೆಕಾಡು ಎಂಬ ಬ್ರಾಂಡ್ ಹೆಸರಿನಲ್ಲಿ ಗ್ರಾಹಕರಿಗೆ ತಲುಪಿಸುವ ಕಾರ್ಯಕ್ಕೆ ಅರಣ್ಯ ಇಲಾಖೆ ಮುಂದಾಗಿದೆ.

ಆನೆಕಾಡು ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸುವ ಕಾರ್ಯಕ್ರಮದ ಉದ್ಘಾಟನೆಯು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯುಲ್ಲಿರುವ ತಾಲ್ಲೂಕಿನ ಕೋಡಿಹಳ್ಳಿ ಆರ್‌ಎಫ್‌ಒ ಕಚೇರಿಯಲ್ಲಿ ನಡೆಯಿತು. ಉದ್ಯಾನವನದ ಡಿಸಿಎಫ್ ಕಾಜೋಲ್ ಅಜಿತ್ ಪಾಟೀಲ್ ಅವರು ಉತ್ಪನ್ನಗಳನ್ನು ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಅರಣ್ಯದಂಚಿನ ಕೃಷಿ ಉತ್ಪನ್ನಗಳು ಉತ್ಕೃಷ್ಟ ಮತ್ತು ಆರೋಗ್ಯಕರವಾಗಿರುತ್ತವೆ. ಅದಕ್ಕಾಗಿ ಇಲ್ಲಿನ ಆಹಾರ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ದೊರೆಯುತ್ತದೆ. ಅದಕ್ಕಾಗಿ ಪ್ರತ್ಯೇಕ ಮಾರುಕಟ್ಟೆ ಕಲ್ಪಿಸಲು ಆನೆಕಾಡು ಫುಡ್ ಪ್ರಾಡಕ್ಟ್ ಬ್ರಾಂಡ್ ಸೃಷ್ಟಿಸಲಾಗಿದೆ. ಇದರಿಂದ ಅರಣ್ಯದಂಚಿನ ರೈತರಿಗೆ ಹೆಚ್ಚಿನ ಉಪಯೋಗವಾಗಲಿದೆ' ಎಂದರು. ದೇಶದಲ್ಲಿ ಪ್ರಥಮ ಬಾರಿಗೆ ಆನೆಕಾಡು ಬ್ರಾಂಡ್ ಅನ್ನು ಮಾರುಕಟ್ಟೆಗೆ ಪರಿಚಯಿಸುತ್ತಿದ್ದೇವೆ. ಪರಿಸರ ಉಳಿವು, ಅರಣ್ಯ ರಕ್ಷಣೆ ಹಾಗೂ ಅರಣ್ಯದಂಚಿನ ಗ್ರಾಮಗಳ ಜನರ ಬದುಕು ಅಭಿವೃದ್ಧಿಗೊಳಿಸಲು ಈ ಒಂದು ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ' ಎಂದು ತಿಳಿಸಿದರು. ಎಸಿಎಫ್ ಟಿ.ಎಂ. ರವಿಕುಮಾರ್ ಮಾತನಾಡಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಪರಿಸರ ಸೂಕ್ಷ್ಮ ವಲಯದಲ್ಲಿ 77 ಗ್ರಾಮಗಳು ಮತ್ತು 16 ಹಾಡಿಗಳು ಬರುತ್ತವೆ. ಈ ಗ್ರಾಮಗಳಲ್ಲಿ ಈಗಲೂ ಸಾಂಪ್ರದಾಯಿಕ ಕೃಷಿಯನ್ನು ಮಾಡುತ್ತಿದ್ದು, ಇಲ್ಲಿನ ಆಹಾರ ಉತ್ಪನ್ನಗಳು ರಾಸಾಯನಿಕ ಮುಕ್ತವಾಗಿರುತ್ತವೆ ಎಂದು ಹೇಳಿದರು. ಈ ಪ್ರದೇಶದ ಉತ್ಕೃಷ್ಟ ಉತ್ಪನ್ನಗಳನ್ನು ಗ್ರಾಹಕರಿಗೆ ನೇರವಾಗಿ ತಲುಪಿಸಲು ರೂಪಿಸಿರುವ

**ಆನ್‌ಲೈನ್‌ನಲ್ಲೂ ಮಾರಾಟ**

**ಆನೆಕಾಡು ಆಹಾರ ಉತ್ಪನ್ನಗಳನ್ನು ಆಫ್‌ಲೈನ್ ಜೊತೆಗೆ ಆನ್‌ಲೈನ್‌ನಲ್ಲೂ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗುವುದು. ಅಂಚೆ ಇಲಾಖೆಯಿಂದ ಗ್ರಾಹಕರಿಗೆ ಉತ್ಪನ್ನ ತಲುಪಿಲು ಒಪ್ಪಂದ ಮಾಡಿಕೊಳ್ಳುವ ಕುರಿತು ಮಾತುಕತೆ ನಡೆಯುತ್ತಿದೆ. ಕಾಡಂಚಿನ ಗ್ರಾಮದ ರೈತರು ಅರಣ್ಯ ಇಲಾಖೆ ಮಾರ್ಗದರ್ಶನದಲ್ಲಿ ಇದರ ಸದುಪಯೋಗ ಪಡೆಯಬೇಕು. ಅರಣ್ಯ ಪ್ರದೇಶವನ್ನು ವನ್ಯಜೀವಿ ವಲಯ ಎಂದು ಘೋಷಿಸಿದ ಬಳಿಕ ಒಂದು ಕಿ.ಮೀ. ವ್ಯಾಪ್ತಿಯ ಗ್ರಾಮಗಳು ಪರಿಸರ ಸೂಕ್ಷ್ಮ ಪ್ರದೇಶಗಳಾಗಿವೆ. ಇಲ್ಲಿ ಕೃಷಿ ಹೊರತುಪಡಿಸಿ ಪರಿಸರಕ್ಕೆ ಮಾರಕವಾದ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ' ಎಂದು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಡಿಸಿಎಫ್ ಕಾಜೋಲ್ ಅಜಿತ್ ಪಾಟೀಲ್ ಹೇಳಿದರು.**

ಆನೆಕಾಡು ಬ್ರಾಂಡ್‌ನ ಆಹಾರ ಉತ್ಪನ್ನಗಳ ಬಗ್ಗೆ ರೈತರಿಗೆ ಹೆಚ್ಚು ಅರಿವು ಮೂಡಿಸಬೇಕಿದೆ. ಮುಂದಿನ ದಿನಗಳಲ್ಲಿ ಇಲಾಖೆ ಮಾರ್ಗದರ್ಶನದಲ್ಲಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದರ ಬಗ್ಗೆ ಜಾಗೃತಿ ಮೂಡಿಸಲಾಗುವುದು. ಅದಕ್ಕೆ ರೈತರು ಸಹಕರಿಸಬೇಕು ಎಂದರು.

# ಜಿಲ್ಲಾ ಕಾರ್ಯದರ್ಶಿಯಾಗಿ ಸತೀಶ್ ಪಾದ್ರಳ್ಳಿ ನೇಮಕ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ರಾಮನಗರ**

ಬೆಂಗಳೂರು ದಕ್ಷಿಣ ಜಿಲ್ಲೆ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಯಾಗಿ ಸತೀಶ್‌ಪಾದ್ರಳ್ಳಿ ನೇಮಕವಾಗಿದ್ದಾರೆ. ಈ ವಿಷಯವಾಗಿ ಸಂಘದ ಜಿಲ್ಲಾಧ್ಯಕ್ಷರಾದ ಕೆ.ಸತೀಶ್ ಮಾತನಾಡಿ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಸತೀಶ್ ಅವರನ್ನು ಜಿಲ್ಲಾ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಎಲ್ಲರ ಸಹಕಾರ ಮಾರ್ಗದರ್ಶನ ಪಡೆದು ವಹಿಸಿರುವ ಜವಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ಶುಭ ಕೋರಿದರು.

ನನಗೆ ನೀಡಿರುವ ಹೊಸ ಜವಾಬ್ದಾರಿ ಅಧಿಕಾರವಲ್ಲ, ಬದಲಿಗೆ ಅದು ಸೇವೆ ಮತ್ತು ಜವಬ್ದಾರಿ ಎಂದು ಭಾವಿಸಿದ್ದೇನೆ. ಎಲ್ಲರ ಸಹಕಾರದೊಂದಿಗೆ ಈ ಜವಾಬ್ದಾರಿಯನ್ನು ನಿಭಾಯಿಸುವುದಾಗಿ ತಿಳಿಸಿದ ಅವರು ಜಿಲ್ಲಾ ಸಂಘದ ಎಲ್ಲಾ ನಿರ್ದೇಶಕರಿಗೆ, ಸಮಸ್ತ ನೌಕರ ಬಳಗ ಹಾಗೂ ಶಿಕ್ಷಕರ ಬಳಗಕ್ಕೆ ಧನ್ಯವಾದಗಳನ್ನು ಸಲ್ಲಿಸಿದರು.

ಸಂಘದ ಜಿಲ್ಲಾಧ್ಯಕ್ಷ ಕೆ.ಸತೀಶ್, ಸಿಡಿಪಿಓ ಸುರೇಂದ್ರ, ಬೆಸ್ಕಾಂ ಇಂಜಿನಿಯರ್ ಪ್ರಭಾಕರ್, ನಿರ್ದೇಶಕ ರಾಘವೇಂದ್ರ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ವಿಜಯ್‌ಕುಮಾರ್, ಉಪಾಧ್ಯಕ್ಷರಾದ ದರ್ಶನ್, ಶಂಕರಾನಂದ, ಜೈ ಪ್ರಕಾಶ್, ಎನ್.ಜೆ.ರಮೇಶ್, ಗಣೇಶ್, ಮೋಹನ್, ಪ್ರಭು, ಗಿರೀಶ್ ಸೇರಿದಂತೆ ಪದಾಧಿಕಾರಿಗಳು, ಸ್ನೇಹಿತರು ಸತೀಶ್ ಅವರನ್ನು ಅಭಿನಂದಿಸಿ ಶುಭ ಕೋರಿದರು.

**ನನ್ನ ಮೇಲೆ ವಿಶ್ವಾಸವಿಟ್ಟು ಹಿಂದಿನಿಂದಲೂ ನನಗೆ ಬೆನ್ನು ತಟ್ಟಿ ಮಾರ್ಗದರ್ಶನ ನೀಡುತ್ತಿರುವ ಸಂಘದ ಕ್ರಿಯಾಶೀಲ ಜಿಲ್ಲಾಧ್ಯಕ್ಷರಾದ ಕೆ.ಸತೀಶ್, ಖಜಾಂಚಿ ಜಗದೀಶ್, ರಾಜ್ಯ ಪರಿಷತ್ ಸದಸ್ಯ ಎಂ.ವಿ.ಯತೀಶ್, ಕಾನೂನು ಸಲಹೆಗಾರ ಶಿವಸ್ವಾಮಿ, ಹಿರಿಯ ಉಪಾಧ್ಯಕ್ಷ ಸಿ.ಭೈರಪ್ಪ, ಕಾರ್ಯಾಧ್ಯಕ್ಷ ಎಂ.ಪ್ರದೀಪ್, ಉಪಾಧ್ಯಕ್ಷ ದೀಪಕ್ ಕುಮಾರ್ ಹಾಗೂ ಎಲ್ಲಾ ತಾಲ್ಲೂಕು ಅಧ್ಯಕ್ಷರುಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ.**
**-ಸತೀಶ್ ಪಾದ್ರಳ್ಳಿ**
**ನೂತನ ಜಿಲ್ಲಾ ಕಾರ್ಯದರ್ಶಿ**

# ತಾಲ್ಲೂಕು ಕಚೇರಿ ಮುಂಭಾಗ ಅಂಬೇಡ್ಕರ್ ಪ್ರತಿಮೆ ಸ್ಥಾಪನೆಗೆ ಮುಖಂಡರ ಒತ್ತಾಯ

• **ಉದಯವಾಹಿನಿ, ಗುಂಡ್ಲುಪೇಟೆ**

ಪಟ್ಟಣದ ತಹಶೀಲ್ದಾರ್ ಕಚೇರಿ ಮುಂಭಾಗದಲ್ಲಿ ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಮಾಡುವಂತೆ ಪ್ರಗತಿಪರ ಸಂಘಟನೆ ಹಾಗೂ ವಿವಿಧ ಪಕ್ಷಗಳ ಮುಖಂಡರು ಒತ್ತಾಯಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಡಾ.ನವೀನ್ ಮೌರ್ಯ ಪಟ್ಟಣದ ಹೊರವಲಯದ ಅಂಬೇಡ್ಕರ್ ಭವನದ ಮುಂಭಾಗ ಜ. 10 ರಂದು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಬಾಬಾ ಸಾಹೇಬರ ಪ್ರತಿಮೆ ಸ್ಥಾಪನೆಗೆ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹದೇವಪ್ಪ ಸಂಸದ ಸುನಿಲ್ ಬೋಸ್, ಶಾಸಕ ಗಣೇಶ್ ಪ್ರಸಾದ್ ಭೂಮಿಪೂಜೆ ನೆರವೇರಿಸುವ ಕುರಿತು ಕರಪತ್ರ ಹಂಚುವ ಮೂಲಕ ಪ್ರಚಾರ ನಡೆಸಲಾಗುತ್ತಿದೆ,

**ಶಂಕುಸ್ಥಾಪನೆಯಿಂದ ಹಿಂದೆ ಸರಿಯುವಂತೆ ಆಗ್ರಹ**


ಉದಯವಾಹಿನಿ ಚಿತ್ರ

ಅಂಬೇಡ್ಕರ್ ಪ್ರತಿಮೆ ನಿರ್ಮಾಣದ ವಿಚಾರ ಸಂತಸಕರ ಆದರೆ ಗೊತ್ತು ಪಡಿಸಿದ ಸ್ಥಳದ ಕುರಿತಂತೆ ನಮ್ಮ ಆಕ್ಷೇಪಣೆ ಇದೆ ಆದುದರಿಂದ ಶಂಕುಸ್ಥಾಪನೆ ಕೈಬಿಡಬೇಕು ಎಂದು ಒತ್ತಾಯಿಸಿದರು. ಪ್ರತಿಮೆ ನಿರ್ಮಾಣ ಸ್ಥಳದಲ್ಲಿ ಯಾವುದೇ ಭದ್ರತೆಯಿಲ್ಲ ಯೋಗ್ಯವಲ್ಲದ ಸ್ಥಳದಲ್ಲಿ ಪ್ರತಿಮೆ ನಿರ್ಮಾಣಕ್ಕೆ ನಮ್ಮ ವಿರೋಧವಿದೆ, ಮಹಾನ್ ನಾಯಕನಿಗೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಸ್ಥಳ ಬದಲಾವಣೆ ಮಾಡಬೇಕು ಇಲ್ಲವಾದರೆ ತಡೆಯೊಡ್ಡಬೇಕಾಗುತ್ತದೆ ಎಂದು ಎಚ್ಚರಿಸಿದರು.

**ಅಂಬೇಡ್ಕರ್ ಪ್ರತಿಮೆ ಸ್ಥಾಪನೆ ಮಾಡಿ**

**ಬಾಬಾ ಸಾಹೇಬರು ಅಖಂಡ ಭಾರತದ ಎಲ್ಲಾ ಸಮಾಜದವರ ಸ್ವತ್ತಾಗಿದ್ದಾರೆ ಹಾಗಾಗಿ ಎಲ್ಲಾ ಸಮಾಜದವರು ಕೈ ಎತ್ತಿ ಮುಗಿಯುವ ವಾತಾವರಣ ಸೃಷ್ಟಿ ಮಾಡಬೇಕಿರುವ ಸಮಾಜ ಕಲ್ಯಾಣ ಇಲಾಖೆ ಎಲ್ಲಾ ಆಯಾಮಗಳಲ್ಲೂ ಯೋಚಿಸಬೇಕಿದೆ, ತಾಲ್ಲೂಕು ಕಚೇರಿ ಮುಂಭಾಗ ಅಂಬೇಡ್ಕರ್ ಪ್ರತಿಮೆ ಸ್ಥಾಪನೆ ಮಾಡಿ ಎಂದು ಸಲಹೆ ನೀಡಿದರು.**

ನಮ್ಮ ಮನವಿಗೆ ಸ್ಪಂದಿಸದೆ ಶಂಕುಸ್ಥಾಪನೆಗೆ ಮುಂದಾಗಿದ್ದೆಯಾದಲ್ಲಿ ಕಾನೂನು ಸುವ್ಯವಸ್ಥೆ ಹಾಳಾದಲ್ಲಿ ಅದಕ್ಕೆ ಸಂಬಂದಪಟ್ಟವರೆ ನೇರ ಹೊಣೆ ಹೊರಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡ ಅಗತಗೌಡನಹಳ್ಳಿ ಬಸವರಾಜು ಮಾತನಾಡಿದರು ಈ ಸಂಧರ್ಭದಲ್ಲಿ ಬಿಎಸ್ಪಿ ಮುಖಂಡ ಬಸವಣ್ಣ ಕಿಲಗರೆ, ನಾಗರಾಜು, ನಾಗುಸ್ವಾಮಿ, ಶಿವು ವೀರನಪುರ, ನಾಗುಸ್ವಾಮಿ, ಕಬ್ಬಳ್ಳಿ ರೇವಣ್ಣ, ಸೋಮು ಮುಂಟೀಪುರ, ಮಲ್ಲಿಕಾರ್ಜುನ, ನವೀನ್ ರಾಘವಪುರ, ಶಿವಕುಮಾರ್, ಸೇರಿದಂತೆ ಹಲವರು ಹಾಜರಿದ್ದರು.

# ಬಿಪಿಎಲ್ ಕಾರ್ಡ್ ರದ್ದು; ಅನ್ನಭಾಗ್ಯದ ಜತೆ ಇತರೆ ಭಾಗ್ಯಗಳಿಗೂ ಕುತ್ತು

## ● ಇದುವರೆಗೂ 13,427 ಬಿಪಿಎಲ್ ಕಾರ್ಡ್‌ಗಳನ್ನು ಎಪಿಎಲ್ ಕಾರ್ಡ್‌ಗಳಾಗಿ ಪರಿವರ್ತನೆ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ರಾಜ್ಯದಲ್ಲಿ ಅನರ್ಹ ಬಿಪಿಎಲ್ ಪಡಿತರ ಚೀಟಿದಾರರನ್ನು ಪತ್ತೆ ಹಚ್ಚಿ ಅವರ ಕಾರ್ಡ್‌ಗಳನ್ನು ರದ್ದು ಮಾಡುವ, ಇಲ್ಲ ಎಪಿಎಲ್‌ಗೆ ಪರಿವರ್ತಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಜಿಲ್ಲೆಯಲ್ಲೂ ಅನರ್ಹ ಪಡಿತರ ಚೀಟಿ ಪತ್ತೆ ಕಾರ್ಯಾಚರಣೆ ನಡೆದಿದ್ದು, ಇದುವರೆಗೂ 13,427 ಬಿಪಿಎಲ್ ಕಾರ್ಡ್‌ಗಳನ್ನು ಎಪಿಎಲ್ ಕಾರ್ಡ್‌ಗಳಾಗಿ ಪರಿವರ್ತಿಸಲಾಗಿದೆ.

ಸರಕಾರದ ಸೂಚನೆಯಂತೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಿಲ್ಲಾದ್ಯಂತ ಬಿಪಿಎಲ್ ಕಾರ್ಡ್‌ಗಳ ಸಮೀಕ್ಷೆ ಮತ್ತು ಪರಿಶೀಲನೆ ಕೈಗೊಂಡಿದೆ. ಜಿಲ್ಲೆಯಲ್ಲಿ ಪ್ರತಿ ಪಡಿತರ ವಿತರಣೆ ಅಂಗಡಿಗೆ 10 ರಂತೆ ಕಾರ್ಡ್ ಹಾಗೂ ಕೇಂದ್ರ ಸರಕಾರದ ನಿಯಮಗಳಂತೆ ಇದುವರೆಗೂ ಜಿಲ್ಲೆಯಲ್ಲಿ 13,426 ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಲಾಗಿದೆ.

**ರದ್ದಿಗೆ ಕಾರಣ ಏನು? :** ಪ್ರತಿ ಪಡಿತರ ಅಂಗಡಿ ವ್ಯಾಪ್ತಿಯಲ್ಲಿ ತಲಾ 10 ಕಾರ್ಡ್ ರದ್ದು ಹಾಗೂ ಕೇಂದ್ರ ಸರಕಾರದ ಆದೇಶದನ್ವಯ ವಾರ್ಷಿಕ 1.20 ಲಕ್ಷಕ್ಕಿಂತ ಹೆಚ್ಚಿನ ಆದಾಯ ಇರುವವರು, ಜಿಎಸ್‌ಟಿ ಪಾವತಿದಾರರು, ಹೊರ ರಾಜ್ಯಗಳಲ್ಲೂ ಪಡಿತರ ಚೀಟಿ ಹೊಂದಿರುವವರು, ರಾಜ್ಯದಲ್ಲೇ ಎರಡೆರಡು ಪಡಿತರ ಚೀಟಿ ಇದ್ದವರಿಗೆ ಕೊಕ್ ನೀಡಲಾಗಿದೆ. ಶತಾಯುಷಿಗಳು, 6ರಿಂದ 12 ತಿಂಗಳ ಅವಧಿಯಲ್ಲಿ ಒಮ್ಮೆಯೂ ಪಡಿತರ ಪಡೆಯದವರು, 7.5 ಎಕರೆಗಿಂತ ಹೆಚ್ಚಿನ ಕೃಷಿ ಭೂಮಿ ಹೊಂದಿರುವವರನ್ನು ಗುರಿಯಾಗಿಸಿ


ಉದಯವಾಹಿನಿ ಚಿತ್ರ

ಬಿಪಿಎಲ್ ಕಾರ್ಡ್ ರದ್ದುಪಡಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ.

**ಕಾರ್ಯಾಚರಣೆ ನಿರಂತರ:** ಹಲವಾರು ಮಾನದಂಡಗಳಿದ್ದರೂ ಅವುಗಳನ್ನು ಉಲ್ಲಂಘಿಸಿ ಕಾರ್ಡ್‌ಗಳನ್ನು ಹೊಂದಿರುವವರ ವಿರುದ್ಧ ಕಾರ್ಯಾಚರಣೆ ನಿರಂತರವಾಗಿ ನಡೆದಿದೆ. ಅರ್ಹ ಫಲಾನುಭವಿಗಳಿಗೆ ನ್ಯಾಯಯುತ ಪಡಿತರ ಹಾಗೂ ಸರಕಾರದ ಇನ್ನಿತರ ಸೌಲಭ್ಯ ಕಲ್ಪಿಸಲು ಇಲಾಖೆ ದಿಟ್ಟ ಹೆಜ್ಜೆ ಇಟ್ಟಿದೆ. ಆದರೆ ಹಲವೆಡೆ ಅರ್ಹರಿಗೂ ಬಿಪಿಎಲ್ ಪಡಿತರ ಕಾರ್ಡ್ ಬದಲಾವಣೆ ಮಾಡಿರುವ ದೂರುಗಳು ಕೇಳಿ ಬಂದಿವೆ.

**ಜಿಲ್ಲೆಯಲ್ಲಿ ಇದುವರೆಗೂ ನಾನಾ ಮಾನದಂಡಗಳ ಅನ್ವಯ 13,427 ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಲಾಗಿದೆ. ಕಾರ್ಡ್ ವಾಪಸ್‌ಗೆ ಅರ್ಜಿ ಸಲ್ಲಿಸಿದ್ದವರ ಪೈಕಿ 84 ಅರ್ಹರಿಗೆ ಬಿಪಿಎಲ್ ಕಾರ್ಡ್ ಅನ್ನು ವಾಪಸ್ ಮಾಡಲಾಗಿದೆ. ಕಾರ್ಡ್ ರದ್ದತಿ ಪ್ರಕ್ರಿಯೆ ನಿರಂತರವಾಗಿ ನಡೆಯಲಿದೆ. ಅರ್ಹರ ಕಾರ್ಡ್ ರದ್ದಾದರೆ ವಾಪಸ್ ಪಡೆಯಲು ಅವಕಾಶ ಕಲ್ಪಿಸಲಾಗಿದೆ.**
**-ನಾಗರಾಜ್ ಕೆಳಗಿನಮನಿ, ಜಂಟಿ ನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಇಲಾಖೆ**

**ಇನ್ನಷ್ಟು ರದ್ದು ಸಾಧ್ಯತೆ**

**ಜಿಲ್ಲೆಯಲ್ಲಿಇದುವರೆಗೂ 13,427 ಕಾರ್ಡ್‌ಗಳನ್ನು ರದ್ದುಗೊಳಿಸಲಾಗಿದೆ. ಕೇಂದ್ರ ಸರಕಾರದ ನಿಮಯಗಳನ್ವಯ ಇನ್ನೂ 3 ಸಾವಿರಕ್ಕೂ ಹೆಚ್ಚು ಕಾರ್ಡ್‌ಗಳು ರದ್ದಾಗುವ ಸಾಧ್ಯತೆ ಇದೆ. ಕಾರ್ಡ್‌ಗಳನ್ನು ರದ್ದುಪಡಿಸುವುದು ನಿರಂತರ ಪ್ರಕ್ರಿಯೆಯಾಗಿದ್ದು, ಕಾಲಕಾಲಕ್ಕೆ ಬರುವ ಸೂಚನೆಗಳನ್ವಯ ಕಾರ್ಡ್‌ಗಳ ಪರಿಶೀಲನೆ ನಡೆಯಲಿದೆ.**


**ವಾಪಸ್ ಪಡೆಯಲು ಅವಕಾಶ:** ಅರ್ಹತೆ ಇದ್ದೂ ವಾರ್ಷಿಕ ಆದಾಯದ ಗೊಂದಲದಿಂದಾಗಿ ಕಾರ್ಡ್‌ಗಳು ರದ್ದಾಗಿದ್ದರೆ, ಸೂಕ್ತ ದಾಖಲೆಗಳೊಂದಿಗೆ ಆಹಾರ ಇಲಾಖೆ ಕಚೇರಿ ಅಥವಾ ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿದರೆ, ಪರಿಶೀಲನೆ ನಡೆಸಿ ಅರ್ಹತೆ ಹೊಂದಿದ್ದರೆ ಮತ್ತೆ ಬಿಪಿಎಲ್ ಕಾರ್ಡ್ ವಿತರಿಸುವ ಕುರಿತು ಕ್ರಮ ಕೈಗೊಳ್ಳಲು ಸರಕಾರ ಸೂಚನೆ ನೀಡಿದೆ. ಕಾರ್ಡ್ ರದ್ದಾದ ಸಾಕಷ್ಟು ಮಂದಿ ಮತ್ತೆ ಬಿಪಿಎಲ್ ಕಾರ್ಡ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಗಳ ಪೈಕಿ ಜಿಲ್ಲಾದ್ಯಂತ 84 ಅರ್ಹರಿಗೆ ಬಿಪಿಎಲ್ ಕಾರ್ಡ್ ವಾಪಸ್ ನೀಡಲಾಗಿದೆ.

ಬಿಪಿಎಲ್ ಕಾರ್ಡ್ ರದ್ದಾದರೆ ಸ್ವಯಂಚಾಲಿತವಾಗಿ ರದ್ದಾಗಿರುವ ಅಷ್ಟು ಕುಟುಂಬಗಳಿಗೆ ಹೋಗುತ್ತಿರುವ ಗೃಹಲಕ್ಷ್ಮೀ ಯೋಜನೆಯ ಹಣವೂ ಸ್ಥಗಿತಗೊಳ್ಳಲಿದೆ. ಹೀಗಾಗಿ ಜಿಲ್ಲೆಯಲ್ಲಿಸದ್ಯಕ್ಕೆ 13,427 ಕಾರ್ಡ್‌ಗಳನ್ನು ಹೊಂದಿದ್ದ ಕುಟುಂಬಸ್ಥರಿಗೆ ಅನ್ನಭಾಗ್ಯದ ಜತೆ ಗೃಹ ಲಕ್ಷ್ಮೀ ಸೇರಿದಂತೆ ಹಲವು ಯೋಜನೆಗಳ ಸೌಲಭ್ಯಗಳು ಕೈತಪ್ಪಲಿವೆ. ಬಿಪಿಎಲ್ ಕಾರ್ಡ್ ರದ್ದುಗೊಳಿಸುವ ಪ್ರಕ್ರಿಯೆ ನಿರಂತರವಾಗಿ ನಡೆಯಲಿದ್ದು, ಇನ್ನಷ್ಟು ಜನರ ಬಿಪಿಎಲ್ ಕಾರ್ಡ್ ರದ್ದಾಗುವ ಸಾಧ್ಯತೆಯೂ ಹೆಚ್ಚಿದೆ.

ಅಂತರಾಳದಿಂದ.. EDITORIAL

# ಮತ್ತೆ ಬಳ್ಳಾರಿ ರಿಪಬ್ಲಿಕ್ ನೆನಪು? ಬಂದೂಕು ಸಂಸ್ಕೃತಿ ತಲೆ ಎತ್ತದಿರಲಿ

ಬಳ್ಳಾರಿಯಲ್ಲಿ ಇದ್ದಕ್ಕಿದ್ದಂತೆ ಭುಗಿಲೆದ್ದ (ಜನವರಿ 1ರಂದು) ಹಿಂಸಾಚಾರವು, ಕಾಂಗ್ರೆಸ್ ಪಕ್ಷದ ಯುವ ಕಾರ್ಯಕರ್ತನೊಬ್ಬನನ್ನು ಬಲಿ ತೆಗೆದುಕೊಂಡಿದೆ. ಈ ಘಟನೆ, ಬಳ್ಳಾರಿ ಜಿಲ್ಲೆಯ ಕರಾಳ ಇತಿಹಾಸದ ಮರುಕಳಿಕೆಯಂತಿದೆ. ಮಹರ್ಷಿ ವಾಲ್ಮೀಕಿ ಪ್ರತಿಮೆ ಅನಾವರಣದ ಕಾರ್ಯಕ್ರಮಕ್ಕೆ ಸಂಬಂಧಿಸಿದ ಬ್ಯಾನರ್‌ಗಳನ್ನು ಕಟ್ಟುವ ವಿಷಯಕ್ಕೆ ಆರಂಭವಾದ ವಿವಾದ, ಕೆಲ ಸಮಯದಲ್ಲಿಯೇ ಗಲಭೆಯಾಗಿ ಪರಿವರ್ತನೆಗೊಂಡಿದೆ. ಕಲ್ಲುತೂರಾಟ, ಗುಂಡಿನ ದಾಳಿ ನಡೆದಿರುವುದು ಕಾನೂನು ಸುವ್ಯವಸ್ಥೆ ಕುಸಿದುಬೀಳಲು ಕಾರಣವಾಗಿದೆ. ರಾಜಕೀಯ ಅಧಿಕಾರದ ಅಟ್ಟಹಾಸ, ತೋಳ್ಬಲದ ಪ್ರದರ್ಶನ ಹಾಗೂ ಅಕ್ರಮ ಸಂಪತ್ತು ಸೇರಿಕೊಂಡು 'ಬಳ್ಳಾರಿ ರಿಪಬ್ಲಿಕ್' ಎನ್ನುವ ಸಮಾನಾಂತರ ಸರ್ಕಾರ ಜಾರಿಯಲ್ಲಿದೆ ಎನ್ನುವ ಭಾವನೆ ಮೂಡಿಸಿದ್ದ ಕುಖ್ಯಾತಿಯ ದಿನಗಳನ್ನು ಪ್ರಸಕ್ತ ಘಟನೆ ನೆನಪಿಸುವಂತಿದೆ. ಗಣಿ ಉದ್ಯಮಿ ಮತ್ತು ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಅವರ ನಿವಾಸದ ಬಳಿ ಬ್ಯಾನರ್‌ಗಳನ್ನು ಕಟ್ಟುವ ಕಾಂಗ್ರೆಸ್ ಕಾರ್ಯಕರ್ತರ ಪ್ರಯತ್ನಕ್ಕೆ ಶಾಸಕರ ಬೆಂಬಲಿಗರಿಂದ ಎದುರಾದ




ತೀವ್ರ ವಿರೋಧದಿಂದ ಸಂಘರ್ಷ ಆರಂಭವಾಗಿದ್ದರೂ, ಆ ಪ್ರಚೋದನೆಯನ್ನು ಸಾಂಕೇತಿಕವಾಗಿಯಷ್ಟೇ ನೋಡಬೇಕಾಗಿದೆ. ವಾಲ್ಮೀಕಿ ಪ್ರತಿಮೆ ಅನಾವರಣದ ಹಿಂದೆ ಯಾವುದೇ ಸಾಂಸ್ಕೃತಿಕ ಮಹತ್ವದ ಚಿಂತನೆಯಿಲ್ಲ. ಕಲ್ಯಾಣ ಕರ್ನಾಟಕದಲ್ಲಿ ಪ್ರಬಲ ಮತಬ್ಯಾಂಕ್ ಆಗಿರುವ ವಾಲ್ಮೀಕಿ ಸಮುದಾಯವನ್ನು ಗಮನದಲ್ಲಿ ಇರಿಸಿಕೊಂಡು ನಡೆದಿರುವ ಪ್ರತಿಮಾ ರಾಜಕಾರಣ ಇದಾಗಿದೆ. ಪ್ರತಿಮೆ ಅನಾವರಣದ ನೆಪದಲ್ಲಿ ಆರಂಭಗೊಂಡ ಸಂಘರ್ಷದಲ್ಲಿ ಬ್ಯಾನರ್‌ಗಳಿಗಿಂತಲೂ ರಾಜಕಾರಣದ ಪಾತ್ರವೇ ಹೆಚ್ಚಾಗಿದೆ. ಪೊಲೀಸ್ ವರಿಷ್ಠಾಧಿಕಾರಿಯ ಅಮಾನತಿಗೆ ನೀಡಿರುವ ಕಾರಣಗಳು ಗಂಭೀರವಾದವು ಘಟನೆಯ ಸ್ಥಳಕ್ಕೆ ಕೂಡಲೇ ತಲುಪುವಲ್ಲಿನ ವೈಫಲ್ಯ, ಬಿಕ್ಕಟ್ಟಿನ ಸಮಯದಲ್ಲಿ ಹಿರಿಯ ಅಧಿಕಾರಿಗಳ ಸಂಪರ್ಕಕ್ಕೆ ದೊರೆಯದಿರುವುದು, ಸುಸಂಬದ್ಧ ಮಾಹಿತಿ ನೀಡುವಲ್ಲಿ ಅಸಮರ್ಥರಾಗಿರುವುದು ಹಾಗೂ ದ್ವಿತೀಯ ಮಾಹಿತಿಯನ್ನು ಅವಲಂಬಿಸಿರುವುದು. ಪವನ್ ಅವರು ಸಂಘರ್ಷವನ್ನು ನಿಭಾಯಿಸುವಲ್ಲಿ ನಿರ್ಲಕ್ಷ್ಯ ವಹಿಸಿದರೋ ಅಥವಾ ಪರಿಸ್ಥಿತಿಯ ಬಲಿಪಶು ಆಗಿದ್ದಾರೋ ಎನ್ನುವುದಕ್ಕಿಂತಲೂ, ಅಗತ್ಯವಾಗಿದ್ದ ಸಂದರ್ಭದಲ್ಲಿ ಪೊಲೀಸರು ತಮ್ಮ ಉಪಸ್ಥಿತಿಯನ್ನು ಸಾಬೀತುಪಡಿಸುವಲ್ಲಿ ಸಂಪೂರ್ಣ ವಿಫಲರಾದರು ಎನ್ನುವುದು ಕಳವಳಕ್ಕೆ ಕಾರಣವಾಗುವ ಸಂಗತಿಯಾಗಿದೆ.

> **ಜನಾರ್ದನ ರೆಡ್ಡಿ ಮತ್ತು ಬಳ್ಳಾರಿಯ ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ನಡುವಿನ ಜಿದ್ದಾಜಿದ್ದಿ ನಿಯಂತ್ರಣ ತಪ್ಪುವ ಮಟ್ಟಕ್ಕೆ ತಲಪಿದ್ದು, ಗುಪ್ತಚರ ಮತ್ತು ಪೊಲೀಸ್ ಇಲಾಖೆಯ ವೈಫಲ್ಯದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುವಂತಿದೆ ಹಾಗೆಯೇ, ಘಟನೆ ನಡೆದ ಕೆಲವು ಗಂಟೆಗಳ ಹಿಂದಷ್ಟೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದ ಪವನ್ ನೆಜ್ಜೂರ್ ಅವರನ್ನು ಅಮಾನತುಗೊಳಿಸಿರುವುದು ಆಡಳಿತದ ವ್ಯವಸ್ಥಿತ ಕುಸಿತವನ್ನು ಸ್ಪಷ್ಟವಾಗಿ ಸೂಚಿಸುವಂತಿದೆ.**

ರಾಜಕೀಯ ಸಂಘರ್ಷದ ಸಮಯದಲ್ಲಿ ಬಂದೂಕುಗಳು ಸುಲಭವಾಗಿ ಪ್ರವೇಶ ಪಡೆದುದು ಹೆಚ್ಚು ಆತಂಕ ಹುಟ್ಟಿಸುವ ವಿದ್ಯಮಾನ. ಖಾಸಗಿ ಭದ್ರತಾ ಸಿಬ್ಬಂದಿಗೆ ಶಸ್ತ್ರಾಸ್ತ್ರಗಳನ್ನು ಹೊಂದಲು ಕಾನೂನು ಅನುಮತಿಸಿದೆ. ಆದರೆ, ಬಂದೂಕು ಧಾರಿಯೊಬ್ಬ ಸಾರ್ವಜನಿಕವಾಗಿ ಗುಂಡು ಹಾರಿಸುವ ದೃಶ್ಯಗಳು ವೈರಲ್ ಆಗಿದ್ದು, ರಾಜಕಾರಣದಲ್ಲಿ ಬಂದೂಕು ಸಂಸ್ಕೃತಿಯನ್ನು ಸಹಜಗೊಳಿಸುವ ಪ್ರಯತ್ನದಂತಿದೆ. ಶಸ್ತ್ರಾಸ್ತ್ರಗಳನ್ನು ಹೊಂದಿರುವವರ ಪರಿಶೀಲನೆ, ತರಬೇತಿ ಮತ್ತು ಹೊಣೆಗಾರಿಕೆಗೆ ಸಂಬಂಧಿಸಿದ ನಿಯಂತ್ರಣಗಳಿಗೆ ಸಂಬಂಧಿಸಿದಂತೆ ನಿರ್ವಾತ ಸ್ಥಿತಿ ಇರುವುದನ್ನು ಪ್ರಸಕ್ತ ಪ್ರಕರಣ ಸೂಚಿಸುವಂತಿದೆ. ಖಾಸಗಿ ಭದ್ರತಾ ಸಿಬ್ಬಂದಿ ಅತ್ಯಂತ ಸಮೀಪದಿಂದ ಗುಂಡು ಹಾರಿಸಿರುವುದನ್ನು ದೃಢೀಕರಿಸುತ್ತಿರುವ ಬ್ಯಾಲಿಸ್ಟಿಕ್ ವರದಿ, ಸಮಸ್ಯೆ ಗುರುತರವಾಗಿರುವುದನ್ನು ಸೂಚಿಸುವಂತಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ, ಅಮಾನತು ಕ್ರಮಗಳು ಮತ್ತು ಮಾತಿನ ಸಮರದಾಚೆಗೆ ಕಾರ್ಯಪ್ರವೃತ್ತವಾಗಬೇಕು. ಸಮಗ್ರ ತನಿಖೆ, ಖಾಸಗಿ ವ್ಯಕ್ತಿಗಳು ಹೊಂದಿರುವ ಬಂದೂಕುಗಳ ಪರವಾನಗಿಗಳ ರಾಜ್ಯವ್ಯಾಪಿ ಪರಿಶೋಧನೆ, ಖಾಸಗಿ ಸಶಸ್ತ್ರ ಭದ್ರತೆಗೆ ಕಠಿಣ ಮಾನದಂಡ ನಿಗದಿ ಮತ್ತು ಗುಪ್ತಚರ ವೈಫಲ್ಯಕ್ಕೆ ಸ್ಪಷ್ಟ ಹೊಣೆಗಾರಿಕೆ ಅಗತ್ಯ. ಕಾನೂನು ಸುವ್ಯವಸ್ಥೆಗಿಂತಲೂ ಯಾವುದೇ ನಾಯಕ, ಪರಂಪರೆ ಅಥವಾ ಮತಬ್ಯಾಂಕ್ ಮಿಗಿಲಲ್ಲ ಎನ್ನುವುದನ್ನು ಖಚಿತಪಡಿಸುವಂತೆ ಸರ್ಕಾರ ನಡೆದುಕೊಳ್ಳಬೇಕು ಹಾಗೂ 'ಬಳ್ಳಾರಿ ರಿಪಬ್ಲಿಕ್' ಮತ್ತೆ ಚಿಗುರದಂತೆ ಎಚ್ಚರ ವಹಿಸಬೇಕು.

---

# ರಾಮಾಯಣ



## ಸುಗ್ರೀವನು ಶ್ರೀರಾಮನನ್ನು ಪರೀಕ್ಷಿಸಿದ್ದು

• ಹಿಂದಿನ ಸಂಚಿಕೆಯಿಂದ **120ನೆಯ ಅಧ್ಯಾಯ**

ನಾನು ಯುದ್ಧ ರಂಗದಲ್ಲಿ ನಿನ್ನನ್ನು ಕೊಲ್ಲಬೇಕೆಂದು ಮದಿಸಿದ್ದೇನೆ. ನೀನು ನನ್ನೊಡನೆ ಯುದ್ಧವನ್ನು ಮಾಡುವುದಕ್ಕೆ ಅಂಜದ ಪಕ್ಷದಲ್ಲಿ ಯುದ್ಧ ಸಂನದ್ದನಾಗು ಎರಡು ನುಡಿದನು. ಅನಂತರ ವಾಲಿಯು ಅತ್ಯಂತ ಕೋಪಯುಕ್ತನಾಗಿ ತನ್ನ ತಂದೆಯಾದ ದೇವೇಂದ್ರನು ಕೊಟ್ಟ ಸುವರ್ಣದ ಹಾರವನ್ನು ಜಾಂ ಯುದ್ಧ ಸಂನದ್ದನಾದನು. ಕೋಣದ ಸ ರೂಪದಿಂದ ಪರ್ವತದ ಆಕಾರದಲ್ಲಿದ್ದ ದುಂದುಭಿಯ ಕೊಂಬುಗಳನ್ನು ಹಿಡಿದು ತಿರುಗಿಸಿ ನೆಲಕ್ಕೆ. ಅಪ್ಪಳಿಸಿ ಕೆಡಹಿ ಬೊಬ್ಬಿಟ್ಟು ಕೂಗಿದನು. ಆಗ ಆ ಕೋಣದ ಕಿವಿಗಳಿಂದ ರಕ್ತಪ್ರವಾಹ ಬಳಿಕ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಬುದ್ಧಿಯಿಂದ ವಾಲಿ ದುಂದುಭಿಯರಿಗೆ ಮಹಾಘೋರವಾದ ಯುದ್ಧ ಹಾ ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ವಾಲಿಯ ಮುಷ್ಟಿಗಳಿಂದಲೂ ಮೊಣಕಾಲು ಗಳಿಂದಲೂ ಕಲ್ಲರೆಗಳಿಂದಲೂ ದೊಡ್ಡಮರಗಳಿಂದಲೂ ಹೊಡೆಯುತ್ತಿ, ರಲು ದುಂದುಭಿಯು ಸತ್ತ್ವಗುಂದಿದನು. ಆಮೇಲೆ ವಾಲಿಯು : ಒಂದು ಕ್ಷಣಮಾತ್ರ ತಳಹರಿಸಿಕೊಂಡು ದುಂದುಭಿಯನ್ನು ಉಗುರುಗಳಿಂದ ಸೀಳಿ ಭೂವಿರಿಯ ಮೇಲೆ ಕೆಡಹಿ ಕೈಗಳಿಂದ ಶರೀರವನ್ನು ಮುರಿದು ನೆಲಕ್ಕೆ ಅಪ್ಪಳಿಸಲು ಆತನು ಸತ್ತಾಹೋದನು. ಆಮೇಲೆ ವಾಲಿಯು, ಪರಾಜಿತನಾದ ದುಂದುಭಿಯ ಶರೀರವನ್ನು ತನ್ನ ಭುಜಬಲದಿಂದ ಎಸೆಯಲು ಆ ಶರೀರವು ಒಂದು ಗಾವುದದೂರ ಹೋಗಿ ಬಿದ್ದಿತು. ಆ ಸಮಯದಲ್ಲಿ ದುಂದುಭಿಯ ಬಾಯಿಯಿಂದ ಸುರಿಯುತ್ತಿದ್ದ ರಕ್ತಬಿಂದುಗಳು ಗಾಳಿಯಿಂದ ಮತಂಗಮುನೀಶ್ವರನ ಆಶ್ರಮದಲ್ಲಿ ಬಿದ್ದವು. ಆ ಮುನೀಶ್ವರನು ಆ ಬಿಂದುಗಳನ್ನು ನೋಡಿ ಕೋಪಯುಕ್ತನಾಗಿ ಅವನ್ನು ತನ್ನ ಆಶ್ರ ಮದಲ್ಲಿ ಚೆಲ್ಲಿದವರಾರೆಂದು ವಿಚಾರಿಸಲು ಹೊರಕ್ಕೆ ಬಂದನು. ಅಲ್ಲಿ ದೊಡ್ಡ ಪರ್ವತಾಕ:ರವಾಗಿ ಬಿದ್ದಿದ್ದ ದುಂದುಭಿಯ ಶರೀರವನ್ನು ನೋಡಿ ತನ್ನ ತಪಸ್ಸಾಮರ್ಥ್ಯದಂದುಂಟಾದ ಜ್ಞಾನದೃಷ್ಠಿಯಿಂದ ವಾನರಾಧಿಪತಿಯಾದ ವಾಲಿಯು ಮಹಿಷಾಕಾರನಾದ ದುಂದುಭಿಯನ್ನು ಕೊಂದು ಆತನ ಶರೀರವನ್ನು ಅಲ್ಲಿಗೆ ಎಸೆದಿದ್ದಾನೆಂದು ತಿಳಿದನು. ಆಗ ಮತಂಗಮುನಿಯು ಅತ್ಯಂತ ಕೋಪಯುಕ್ತನಾಗಿ ''ವಾಲಿಯು ಮದೋನ್ಮತ್ತನಾಗಿ ದುಂದುಭಿಯನ್ನು ಕೊಂದ ಗರ್ವದಿಂದ ಈ ಶರೀರವನ್ನು ಇಲ್ಲಿ ಹಾಕಿದ್ದಾನೆ. ದುಂದುಭಿಯ ರಕ್ತದಿಂದ ನನ್ನ ತಪೋವನವು ಅಶುಚಿಯಾಯಿತು. ಈ ಶರೀರವು ಬಿದ್ದ ರಭಸದಿಂದ ಈ ಆಪ್ರಮದಲ್ಲಿದ್ದ ವೃಕ್ಷಗಳೆಲ್ಲವೂ ಮುರಿದುಹೋದವು. ಆದಕಾರಣ ಅಜ್ಞಾನಿಯಾದ ವಾಲಿಯು ಇಲ್ಲಿಗೆ ಸುತ್ತಲಿರುವ ಒಂದು ಗಾವುದದಾರಿಯೊಳಗೆ ಕಾಲಿಟ್ಟರೆ ಆತನ ಶರೀರವು ಲಯವಾಗಲಿ ಆತನ ಅಧಿಕಾರಿವರ್ಗಕ್ಕೆ ಸೇರಿ ಈ ವನದಲ್ಲಿರುವ ವಾನರಗಳು ಇಲ್ಲಿಂದ ಹೊರಟುಹೋಗಲಿ ! ಹೋಗದಿದ್ದರೆ ಅವಕ್ಕೂ ಶಾಪವನ್ನು ಕೊಡುವೆನು. ಮಕ್ಕಳನ್ನು ರಕ್ಷಿಸುವಂತೆ ರಕ್ಷಿಸಿಕೊಂಡಿದ್ದ ನನ್ನ ಆಶ್ರಮದಲ್ಲಿರುವ ಚಿಗುರೆಲೆಗಳನ್ನೂ ಹಣ್ಣುಕಾಯಿಗಳನ್ನೂ ಕೆಡಿಸುತ್ತ ಈ ಕಪಿಗಳು ಇಲ್ಲಿದ್ದು ಮಾಡುವುದೇನು? ಈ ಆಶ್ರಮದಲ್ಲಿರುವ ಕಪಿಗಳಿಗೆ ಇದೊಂದು ದಿನ ಅವಕಾಶವನ್ನು ಕೊಡುತ್ತೇನೆ. ಈಹೊತ್ತು ಹೋಗದೆ ನಾಳೆ ಕಾಣಿಸಿಕೊಳ್ಳುವ ಕಪಿಯು ಅನೇಕ ಸಾವರ ವರುಷಗಳ ಪರ್ಯಂತ ಶಿಲೆಯಾಗಿ ಹೋಗಲಿ! ಏಂದು ಶಪಿಸಿದನು. ಆ ಮಾತುಗಳನ್ನು ಕೇಳಿ ಅಲ್ಲಿದ್ದ ಕಪಿಗಳು ವಾಲಿಯ ಸಮೀಪಕ್ಕೆ ಹೋದವು. ಆತನು ಆ ಕಪಿಗಳನ್ನು ಕಂಡು ಎಲ್ಫೆ ಕಪಿಗಳಿರಾ, ನೀವೇನುಕಾರಣ ಬಂದಿರಿ? ನೀವೆಲ್ಲರೂ ಸುಖದಲ್ಲಿದ್ದೀರಿ ತಾನೆ ? ಎಂದು ಕೇಳಿದನು. ಆ ಕಪಿಗಳು ಜೀಯ, ನಾವು ಮತಂಗಮುನೀಶ್ವರನ ಆಶ್ರಮದಲ್ಲಿದ್ದೆವು. ನಿನ್ನಿಂದ ಹತನಾದ ದುಂದುಭಿಯ ರಕ್ತಬಿಂದುಗಳು ಈಹೊತ್ತು ಆ ಮುನೀಶ್ವರನ ಆಶ್ರಮದಲ್ಲಿ ಬೀಳಲು ಆತನು ಕೋಪಯುಕ್ತನಾಗಿ ಜ್ಞಾನದೃಷ್ಟಿಯಿಂದ ಅದು ನಿನ್ನ ಕೃತ್ಯವೆಂದು ತಿಳಿದನು.

**ಮುಂದುವರಿಯುವುದು...**

---

# ಧರ್ಮಸೌಹಾರ್ದತೆಯ ದೀಪಸ್ತಂಭ
## ವಾವರ್ ಪಳ್ಳಿ ಮತ್ತು ಅಯ್ಯಪ್ಪಸ್ವಾಮಿಯ ಅಮರ ಸ್ನೇಹ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಭಾರತದ ಧಾರ್ಮಿಕ ಪರಂಪರೆಯಲ್ಲಿ ಶಬರಿಮಲೆ ಒಂದು ವಿಶಿಷ್ಟ ಸ್ಥಾನವನ್ನು ಹೊಂದಿದೆ. ಅರಣ್ಯ ಮಧ್ಯೆ ನೆಲೆಸಿರುವ ಈ ಪುಣ್ಯಕ್ಷೇತ್ರವು ಕೇವಲ ಆರಾಧನೆಯ ಸ್ಥಳವಲ್ಲ; ಅದು ಮಾನವೀಯ ಮೌಲ್ಯಗಳು, ತ್ಯಾಗ, ಶಿಸ್ತು ಮತ್ತು ಎಲ್ಲಾ ಧರ್ಮಗಳ ನಡುವಿನ ಸೌಹಾರ್ದತೆಯ ಮಹಾನ್ ಸಂದೇಶವನ್ನು ಸಾರುತ್ತದೆ. ಈ ಸಂದೇಶದ ಅತ್ಯಂತ ಜೀವಂತ ಸಂಕೇತವೇ ವಾವರ್ ಪಳ್ಳಿ. ವಾವರ್ ಪಳ್ಳಿಯ ಇತಿಹಾಸ ಮತ್ತು ಅಯ್ಯಪ್ಪ ಸ್ವಾಮಿಯೊಂದಿಗೆ ವಾವರ್ ಸ್ವಾಮಿಯ ಸ್ನೇಹವು ಭಾರತೀಯ ಸಂಸ್ಕೃತಿಯ ಸಹಬಾಳ್ವೆಯ ಸುವರ್ಣ ಅಧ್ಯಾಯವಾಗಿ ಕಾಣುತ್ತದೆ.

**ವಾವರ್ ಸ್ವಾಮಿಯ ಐತಿಹಾಸಿಕ ಹಿನ್ನೆಲೆ:** ಪೌರಾಣಿಕ ಕಥನಗಳ ಪ್ರಕಾರ, ವಾವರ್ ಸ್ವಾಮಿ ಅರೇಬಿಯಾದ ಮೂಲದ ಮುಸ್ಲಿಂ ಯೋಧ ಅಥವಾ ವ್ಯಾಪಾರಿಯಾಗಿದ್ದರು. ದಕ್ಷಿಣ ಭಾರತದ ಕರಾವಳಿ ಪ್ರದೇಶಗಳಿಗೆ ಆಗಮಿಸಿದ ಸಂದರ್ಭದಲ್ಲಿ ಅವರು ಅನ್ಯಾಯ, ದೌರ್ಜನ್ಯ ಹಾಗೂ ದುರಾಚಾರವನ್ನು ಎದುರಿಸಿದರೆಂಬ ಕಥೆಗಳು ಪ್ರಸಿದ್ಧ. ಅಯ್ಯಪ್ಪ ಸ್ವಾಮಿಯೊಂದಿಗೆ ಅವರ ಮುಖಾಮುಖಿ ಯುದ್ಧದ ಮೂಲಕ ಆರಂಭವಾಗಿ, ಪರಸ್ಪರ ಶೌರ್ಯ, ಧೈರ್ಯ ಮತ್ತು ಧರ್ಮನಿಷ್ಠೆಯನ್ನು ಗುರುತಿಸಿದ ಕ್ಷಣದಲ್ಲಿ ಅದೇ ಯುದ್ಧ ಸ್ನೇಹವಾಗಿ ಪರಿವರ್ತಿತವಾಯಿತು ಎಂಬುದು ಜನಪ್ರಚಲಿತ ನಂಬಿಕೆ. ಶತ್ರುತ್ವದಿಂದ ಸ್ನೇಹಕ್ಕೆ ನಡೆದ ಈ ರೂಪಾಂತರವೇ ವಾವರ್ ಅಯ್ಯಪ್ಪ ಸ್ನೇಹದ ಆಧ್ಯಾತ್ಮಿಕ ಮಹತ್ವ.



**ಅಯ್ಯಪ್ಪ ಸ್ವಾಮಿಯೊಂದಿಗೆ ಅಮರ ಸ್ನೇಹ:** ಅಯ್ಯಪ್ಪ ಸ್ವಾಮಿಯ ಜೀವನದಲ್ಲಿ ವಾವರ್ ಸ್ವಾಮಿಗೆ ವಿಶಿಷ್ಟ ಸ್ಥಾನವಿದೆ. ಅಯ್ಯಪ್ಪ ಸ್ವಾಮಿಯ ಧರ್ಮಸಾಧನೆಯ ಪಥದಲ್ಲಿ ವಾವರ್ ಸ್ವಾಮಿ ನೆರಳಿನಂತೆ ಜೊತೆಗಿದ್ದು, ಅರಣ್ಯ ಮಾರ್ಗಗಳಲ್ಲಿ ಮಾರ್ಗದರ್ಶನ, ಯುದ್ಧಗಳಲ್ಲಿ ಸಹಾಯ ಮತ್ತು ನ್ಯಾಯ ಸ್ಥಾಪನೆಗೆ ಕೈಜೋಡಿಸಿದರು ಎನ್ನಲಾಗುತ್ತದೆ. ಧರ್ಮ ಎಂದರೆ ಕೇವಲ ಪೂಜೆ ಪುನಸ್ಕಾರವಲ್ಲ, ಮಾನವೀಯತೆ ಮತ್ತು ಸತ್ಯನಿಷ್ಠೆ ಎಂದು ಸಾರಿದ ಅಯ್ಯಪ್ಪ ಸ್ವಾಮಿಯ ಸಂದೇಶವನ್ನು ವಾವರ್ ಸ್ವಾಮಿ ತನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಇದೇ ಕಾರಣಕ್ಕೆ ಅಯ್ಯಪ್ಪ ಸ್ವಾಮಿ ಶಬರಿಮಲೆಯ ಸನ್ನಿಧಿಯಲ್ಲಿ ತಮ್ಮ ಆತ್ಮೀಯ ಗೆಳೆಯನ ಸ್ಮರಣಾರ್ಥ ವಾವರ್ ಪಳ್ಳಿಗೆ ಗೌರವ ನೀಡಿದರು ಎಂದು ನಂಬಲಾಗುತ್ತದೆ.



**ವಾವರ್ ಪಳ್ಳಿ: ಸಹಬಾಳ್ವೆಯ ಸಂಕೇತ:** ಶಬರಿಮಲೆಯ ಸಮೀಪದಲ್ಲಿರುವ ವಾವರ್ ಪಳ್ಳಿ ಕೇವಲ ಮಸೀದಿಯಷ್ಟೇ ಅಲ್ಲ; ಅದು ಧರ್ಮಗಳ ನಡುವಿನ ಸೇತುವೆ. ಅಯ್ಯಪ್ಪ ಸ್ವಾಮಿಯ ದರ್ಶನಕ್ಕೆ ತೆರಳುವ ಯಾತ್ರಿಕರು ವಾವರ್ ಪಳ್ಳಿಗೆ ಭೇಟಿ ನೀಡಿ, ವಾವರ್ ಸ್ವಾಮಿಗೆ ಗೌರವ ಸಲ್ಲಿಸುವ ಪರಂಪರೆ ಇಂದಿಗೂ ಜೀವಂತವಾಗಿದೆ. ಇಲ್ಲಿಗೆ ಬರುವ ಯಾತ್ರಿಕರು ತಮ್ಮ ಇಷ್ಟಾರ್ಥಗಳಿಗಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ; ಕೆಲವರು ಕಪ್ಪು ನೀಲಿ ಧ್ವಜಗಳನ್ನು ಅರ್ಪಿಸುತ್ತಾರೆ. ಈ ಆಚರಣೆಗಳು ಹಿಂದೂ ಮುಸ್ಲಿಂ ಸೌಹಾರ್ದತೆಯ ಅಪರೂಪದ ದೃಶ್ಯವನ್ನು ಕಟ್ಟಿಕೊಡುತ್ತವೆ.

**ಶಬರಿಮಲೆ ಯಾತ್ರೆ ಮತ್ತು ವಾವರ್ ಪಳ್ಳಿಯ ಪಾತ್ರ:** ಶಬರಿಮಲೆ ಯಾತ್ರೆಯು ವ್ರತ, ಶುದ್ಧತೆ ಮತ್ತು ಶಿಸ್ತುಗಳ ಮೂಲಕ ನಡೆಯುವ ವಿಶಿಷ್ಟ ಪಥ. ಈ ಯಾತ್ರೆಯಲ್ಲಿ ವಾವರ್ ಪಳ್ಳಿಗೆ ಸಲ್ಲಿಸುವ ಗೌರವವು ಯಾತ್ರೆಯ ಅವಿಭಾಜ್ಯ ಭಾಗವಾಗಿ ಪರಿಗಣಿಸಲಾಗಿದೆ. ''ಸ್ವಾಮಿ ಶರಣಂ ಅಯ್ಯಪ್ಪ'' ಎಂಬ ಘೋಷಣೆಯೊಂದಿಗೆ ಸಾಗುವ ಯಾತ್ರಿಕರು, ಧರ್ಮದ ಗಡಿ ಮೀರಿ ಮಾನವೀಯತೆಯನ್ನು ಅಪ್ಪಿಕೊಳ್ಳುವಂತೆ ಈ ಪರಂಪರೆ ಪ್ರೇರೇಪಿಸುತ್ತದೆ.

> **ಸಮಕಾಲೀನ ಪ್ರಸ್ತುತತೆ**
> **ಇಂದಿನ ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ವಿಭಜನೆ, ದ್ವೇಷ ಹೆಚ್ಚುತ್ತಿರುವ ಸಂದರ್ಭದಲ್ಲೇ ವಾವರ್ ಪಳ್ಳಿ ಮತ್ತು ಅಯ್ಯಪ್ಪ, ವಾವರ್ ಸ್ನೇಹದ ಕಥೆ ಅತ್ಯಂತ ಪ್ರಸ್ತುತ. ಇದು ಸಹಿಷ್ಣುತೆ, ಪರಸ್ಪರ ಗೌರವ ಮತ್ತು ಶಾಂತಿಯ ಪಾಠವನ್ನು ನೀಡುತ್ತದೆ. ವಿಭಿನ್ನ ನಂಬಿಕೆಗಳ ನಡುವೆಯೂ ಸ್ನೇಹ ಸಾಧ್ಯ, ಸತ್ಯ ಮತ್ತು ನ್ಯಾಯದ ಪಥದಲ್ಲಿ ಎಲ್ಲರೂ ಒಂದಾಗಬಹುದು ಎಂಬುದನ್ನು ಈ ಪರಂಪರೆ ಸಾರುತ್ತದೆ.**

**ಉಪಸಂಹಾರ:** ವಾವರ್ ಪಳ್ಳಿಯ ಇತಿಹಾಸವು ಕೇವಲ ಪೌರಾಣಿಕ ಕಥೆಯಲ್ಲ; ಅದು ಭಾರತದ ಆತ್ಮದ ಪ್ರತಿಬಿಂಬ. ಅಯ್ಯಪ್ಪ ಸ್ವಾಮಿಯೊಂದಿಗೆ ವಾವರ್ ಸ್ವಾಮಿಯ ಸ್ನೇಹವು ಧರ್ಮಸೌಹಾರ್ದತೆಯ ಶಾಶ್ವತ ಸಂಕೇತವಾಗಿ ಯುಗಯುಗಾಂತರಗಳಿಗೂ ಪ್ರೇರಣೆಯಾಗುತ್ತದೆ.

ಶಬರಿಮಲೆ ಯಾತ್ರಿಕರು ವಾವರ್ ಪಳ್ಳಿಗೆ ಸಲ್ಲಿಸುವ ಗೌರವವು ಎಲ್ಲರೂ ಒಂದೇ ಎಂಬ ಮಾನವೀಯ ಸಂದೇಶವನ್ನು ಮತ್ತಷ್ಟು ಬಲಪಡಿಸುತ್ತದೆ. ಈ ಸಂದೇಶವೇ ನಮ್ಮ ಸಮಾಜಕ್ಕೆ ಅಗತ್ಯವಾದ ಶಾಂತಿ ಮತ್ತು ಸಹಬಾಳ್ವೆಯ ದಾರಿ.

---

# ಮಧುಮೇಹಿಗಳು ಶುಗರ್ ಫ್ರೀ ಬಿಸ್ಕತ್ತು ತಿನ್ನಬಹುದೇ

ಸಕ್ಕರೆ ಮುಕ್ತ ಬಿಸ್ಕತ್ತುಗಳು ಮಧುಮೇಹಿಗಳಿಗೆ ಒಳ್ಳೆಯದೇ, ಶುಗರ್ ಫ್ರೀ ಬಿಸ್ಕತ್ತು ನಿಜಕ್ಕೂ ಒಳ್ಳೆಯದೇ, ಮಧುಮೇಹಿಗಳು ಶುಗರ್ ಫ್ರೀ ಬಿಸ್ಕತ್ತು ತಿನ್ನಬಹುದೇ, ಶುಗರ್ ಫ್ರೀ ಬಿಸ್ಕತ್ತು ತಿನ್ನೋದ್ರಿಂದ ಶುಗರ್ ಲೆವೆಲ್ ಹೆಚ್ಚಾಗೋದಿಲ್ಲವೇ, ಯಾವ ಬಿಸ್ಕತ್ತು ಉತ್ತಮ,

ಇತ್ತೀಚಿನ ದಿನಗಳಲ್ಲಿ ಮಧುಮೇಹವು ಸಾಮಾನ್ಯವಾದರೂ ಗಂಭೀರ ಕಾಯಿಲೆಯಾಗುತ್ತಿದೆ. ಒಬ್ಬ ವ್ಯಕ್ತಿಗೆ ಮಧುಮೇಹ ಇರುವುದು ಪತ್ತೆಯಾದ ತಕ್ಷಣ, ಅವರಿಗೆ ವಿವಿಧ ರೀತಿಯ ಆಹಾರಗಳನ್ನು ತಪ್ಪಿಸಲು ಸೂಚಿಸಲಾಗುತ್ತದೆ. ಮೊದಲು ಸಕ್ಕರೆಯನ್ನು ನಿಷೇಧಿಸಲಾಗುತ್ತದೆ, ನಂತರ ಸಿಹಿತಿಂಡಿಗಳು, ಬಿಸ್ಕತ್ತುಗಳು, ತಿಂಡಿಗಳು, ಆಲೂಗಡ್ಡೆ, ಸಂಸ್ಕರಿಸಿದ ಹಿಟ್ಟು, ಗೋಧಿ ಹಿಟ್ಟು ಸಹ ಬರುತ್ತದೆ. ಇದು ಜನರು ಏನು ತಿನ್ನಬಹುದು ಮತ್ತು ಏನನ್ನು ತಿನ್ನಬಾರದು ಎಂದು ಆಶ್ಚರ್ಯ ಪಡುವಂತೆ ಮಾಡುತ್ತದೆ. ಮಾರುಕಟ್ಟೆಯು ಸಕ್ಕರೆ ಮುಕ್ತ ಉತ್ಪನ್ನಗಳಿಂದ ತುಂಬಿರುತ್ತದೆ. ಬಿಸ್ಕತ್ತುಗಳು, ಚಾಕೊಲೇಟ್‌ಗಳು, ಐಸ್ ಕ್ರೀಮ್ ಮತ್ತು ಸಿಹಿತಿಂಡಿಗಳನ್ನು ಸಕ್ಕರೆ ಮುಕ್ತ ಎಂದು ಲೇಬಲ್ ಮಾಡಲಾಗಿದೆ.

**ಶುಗರ್ ಫ್ರೀ ಬಿಸ್ಕತ್ತು:** ಮಧುಮೇಹಿಗಳು ಶುಗರ್ ಫ್ರೀ ಬಿಸ್ಕತ್ತುಗಳನ್ನು ಸೇವಿಸುತ್ತಾರೆ. ಅವುಗಳಲ್ಲಿ ಸಕ್ಕರೆ ಇಲ್ಲದಿದ್ದರೆ ಅವು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಹೇಗೆ ಹೆಚ್ಚಿಸಬಹುದು ಎಂದು ಬಹುತೇಕರು ಯೋಚಿಸುತ್ತಾರೆ. ಆದಾಗ್ಯೂ, ಸಕ್ಕರೆ ಮುಕ್ತ ಎಂಬ ಪದವು ಜನರನ್ನು ದಾರಿ ತಪ್ಪಿಸುತ್ತದೆ ಎಂದು ವೈದ್ಯರು ಹೇಳುತ್ತಾರೆ. ಜನರು ಸಾಮಾನ್ಯವಾಗಿ ಸಕ್ಕರೆ ಮುಕ್ತ ಬಿಸ್ಕತ್ತುಗಳನ್ನು ತಿನ್ನಲು ಪ್ರಾರಂಭಿಸುತ್ತಾರೆ, ಅವುಗಳನ್ನು ಸಂಪೂರ್ಣವಾಗಿ ಆರೋಗ್ಯಕರವೆಂದು ನಂಬುತ್ತಾರೆ, ಆದರೆ ಸತ್ಯ ಬೇರೆಯೇ ಇದೆ.

**ವೈದ್ಯರು ಏನಂತಾರೆ?:** ಸಕ್ಕರೆ ರಹಿತ ಬಿಸ್ಕತ್ತುಗಳು ಮಧುಮೇಹ ರೋಗಿಗಳಿಗೆ ಸುರಕ್ಷಿತವೆಂದು ಪರಿಗಣಿಸಲ್ಪಟ್ಟಿದ್ದರೂ, ಅವು ಸಕ್ಕರೆ ಸೇವನೆಯನ್ನು ಕಡಿಮೆ ಮಾಡುವುದರಿಂದ ಅವುಗಳನ್ನು ಸ್ವಲ್ಪ ಎಚ್ಚರಿಕೆಯಿಂದ ಸೇವಿಸಬೇಕಾಗುತ್ತದೆ. ಬಿಸ್ಕತ್ತುಗಳಲ್ಲಿ ಯಾವುದೇ ಸಕ್ಕರೆ ಸೇರ್ಪಡೆಯಿಲ್ಲದಂತೆ ಕಂಡುಬಂದರೂ, ಅವುಗಳಲ್ಲಿ ಸಂಸ್ಕರಿಸಿದ ಹಿಟ್ಟು ಮತ್ತು ಕೃತಕ ಸಿಹಿಕಾರಕಗಳು ಇರಬಹುದು. ಈ ಬಿಸ್ಕತ್ತುಗಳನ್ನು ಅತಿಯಾಗಿ ತಿನ್ನುವುದು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಪರಿಣಾಮ ಬೀರುತ್ತದೆ. ಸಕ್ಕರೆ ರಹಿತ ಉತ್ಪನ್ನಗಳು





ಹೆಚ್ಚಿನ ಪ್ರಮಾಣದಲ್ಲಿ ಕಾರ್ಬೋಹೈಡ್ರೇಟ್ ಮತ್ತು ಕೊಬ್ಬನ್ನು ಹೊಂದಿರುವುದರಿಂದ, ಅವು ಕ್ಯಾಲೋರಿ ಸೇವನೆ ಮತ್ತು ತೂಕ ಹೆಚ್ಚಳಕ್ಕೆ ಕಾರಣವಾಗುತ್ತದೆ ಎನ್ನುತ್ತಾರೆ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಯ ಡಾ. ಸಮಿತ್ ಎ ಶೆಟ್ಟಿ. ಬಿಸ್ಕತ್ತುಗಳಲ್ಲಿನ ಕೃತಕ ಸಿಹಿಕಾರಕವು ಸಣ್ಣ ಪ್ರಮಾಣದಲ್ಲಿ ಸೇವಿಸಲು ಸುರಕ್ಷಿತವಾಗಿದ್ದರೂ ಸಹ, ಅವು ಇನ್ನೂ ಸಿಹಿ ಆಹಾರವನ್ನು ಸೇವಿಸುವ ಬಯಕೆಯನ್ನು ಉತ್ತೇಜಿಸಬಹುದು. ಮಧುಮೇಹ ಇರುವವರ ವಿಷಯಕ್ಕೆ ಬಂದಾಗ, ಅವುಗಳ ಪೌಷ್ಟಿಕಾಂಶದ ಮೌಲ್ಯದ ಜೊತೆಗೆ ಆಹಾರದ ಪ್ರಮಾಣಕ್ಕೂ ಗಮನ ಹರಿಸಬೇಕು. ಆಹಾರ ಪದಾರ್ಥದ ಲೇಬಲ್ ಅನ್ನು ಪರಿಶೀಲಿಸುವುದು ಮತ್ತು ಧಾನ್ಯಗಳು, ನಾರುಗಳು, ಪ್ರೋಟೀನ್‌ಗಳು ಮತ್ತು ಕೊಬ್ಬಿನ ಹೆಚ್ಚಿನ ಪ್ರಮಾಣದಲ್ಲಿ ತಿಂಡಿಗಳನ್ನು ಗುರಿಯಾಗಿಟ್ಟುಕೊಳ್ಳುವುದು ಉತ್ತಮ.

**ಸಕ್ಕರೆ ಮುಕ್ತ ಬಿಸ್ಕತ್ತುಗಳು ಮಧುಮೇಹವನ್ನು ಹೆಚ್ಚಿಸುತ್ತಾ?:** ಹೆಚ್ಚಿನ ಸಕ್ಕರೆ ಮುಕ್ತ ಬಿಸ್ಕತ್ತುಗಳನ್ನು ಸಂಸ್ಕರಿಸಿದ ಹಿಟ್ಟಿನಿಂದ ತಯಾರಿಸಲಾಗುತ್ತದೆ. ಅವು ಬಿಳಿ ಸಕ್ಕರೆಯನ್ನು ಹೊಂದಿರದಿದ್ದರೂ, ಸಂಸ್ಕರಿಸಿದ ಹಿಟ್ಟು ಸ್ವತಃ ರಕ್ತದಲ್ಲಿನ ಸಕ್ಕರೆಯನ್ನು ತ್ವರಿತವಾಗಿ ಹೆಚ್ಚಿಸುತ್ತದೆ. ಅವುಗಳಲ್ಲಿ ಸಂಸ್ಕರಿಸಿದ ಎಣ್ಣೆಗಳು ಮತ್ತು ಟ್ರಾನ್ಸ್ ಕೊಬ್ಬುಗಳಿವೆ, ಇವು ಆರೋಗ್ಯಕ್ಕೆ ಒಳ್ಳೆಯದಲ್ಲ. ಸಂಸ್ಕರಿಸಿದ ಹಿಟ್ಟು ತಿನ್ನುವುದರಿಂದ ದೇಹದಲ್ಲಿ ಇನ್ಸುಲಿನ್ ಮಟ್ಟ ಹಠಾತ್ ಹೆಚ್ಚಳವಾಗುತ್ತದೆ, ಇದು ರಕ್ತದಲ್ಲಿನ ಸಕ್ಕರೆ ಹೆಚ್ಚಳಕ್ಕೆ ಕಾರಣವಾಗಬಹುದು. ಅದಕ್ಕಾಗಿಯೇ ಸಕ್ಕರೆ ರಹಿತ ಬಿಸ್ಕತ್ತುಗಳನ್ನು ಪ್ರತಿದಿನ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಸೇವಿಸುವುದು ಮಧುಮೇಹಿಗಳಿಗೆ ಹಾನಿಕಾರಕವಾಗಿದೆ.ಮಧುಮೇಹವಿಲ್ಲದವರಲ್ಲಿಯೂ ಸಹ, ಭವಿಷ್ಯದಲ್ಲಿ ಮಧುಮೇಹ ಬರುವ ಅಪಾಯವನ್ನು ಹೆಚ್ಚಿಸಬಹುದು.

**ನೀವು ಎಷ್ಟು ಸಕ್ಕರೆ ರಹಿತ ಬಿಸ್ಕತ್ತು ತಿನ್ನಬಹುದು?:** ನೀವು ಸಕ್ಕರೆ ರಹಿತ ಬಿಸ್ಕತ್ತುಗಳನ್ನು ಸೇವಿಸಿದರೆ, ಅವು ಉಚಿತವೆಂದು ಭಾವಿಸಿ ನೀವು ಅವುಗಳನ್ನು ಅತಿಯಾಗಿ ತಿನ್ನಬಾರದು ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ವೈದ್ಯರು ದಿನಕ್ಕೆ 1-2 ಬಿಸ್ಕತ್ತುಗಳಿಗಿಂತ ಹೆಚ್ಚು ತಿನ್ನಬಾರದು, ಅದು ಕೂಡ ಸಾಂದರ್ಭಿಕವಾಗಿ ಮಾತ್ರ ತಿನ್ನಲು ಸಲಹೆ ನೀಡುತ್ತಾರೆ. ಪ್ರತಿದಿನ ಚಹಾದೊಂದಿಗೆ ಬಿಸ್ಕತ್ತುಗಳನ್ನು ತಿನ್ನುವ ಅಭ್ಯಾಸವನ್ನು ತಪ್ಪಿಸುವುದು ಒಳ್ಳೆಯದು.

---

# ಹೆಚ್ಚುತ್ತಿವೆ ಮದ್ರಾಸ್ ಐ ಕಣ್ಣಿನ ಸೋಂಕು (ಪಿಂಕ್ ಐ)

• ಉದಯವಾಹಿನಿ, ಬೆಂಗಳೂರು

ಶೀತಗಾಳಿ ಪ್ರಭಾವದಿಂದ ನಗರದಲ್ಲಿ ಪಿಂಕ್ ಐ ಪ್ರಕರಣಗಳು ಹೆಚ್ಚುತ್ತಿರುವುದರಿಂದ ನಾಗರಿಕರು ಎಚ್ಚರಿಕೆ ವಹಿಸದಿದ್ದರೆ ಭಾರಿ ಪರಿಣಾಮ ಎದುರಿಸಬೇಕಾಗುತ್ತದೆ. ಶೀತಗಾಳಿ ಪ್ರಭಾವದಿಂದ ಹೆಚ್ಚುತ್ತಿರುವ ತೇವಾಂಶದ ವಾತಾವರಣದಿಂದಾಗಿ ಮದ್ರಾಸ್ ಐ ಕಣ್ಣಿನ ಸೋಂಕು ಹೆಚ್ಚಳವಾಗುತ್ತಿದೆ. ಅದರಲ್ಲೂ ಶಾಲಾ ಮಕ್ಕಳಲ್ಲಿಯೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಈ ಸೋಂಕು ಒಬ್ಬರಿಂದ ಮತ್ತೊಬ್ಬರಿಗೆ ವೇಗವಾಗಿ ಹರಡುವ ಸಾಮರ್ಥ್ಯ ಹೊಂದಿದೆ.

ಚಳಿ ವಾತಾವರಣದಿಂದ ಉತ್ಪತ್ತಿಯಾಗುವ ವೈರಾಣು ಕಣ್ಣಿನಲ್ಲಿ ಉರಿ ಅಥವಾ ಸೋಂಕು ಸೃಷ್ಟಿಸುತ್ತದೆ. ಧೂಳು, ಅಲರ್ಜಿಗಳು, ಮಾಲಿನ್ಯ ಇವುಗಳಿಂದಲೂ ಈ ಅಲರ್ಜಿ ಸಮಸ್ಯೆ ಬರಬಹುದು. ಒಬ್ಬರಿಂದ ಮತ್ತೊಬ್ಬರಿಗೆ ಸುಲಭವಾಗಿ ಹರಡುವ ಸೋಂಕು ಇದಾಗಿದೆ. ಕಣ್ಣುಗಳು ಕೆಂಪಾಗುವುದು, ಸುಡುವಂತಾಗುವುದು, ಬೆಳಕಿಗೆ ನೋವು, ಕಣ್ಣು ಮಿಡಿಯುವುದು ಈ ಸೋಂಕಿನ ಲಕ್ಷಣಗಳಾಗಿವೆ.

ಈ ಸೋಂಕು ಗುಣಮುಖವಾಗುವವರೆಗೂ ಸಾಬೂನು ಬಳಸಿ ಕೈಗಳನ್ನು ಪದೇಪದೇ ತೊಳೆಯುವುದು. ಕಣ್ಣಿನ ವೈದ್ಯರು ಸೂಚಿಸಿದ ಔಷಧಿ ಅಥವಾ ಐಡ್ರಾಪ್ಸ್ ಅನ್ನು ನಿಯಮಿತವಾಗಿ ಬಳಸಿ ಕಣ್ಣುಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಬಳಸಿದ ಟಿಶ್ಯೂ ಇಲ್ಲವೇ ಕಾಟನ್ ಅನ್ನು ತಕ್ಷಣ ಬೀಸಾಡುವುದು. ಸೋಂಕಿತ ವ್ಯಕ್ತಿಯಿಂದ ಇತರರು ಸ್ವಲ್ಪ ದೂರವಿರಬೇಕು. ರೋಗಿ ಗುಣಮುಕ್ತರಾಗುವವರೆಗೂ ಸಾರ್ವಜನಿಕ ಸ್ಥಳಗಳಿಗೆ ಹೋಗಬಾರದು. ಕಣ್ಣಿಗೆ ವಿಶ್ರಾಂತಿ ಇಲ್ಲದೆ ಮೊಬೈಲ್ ಅಥವಾ ಟಿವಿ ವೀಕ್ಷಣೆ ಬೇಡ. ಅನಗತ್ಯ ಕಣ್ಣುಗಳನ್ನು ಉಜ್ಜುವುದು ಮುಟ್ಟುವುದು ಮಾಡಬಾರದು. ಸೋಂಕಿತರು ಬಳಸಿದ ಮೇಕಪ್, ಕಾಜಲ್, ಲೆನ್ಸ್ ಟವಲ್ ಬಳಕೆ ತಪ್ಪಿಸಬೇಕು. ಮನೆ ಮದ್ದು ಬೇಡಾ ವೈದ್ಯರ ಸಲಹೆ ಇಲ್ಲದೆ ಔಷಧಿ ಬಳಸಬೇಡಿ ಎಂದು ತಜ್ಞರು ಸಲಹೆ ನೀಡಿದ್ದಾರೆ.



---

# ಬೆಳಗ್ಗೆ ಎದ್ದಾಗ ಹಿಂಗೆಲ್ಲಾ ಲಕ್ಷಣಗಳು ಕಾಣಿಸಿಕೊಂಡರೆ ಅದು ಬ್ರೈನ್ ಸ್ಟ್ರೋಕ್ ಆಗಿರಬಹುದು

ಪಾರ್ಶ್ವವಾಯು ಎಂದರೆ ಮೆದುಳಿಗೆ ರಕ್ತದ ಹರಿವು ಇದ್ದಕ್ಕಿದ್ದಂತೆ ನಿಂತಾಗ ಕಡಿಮೆಯಾದಾಗ ಸಂಭವಿಸುವ ವೈದ್ಯಕೀಯ ತುರ್ತುಸ್ಥಿತಿ. ಇದು ಮೆದುಳಿಗೆ ಆಮ್ಲಜನಕ, ಅಗತ್ಯ ಪೋಷಕಾಂಶಗಳನ್ನು ಪಡೆಯುವುದನ್ನು ತಡೆಯುತ್ತದೆ. ಒಂದು ವೇಳೆ ವ್ಯಕ್ತಿಗೆ ಈ ಸಮಸ್ಯೆ ಕಾಣಿಸಿಕೊಂಡರೆ, ತಕ್ಷಣವೇ ಚಿಕಿತ್ಸೆ ನೀಡದಿದ್ದರೆ, ಇದರಿಂದ ಮೆದುಳಿಗೆ ಹಾನಿ, ಪಾರ್ಶ್ವವಾಯು ಮತ್ತು ಜೀವಕ್ಕೆ ಅಪಾಯ ಉಂಟಾಗುವ ಸಾಧ್ಯತೆಗಳಿರುತ್ತವೆ. ಅದರಲ್ಲೂ ಈ ಆರೋಗ್ಯ ಸಮಸ್ಯೆ ಕಾಣಿಸಿಕೊಂಡ 24 ಗಂಟೆಯೊಳಗೆ ವ್ಯಕ್ತಿಗೆ ಸರಿಯಾದ ಚಿಕಿತ್ಸೆ ನೀಡುವುದು ತುಂಬಾನೇ ಮುಖ್ಯ, ಇಲ್ಲಾಂದ್ರೆ ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟಿ ಅಪಾಯ ಎದುರಾಗುವ ಸಾಧ್ಯತೆ ತಳ್ಳಿ ಹಾಕುವ ಹಾಗಿಲ್ಲ ಎನ್ನುತ್ತಾರೆ ತಜ್ಞ ವೈದ್ಯರಾದ ಡಾ. ಪ್ರವೀಣ್ ಗುಪ್ತಾ ಅವರು


> **ಚಿಕಿತ್ಸೆ ನೀಡುವುದು ಮುಖ್ಯ**

**ಪಾರ್ಶ್ವವಾಯು ಏಕೆ ಸಂಭವಿಸುತ್ತದೆ?:** ಪಾರ್ಶ್ವವಾಯುವಿಗೆ ಎರಡು ಮುಖ್ಯ ವಿಧಗಳಿವೆ. ಮೊದಲನೆಯದು ಇಸ್ಕೆಮಿಕ್ ಪಾರ್ಶ್ವವಾಯು, ಇದರಲ್ಲಿ ಮೆದುಳಿನಲ್ಲಿರುವ ರಕ್ತನಾಳದಲ್ಲಿ ರಕ್ತ ಹೆಪ್ಪು ಗಟ್ಟುವಿಕೆ ರೂಪುಗೊಳ್ಳುತ್ತದೆ.

ಎರಡನೆಯದು ರಕ್ತಸ್ರಾವದ ಪಾರ್ಶ್ವವಾಯು, ಇದರಲ್ಲಿ ರಕ್ತನಾಳವು ಛಿದ್ರ ಗೊಳ್ಳುತ್ತದೆ ಅಥವಾ ಸೋರಿಕೆಯಾಗುತ್ತದೆ. ಭವಿಷ್ಯದಲ್ಲಿ ದೊಡ್ಡ ಪಾರ್ಶ್ವವಾಯುವಿನ ಎಚ್ಚರಿಕೆ ಚಿಹ್ನೆ ಎಂದು ಪರಿಗಣಿಸಲಾದ ಮಿನಿ-ಪಾರ್ಶ್ವವಾಯು ಅಥವಾ ಟಿಟಿಎ ಕೂಡ ಇದೆ. ಅಧಿಕ ರಕ್ತದೊತ್ತಡ, ಮಧುಮೇಹ, ಅಧಿಕ ಕೊಲೆಸ್ಟ್ರಾಲ್, ಧೂಮಪಾನ, ಬೊಜ್ಜು, ಹೃದ್ರೋಗ, ದೈಹಿಕ ಚಟುವಟಿಕೆಯ ಕೊರತೆ ಮತ್ತು ಅತಿಯಾದ ಮದ್ಯಪಾನ ಪ್ರಮುಖ ಕಾರಣಗಳಾಗಿವೆ.

**ಸ್ಟ್ರೋಕ್ ಕಾಯಿಲೆಯ ರೋಗಲಕ್ಷಣಗಳು ಹೇಗಿರುತ್ತವೆ?:** ವೈದ್ಯರ ಪ್ರಕಾರ, ಕೆಲವೊಮ್ಮೆ ಬೆಳಗ್ಗೆ ಎದ್ದ ತಕ್ಷಣ ಪಾರ್ಶ್ವವಾಯುವಿನ ಲಕ್ಷಣಗಳು ಗೋಚರಿಸುತ್ತವೆ. ಒಂದು ಬದಿ ಸಡಿಲವಾಗಿ, ವಕ್ರವಾಗಿ ಕಂಡು ಬಂದರೆ, ಅಥವಾ ನಗುವಾಗ





ನಿಮ್ಮ ಮುಖ ವಕ್ರವಾಗಿ ಕಂಡುಬಂದರೆ, ಸರಿಯಾಗಿ ಮಾತನಾಡಲು ಆಗದಿದ್ದರೆ, ಕಣ್ಣಿನ ದೃಷ್ಟಿಯಲ್ಲಿ ಸಮಸ್ಯೆಗಳು ಕಾಣಿಸಿಕೊಂಡರೆ, ನೆನೆಪಿನ ಶಕ್ತಿ ಕಡಿಮೆ ಆಗುತ್ತಿದ್ದರೆ, ಕೈ ತೋಳಿನಲ್ಲಿ ಅಥವಾ ಕಾಲಿನಲ್ಲಿ ಹಠಾತ್ ಮರಗಟ್ಟುವಿಕೆ ಸಮಸ್ಯೆ ಕಾಣಿಸಿಕೊಂಡರೆ ವಿಶೇಷವಾಗಿ ದೇಹದ ಒಂದು ಬದಿ ಜುಮ್ಮೆನಿಸುವಿಕೆ, ಪಾರ್ಶ್ವವಾಯುವಿನ ಪ್ರಮುಖ ಲಕ್ಷಣವಾಗಿ ರಬಹುದು.

**ಈ ಲಕ್ಷಣಗಳನ್ನ ನಿರ್ಲಕ್ಷ್ಯ ಮಾಡಲು ಹೋಗಬೇಡಿ:** ಹಠಾತ್‌ಮಾತನಾಡಲು ತೊಂದರೆಯಾಗುವುದು ಕೂಡ ಅಪಾಯಕಾರಿ ಲಕ್ಷಣ.ಅಂದರೆ ಮಾತನಾಡುವಾಗ ತೊಂದರೆ ಆಗುವುದು ಗ್ರಹಿಸದಿರುವುದು, ಸರಳ ವಾಕ್ಯಗಳನ್ನು ಪುನರಾವರ್ತಿಸುವಲ್ಲಿ ತೊಂದರೆಯನ್ನು ಲಘುವಾಗಿ ಪರಿಗಣಿಸಬಾರದು. ಹಠಾತ್ ದೃಷ್ಟಿ ನಷ್ಟ, ಎರಡು ಕಣ್ಣಿನ ದೃಷ್ಟಿ ಅಥವಾ ಒಂದು ಕಣ್ಣಿನಲ್ಲಿ ದೃಷ್ಟಿ ಸಂಪೂರ್ಣ ನಷ್ಟವು ಪಾರ್ಶ್ವವಾಯುವಿನ ಸೂಚನೆಯಾಗಿರಬಹುದು.

ಕೆಲವು ಜನರಿಗೆ ಬೆಳಗ್ಗೆ ಎದ್ದಾಗ ಹಠಾತ್ ಗೊಂದಲ ಆಗುವುದು, ಮಾತನ್ನು ಅರ್ಥಮಾಡಿಕೊಳ್ಳುವಲ್ಲಿ ತೊಂದರೆ ಕಾಣಿಸಿಕೊಳ್ಳವುದು, ಸಮತೋಲನ ಕಳೆದುಕೊಳ್ಳುವುದು ಅಥವಾ ನಡೆಯುವಾಗ ದಿಗ್ಭಮೆಗೊಳ್ಳುವುದನ್ನು ಸಹ ಅನುಭ ವಿಸಬಹುದು.

> **ಸರಿಯಾಗಿ ನಿದ್ರೆ ಮಾಡುವ ಅಭ್ಯಾಸ ಮಾಡಿಕೊಳ್ಳಿ**
> **ಪಾರ್ಶ್ವವಾಯು ಅಪಾಯವನ್ನು ಕಡಿಮೆ ಮಾಡಲು ದಿನದಲ್ಲಿ ಸರಿಯಾಗಿ ನಿದ್ರೆ ಮಾಡುವುದು ಕೂಡ ಅತ್ಯಗತ್ಯ. ನಿದ್ರೆ ನಮ್ಮ ಆರೋಗ್ಯವನ್ನು ಉಪ್ಪಾಸ ಭರಿತವಾಗಿರುವ ಹಾಗೆ ನೋಡಿಕೊಳ್ಳುವುದರ ಜೊತೆಗೆ ಅನೇಕ ಅಪಾಯಕಾರಿ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ. ಪ್ರತಿದಿನ ಸಾಕಷ್ಟು ನಿದ್ರೆ ದೇಹವು ಉತ್ತಮವಾಗಿ ಚೇತರಿಸಿಕೊಳ್ಳಲು ಸಹಾಯ ಮಾಡುತ್ತದೆ. ಮದ್ಯಪಾನ, ಧೂಮಪಾನ ಮತ್ತು ಕಾಫಿಯನ್ನು ತಪ್ಪಿಸಬೇಕು, ಏಕೆಂದರೆ ಇವು ಪಾರ್ಶ್ವವಾಯು ಅಪಾಯವನ್ನು ಹೆಚ್ಚಿಸಬಹುದು. ಇದಲ್ಲದೆ, ರಕ್ತದೊತ್ತಡ ಮತ್ತು ಕೊಲೆಸ್ಟ್ರಾಲ್ ಅನ್ನು ನಿಯಂತ್ರಿಸುವುದು ಬಹಳ ಮುಖ್ಯ. ಅಧಿಕ ರಕ್ತದೊತ್ತಡ ಮತ್ತು ಕೊಲೆಸ್ಟ್ರಾಲ್ ಕೂಡ ಪಾರ್ಶ್ವವಾಯು ಅಪಾಯವನ್ನು ಹೆಚ್ಚಿಸುತ್ತದೆ. ಆದ್ದರಿಂದ, ಈ ಎರಡೂ ಪರಿಸ್ಥಿತಿಗಳನ್ನು ನಿರ್ವಹಿಸುವುದು ಅತ್ಯಗತ್ಯ.**

ವಯಸ್ಸಾದವರಲ್ಲಿ, ಈ ಲಕ್ಷಣಗಳು ಹಠಾತ್ ಆಯಾಸ, ಶಾಂತತೆ, ನಡವಳಿಕೆಯಲ್ಲಿನ ಬದಲಾವಣೆಗಳು ಅಥವಾ ದೈನಂದಿನ ಕೆಲಸಗಳನ್ನು ನಿರ್ವಹಿಸುವಲ್ಲಿ ತೊಂದರೆ ಮುಂತಾದ ಸೌಮ್ಯವಾಗಿರಬಹುದು.

**FAST ಪರೀಕ್ಷೆಯೊಂದಿಗೆ ಪಾರ್ಶ್ವವಾಯು ಇರುವಿಕೆಯನ್ನು ಪತ್ತೆ ಮಾಡಿ ವೈದ್ಯರು FAST ಪರೀಕ್ಷೆಯನ್ನು ಶಿಫಾರಸು ಮಾಡುತ್ತಾರೆ, ಇದರಲ್ಲಿ ಇವು ಸೇರಿವೆ: F -ಮುಖ:** ನಿಮ್ಮ ಮುಖ ವಕ್ರವಾಗಿ ಕಾಣುತ್ತಿದೆಯೇ?

A **ತೋಳು:** ಒಂದು ತೋಳನ್ನು ಎತ್ತುವಲ್ಲಿ ದೌರ್ಬಲ್ಯವಿದೆಯೇ?

S **ಮಾತು:** ಮಾತನಾಡಲು ತೊಂದರೆ, ಅಸ್ಪಷ್ಟ ಮಾತು?

T **ಸಮಯ:** ನೀವು ಒಂದೇ ಒಂದು ಲಕ್ಷಣವನ್ನು ಗಮನಿಸಿದರೆ, ತಕ್ಷಣ ತುರ್ತು ಸೇವೆಗಳಿಗೆ ಕರೆ ಮಾಡಿ ಅಥವಾ ವೈದ್ಯರ ಬಳಿಗೆ ಹೋಗಿ

**ತಕ್ಷಣದ ಕ್ರಮದ ಅಗತ್ಯತೆಗಳೇನು?:** ಪಾರ್ಶ್ವವಾಯುವಿನ ಸಂದರ್ಭದಲ್ಲಿ, ಪ್ರತಿ ಸೆಕೆಂಡ್ ಅಮೂಲ್ಯವಾದುದು. ರೋಗಿಯನ್ನು ಬೇಗ ಆಸ್ಪತ್ರೆಗೆ ಕರೆದೊಯ್ಯಲಾಗುತ್ತದೆ, ಹೆಚ್ಚಿನ ಮೆದುಳಿಗೆ ಹಾನಿಯಾಗುವುದನ್ನು ತಡೆಯಬಹುದು. ಬೆಳಗ್ಗೆ ಬರುವ ಈ ಲಕ್ಷಣಗಳನ್ನು ನಿರ್ಲಕ್ಷಿಸುವುದು, ಅವುಗಳನ್ನು ಆಯಾಸ, ನಿದ್ರೆಯ ಕೊರತೆ ಅಥವಾ ಸಾಮಾನ್ಯ ದೌರ್ಬಲ್ಯ ಎಂದು ಭಾವಿಸುವುದು ದುಬಾರಿ ಯಾಗಬಹುದು ಎಂದು ವೈದ್ಯರು ಹೇಳುತ್ತಾರೆ. ನೀವು ಅಥವಾ ನಿಮ್ಮ ಕುಟುಂಬದಲ್ಲಿ ಯಾರಾದರೂ ಎಚ್ಚರವಾದಾಗ ಈ ಲಕ್ಷಣಗಳನ್ನು ಅನುಭವಿಸಿದರೆ, ವಿಳಂಬ ಮಾಡಬೇಡಿ. ಸಕಾಲಿಕ ಕ್ರಮವು ಜೀವಗಳನ್ನು ಉಳಿಸಬಹುದಾದ್ದರಿಂದ ತಕ್ಷಣ ವೈದ್ಯಕೀಯ ಸಹಾಯವನ್ನು ಪಡೆಯಿರಿ.

### ಬ್ಯಾಂಕುಗಳು ಕೇವಲ ಹಣಕಾಸು ಸಂಸ್ಥೆಗಳಲ್ಲ, ಸಮಾಜದ ಆರ್ಥಿಕ ಚಲನೆಗೆ ದಿಕ್ಕು ತೋರಿಸುವ ಪ್ರಮುಖ ಸಂಸ್ಥೆಗಳಾಗಿವೆ

# ಬ್ಯಾಂಕುಗಳು ಜನಪರವಾಗಿ ಕಾರ್ಯನಿರ್ವಹಿಸಲಿ: ಬೊಮ್ಮಾಯಿ

• ಉದಯವಾಹಿನಿ ಗದಗ

ಬ್ಯಾಂಕುಗಳು ಕೇವಲ ಹಣಕಾಸು ಸಂಸ್ಥೆಗಳಲ್ಲ, ಸಮಾಜದ ಆರ್ಥಿಕ ಚಲನೆಗೆ ದಿಕ್ಕು ತೋರಿಸುವ ಪ್ರಮುಖ ಸಂಸ್ಥೆಗಳಾಗಿವೆ. ಬ್ಯಾಂಕುಗಳಲ್ಲಿ ಇರುವ ಹಣ ಸಂಪೂರ್ಣವಾಗಿ ಸಾರ್ವಜನಿಕರದ್ದೇ ಆಗಿದ್ದು, ಆ ಹಣವನ್ನು ಸ್ಥಳೀಯವಾಗಿ ಸದ್ಬಳಕೆ ಮಾಡುವ ಮೂಲಕ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಸಹಕಾರ ನೀಡಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

**ಬ್ಯಾಂಕುಗಳ ಸಲಹಾ ಸಮಿತಿ ಸಭೆ**

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಬ್ಯಾಂಕುಗಳ ಸಲಹಾ ಸಮಿತಿ ಸಭೆ ಜರುಗಿತು. ಸಭೆಯಲ್ಲಿ ವಿವಿಧ ಬ್ಯಾಂಕುಗಳ ಸಾಲ ವಿತರಣೆ, ಹಣಕಾಸು ಒಳಗೊಳ್ಳಿಕೆ, ಸರ್ಕಾರಿ ಯೋಜನೆಗಳ ಅನುಷ್ಠಾನ ಪ್ರಗತಿ ಕುರಿತು ಸವಿಸ್ತಾರವಾಗಿ ಚರ್ಚಿಸಲಾಯಿತು.

ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೆ ಬ್ಯಾಂಕುಗಳು ಪ್ರಮುಖ ಪಾತ್ರ ವಹಿಸಬೇಕು. ಸರ್ಕಾರದ ಜನಪರ ಯೋಜನೆಗಳ ಲಾಭ ಪ್ರತಿಯೊಬ್ಬ ಅರ್ಹ ವ್ಯಕ್ತಿಗೂ ತಲುಪುವಂತೆ ಬ್ಯಾಂಕುಗಳು ಕಾರ್ಯನಿರ್ವಹಿಸಬೇಕು ಎಂದರು. ಬ್ಯಾಂಕುಗಳು ಮಾನವೀಯತೆ, ಸಾಮಾಜಿಕ ಹೊಣೆಗಾರಿಕೆ ಹಾಗೂ ಜನಪರ ಚಿಂತನೆಯೊಂದಿಗೆ ಕಾರ್ಯನಿರ್ವಹಿಸಬೇಕು. ಲಾಭವೇ ಮುಖ್ಯ ಎಂಬ ಮನೋಭಾವವನ್ನು ಬಿಟ್ಟು, ಬ್ಯಾಂಕುಗಳು ಸ್ಥಾಪನೆಯಾದ ಮೂಲ ಉದ್ದೇಶವನ್ನು ಮೊದಲು ಈಡೇರಿಸಬೇಕು ಎಂದು ಅವರು ಹೇಳಿದರು.

ಜಿಲ್ಲೆಯಲ್ಲಿ ಸಂಗ್ರಹವಾಗುವ ಬ್ಯಾಂಕ್ ಹಣವನ್ನು ಇದೇ ಪ್ರದೇಶದ ಅಭಿವೃದ್ಧಿಗೆ ಬಳಸಬೇಕು. ಇದರಿಂದ ಉದ್ಯೋಗ ಸೃಷ್ಟಿ, ವ್ಯಾಪಾರ ವೃದ್ಧಿ ಹಾಗೂ ಗ್ರಾಮೀಣ ಆರ್ಥಿಕ ಬಲವರ್ಧನೆ ಸಾಧ್ಯವಾಗುತ್ತದೆ. ಈ ಮೂಲಕ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಬಹುದು ಎಂದು ಸಂಸದರು ಅಭಿಪ್ರಾಯಪಟ್ಟರು. ಬ್ಯಾಂಕುಗಳು ಕಚೇರಿಗಳಿಗೆ ಸೀಮಿತವಾಗದೆ ಜನರ ಬಳಿಗೆ ಹೋಗಬೇಕು. ಸಾಲ ಮಂಜೂರಾತಿಯಲ್ಲಿ ವಿಳಂಬವಾಗಬಾರದು. ಅರ್ಹರಿಗೆ ಯಾವುದೇ ಅಡಚಣೆ ಇಲ್ಲದೆ ಸಾಲ ಸೌಲಭ್ಯ ದೊರೆಯಬೇಕು ಎಂದು ಅವರು ತಿಳಿಸಿದರು. ಲೀಡ್ ಬ್ಯಾಂಕ್ ಮ್ಯಾನೇಜರ್ ಸಂತೋಷ ಎಂ.ವಿ. ಮಾತನಾಡಿ ಜಿಲ್ಲೆಯಲ್ಲಿ 31-12-2025 ರ ವರೆಗೆ ಲೀಡ್ ಬ್ಯಾಂಕ್ ನ 183 ಶಾಖೆಗಳು ಕಾರ್ಯನಿರ್ವಹಿಸುತ್ತಿವೆ. ಸೆಪ್ಟೆಂಬರ್ 2025 ರವರೆಗೆ ಜಿಲ್ಲೆಯ ಸಾಲ ಠೇವಿ ಅನುಪಾತ 102.18 % ರಷ್ಟಾಗಿರುತ್ತದೆ. ಎಲ್ಲಾ ಬ್ಯಾಂಕಿನ ನಿಯಂತ್ರಣಾಧಿಕಾರಿಗಳು ಸಾಲ ಠೇವಣಿ ಅನುಪಾತವನ್ನು ಸುಧಾರಿಸಲು ಶಾಖೆಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು. ಸಭೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಲ ಯೋಜನೆಗಳಾದ ಪ್ರಧಾನಮಂತ್ರಿ ಮುದ್ರಾ ಯೋಜನೆ, ಉದ್ಯೋಗಿನಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ದೇವರಾಜ ಅರಸ ಹಿಂದುಳಿದ ಅಭಿವೃದ್ಧಿ ನಿಗಮ, ಕೈಮಗ್ಗ ಮತ್ತು ಜವಳಿ ಇಲಾಖೆಯ, ಜಿ.ಪಂ.ದ ಎನ್.ಆರ್.ಎಲ್, ಎಂ, ಪಿಎಂಎವೈ, ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆ ಪಿಎಂಎಫ್‌ಬಿವೈ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಲಾಯಿತು. ಸಭೆಯಲ್ಲಿ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ನಬಾರ್ಡದ ಎಜಿಎಂ ಮಯೂರ ಕಾಂಬ್ಳೆ, ಆರ್‌ಬಿಐ ಎಜಿಎಂ, ಸೂರಜ ಎಸ್, ಎಸ್‌ಬಿಐ ದ ರೀಜನಲ್ ಮ್ಯಾನೇಜರ್ ನಾಗಸುಬ್ಬಾರೆಡ್ಡಿ ಹಾಜರಿದ್ದರು.


ಉದಯವಾಹಿನಿ ಚಿತ್ರ

**ಬಡತನ ನಿರ್ಮೂಲನೆಗೆ ಹೌಸಿಂಗ್ ಲೋನ್ ಪರಿಣಾಮಕಾರಿ**

ಬಡತನ ನಿವಾರಣೆಯಲ್ಲಿ ಹೌಸಿಂಗ್ ಲೋನ್ ಮಹತ್ವದ ಪಾತ್ರ ವಹಿಸುತ್ತದೆ. ಸ್ವಂತ ಮನೆ ಹೊಂದುವ ಮೂಲಕ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಜೀವನಮಟ್ಟ ಸುಧಾರಿಸುತ್ತದೆ. ಈ ಹಿನ್ನೆಲೆಯಲ್ಲಿ ಗೃಹ ಸಾಲ ವಿತರಣೆಗೆ ಬ್ಯಾಂಕುಗಳು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಂಸದರು ಸಲಹೆ ನೀಡಿದರು.
ಪ್ರಧಾನಮಂತ್ರಿ ಜನಧನ ಯೋಜನೆ, ಮುದ್ರಾ ಸಾಲ, ಸ್ವನಿಧಿ ಯೋಜನೆ, ಕಿಸಾನ್ ಕ್ರೆಡಿಟ್ ಕಾರ್ಡ್, ಸ್ವಸಹಾಯ ಸಂಘಗಳಿಗೆ ಸಾಲ ವಿತರಣೆ ಸೇರಿದಂತೆ ಪ್ರಮುಖ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಿದ ಸಂಸದ ಬೊಮ್ಮಾಯಿ, ಗ್ರಾಮೀಣ ಪ್ರದೇಶದ ರೈತರು, ಮಹಿಳೆಯರು ಹಾಗೂ ಸಣ್ಣ ವ್ಯಾಪಾರಿಗಳಿಗೆ ಬ್ಯಾಂಕುಗಳಿಂದ ತಕ್ಷಣದ ಹಾಗೂ ಸುಲಭ ಸಾಲ ಸೌಲಭ್ಯ ಒದಗಿಸುವಂತೆ ಸೂಚಿಸಿದರು.

**ಬೃಹತ್ ಲೋನ್ ಮೇಳಗಳಿಗೆ ಸೂಚನೆ**

ರೈತರು, ಮಹಿಳೆಯರು, ಯುವ ಉದ್ಯಮಿಗಳು ಹಾಗೂ ಸಣ್ಣ ವ್ಯಾಪಾರಿಗಳಿಗೆ ಬ್ಯಾಂಕ್ ಸಾಲ ಸುಲಭವಾಗಿ ದೊರಕುವಂತೆ ಬೃಹತ್ ಮಟ್ಟದಲ್ಲಿ ಲೋನ್ ಮೇಳಗಳನ್ನು ಆಯೋಜಿಸಬೇಕು ಎಂದು ಅವರು ಸೂಚಿಸಿದರು. ಸಾಲ ಅರ್ಜಿಗಳ ಪ್ರಕ್ರಿಯೆ ಸರಳವಾಗಿರಬೇಕು. ಅರ್ಹ ಫಲಾನುಭವಿಗಳಿಗೆ ಯಾವುದೇ ಅನಗತ್ಯ ಅಡೆತಡೆ ಆಗಬಾರದು ಎಂದು ಹೇಳಿದರು.

## ಆಶಾ ಕಾರ್ಯಕರ್ತೆಯರಿಗೆ ಉಚಿತ ಸಿಯುಜಿ ಸಿಮ್ ಕಾರ್ಡ್ ವಿತರಣೆ

• ಉದಯವಾಹಿನಿ ಚಿತ್ರದುರ್ಗ

ಚಿತ್ರದುರ್ಗ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಯಲ್ಲಿ ತಾಲ್ಲೂಕಿನ 320 ಆಶಾ ಕಾರ್ಯಕರ್ತೆಯರಿಗೆ ಟಿಹೆಚ್‌ಒ ಡಾ.ಬಿ.ವಿ.ಗಿರೀಶ್ ಅವರು ಉಚಿತ ಸಿಯುಜಿ ಸಿಮ್ ಕಾರ್ಡ್ ವಿತರಣೆ ಮಾಡಿದರು.

ಈ ವೇಳೆ ಮಾತನಾಡಿದ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬಿ.ವಿ.ಗಿರೀಶ್, ಎಲ್ಲರಿಗೂ ಆರೋಗ್ಯ, ಎಲ್ಲೆಡೆ ಆರೋಗ್ಯ, ಗುಣಮಟ್ಟದ ಹೆರಿಗೆ ಸೇವಾ ಸೌಲಭ್ಯ ಒದಗಿಸಲು ಸಾರ್ವಜನಿಕ ಆರೋಗ್ಯ ಕಾಪಾಡಲು, ವಲಯಗಳಲ್ಲಿ ಆಶಾ ಕಾರ್ಯಕರ್ತೆಯರು ಇಲಾಖೆ ಸಿಬ್ಬಂದಿಯವರಿಗೆ ಮೇಲ್ವಿಚಾರಣಾ ಅಧಿಕಾರಿಗಳಿಗೆ, ವೈದ್ಯರಿಗೆ ಪರಸ್ಪರ ಉಚಿತ ಕರೆಗಳನ್ನು ಮಾಡಲು, ಎಸ್‌ಎಂಎಸ್ ಕಳುಹಿಸಲು ಸಿಯುಜಿ ಸಿಮ್‌ಗಳು ತುಂಬಾ ಉಪಯುಕ್ತ ಎಂದರು.

ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಜೆ.ಆರ್. ಗೌರಮ್ಮ ಮಾತನಾಡಿ, ಸಾರ್ವಜನಿಕ ವಲಯಗಳಲ್ಲಿ ಫಲಾನುಭವಿಗಳಿಗೆ ಗುಣಮಟ್ಟದ ಆರೋಗ್ಯ ಸೇವೆ ನೀಡಲು ಸಿಮ್ ಕಾರ್ಡ್‌ಗಳನ್ನು ಸದ್ಬಳಕೆ ಮಾಡಿಕೊಂಡು, ಕಾರ್ಯನಿರ್ವಹಿಸಬೇಕು. ಸಕಾಲಕ್ಕೆ ಗರ್ಭಿಣಿಯರ ನೋಂದಣಿ, ತಾಯಿ ಕಾರ್ಡ್ ವಿತರಣೆ ಮಾಡಿ, ವೈದ್ಯರಲ್ಲಿ ಪರೀಕ್ಷೆ ಮತ್ತು ಸೂಕ್ತ ಚಿಕಿತ್ಸೆ ನೀಡುತ್ತಾ ಪೌಷ್ಟಿಕ ಆಹಾರ ಸೇವನೆ ಬಗ್ಗೆ ತಾಯಂದಿರಿಗೆ ಮಾಹಿತಿ ನೀಡಿ, ಸಹಜ ಹೆರಿಗೆ ಮಾಡಿಸಲು ಉತ್ತೇಜನ ನೀಡಬೇಕೆಂದರು.

ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮೂಗಪ್ಪ ಮಾತನಾಡಿ, ತಾಯಿ ಮರಣ ಮತ್ತು ಶಿಶು ಮರಣ ತಡೆಯಲು ಮತ್ತು ಸಾಂಕ್ರಾಮಿಕ ಹಾಗೂ ಅಸಂಕ್ರಾಮಿಕ ರೋಗಗಳ ನಿಯಂತ್ರಣ ಮಾಡುವುದರ ಜೊತೆಗೆ ಸರ್ಕಾರದ ಮಾರ್ಗಸೂಚಿಯಂತೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನ ಮಾಡುತ್ತಾ ಸಾರ್ವಜನಿಕರ ಆರೋಗ್ಯ ಕಾಪಾಡೋಣ ಎಂದರು. ತಾಲ್ಲೂಕು ಆಶಾ ಮೆಂಟರ್ ತಬಿತಾ, ಸರ್ಕಾರದಿಂದ ಬಂದಂತಹ ಸೇವಾ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಆಶಾ ಕಾರ್ಯಕರ್ತೆಯರು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಬಿಪಿಎಂ ಮಹಮ್ಮದ್ ಅಲಿ, ಲೆಕ್ಕಪರಿಶೋಧಕ ಅಬೀಬ್ ಉಲ್ಲಾ, ಗಣಕಯಂತ್ರ ಸಹಾಯಕಿ ನಾಗವೇಣಿ. ಸಿಬ್ಬಂದಿಯವರಾದ ಪ್ರತಿಭಾ, ಅಕ್ಷಯ, ಆಶಾ ಕಾರ್ಯಕರ್ತೆಯರು ಮತ್ತಿತರರು ಹಾಜರಿದ್ದರು.


ಉದಯವಾಹಿನಿ ಚಿತ್ರ

> ಸರ್ಕಾರ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನಗೊಳಿಸಲು ಉಚಿತ ಸಿಮ್ ಕಾರ್ಡ್ ಒದಗಿಸುತ್ತಿದ್ದು, ಅವಶ್ಯಕ ಸಂದರ್ಭದಲ್ಲಿ ದೂರವಾಣಿ ಕರೆಗಳನ್ನು ಮಾಡುವ ಮೂಲಕ ಸಾರ್ವಜನಿಕರ ಆರೋಗ್ಯ ಕಾಪಾಡುವ ಜವಾಬ್ದಾರಿ ನಮ್ಮದಾಗಿದೆ. -ಟಿ. ಕೃಷ್ಣನಾಯಕ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ

## ಮೆಕ್ಕೆಜೋಳ: ವ್ಯತ್ಯಾಸದ ಮೊತ್ತ ಪಾವತಿಗೆ ಕ್ರಮ

• ಉದಯವಾಹಿನಿ ಹಾಸನ

ಮೆಕ್ಕೆಜೋಳ ವಹಿವಾಟಿನ ಆಧಾರದ ಮೇಲೆ ರೈತರಿಗೆ ವ್ಯತ್ಯಾಸದ ಮೊತ್ತ ಪಾವತಿಗಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ನೋಂದಣಿ ಕೇಂದ್ರ ಸ್ಥಾಪನೆಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿಯಲ್ಲಿ ಮೆಕ್ಕೆಜೋಳದ ಧಾರಣೆಗೆ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಆಗುವ ವಹಿವಾಟಿನ ಆಧಾರದ ಮೇಲೆ ರೈತರಿಗೆ ವ್ಯತ್ಯಾಸದ ಮೊತ್ತ ಪಾವತಿಸುವ ಕುರಿತು ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಸರ್ಕಾರದ ಆದೇಶದಂತೆ ಕ್ವಿಂಟಲ್‌ಗೆ ರೂ. 2,150 ಕ್ಕಿಂತ ಕಡಿಮೆ ದರದಲ್ಲಿ ಮಾರಾಟವಾದಲ್ಲಿ ವ್ಯತ್ಯಾಸದ ಮೊತ್ತ ಪಾವತಿಯ ವೇಳೆಯಲ್ಲಿ ಯಾವುದೇ ಲೋಪವಾಗದಂತೆ ಕ್ರಮ ಕೈಗೊಳ್ಳಬೇಕು. ಕೃಷಿ ಇಲಾಖೆಯಿಂದ ಗುಣಮಟ್ಟ ಪರಿಶೀಲನೆಗೆ ತಾಂತ್ರಿಕ ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂದರು.

ಜಿಲ್ಲೆಗೆ ನಿಗದಿಪಡಿಸಿರುವ ಮೆಕ್ಕೆಜೋಳದ ನೋಂದಣಿ ಕಾರ್ಯವನ್ನು ಬಯೋಮೆಟ್ರಿಕ್ ಆಧಾರಿತವಾಗಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಸಂಸ್ಥೆ ನಿರ್ವಹಿಸಬೇಕು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಯುಎಂಪಿ ತಂತ್ರಾಂಶದಲ್ಲಿ ದಾಖಲಾಗಿರುವ ನೋಂದಾಯಿತ ರೈತರ ಮಾರಾಟದ ದೃಢೀಕೃತ ಮಾಹಿತಿಯನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದವರು ಪರಿಶೀಲಿಸಿ, ಡಿಬಿಟಿ ಮೂಲಕ ವ್ಯತ್ಯಾಸದ ಮೊತ್ತವನ್ನು ರೈತರಿಗೆ ಪಾವತಿಸಲು ತಿಳಿಸಿದರು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕ ಅರುಣ್ ಕುಮಾರ್, ಕೃಷಿ ಮಾರಾಟ ಇಲಾಖೆಯ ಉಪ ನಿರ್ದೇಶಕ ಶ್ರೀಹರಿ, ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ


## ರಸ್ತೆ ಅಗಲೀಕರಣ ನೆಪದಲ್ಲಿ ದಲಿತರ ಭೂಮಿ ಬಳಕೆ

• ಉದಯವಾಹಿನಿ ಹುಲಸೂರ

ಪಟ್ಟಣದ ಬುದ್ಧವಿಹಾರದಿಂದ ಭಾಲ್ಕಿ-ನೀಲಂಗಾ ಮುಖ್ಯ ರಸ್ತೆಯವರೆಗೆ ನಡೆಯುತ್ತಿರುವ ರಸ್ತೆ ಅಗಲೀಕರಣ ಕಾಮಗಾರಿ ವೇಳೆ, ದಲಿತ ಸಮುದಾಯಕ್ಕೆ ಮಂಜೂರಾದ ಭೂಮಿಯನ್ನು ಯಾವುದೇ ನೋಟಿಸ್ ನೀಡದೇ ಬಳಸಲಾಗುತ್ತಿದೆ ಎಂದು ಆರೋಪಿಸಿ ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಪಟ್ಟಣದ ಇನಾಮಿ ಭೂಮಿ ಸರ್ವೆ ನಂ.1ರಲ್ಲಿ ಒಟ್ಟು 18 ಎಕರೆ 12 ಗುಂಟೆ ಭೂಮಿ ದಲಿತರಿಗೆ ಸರ್ಕಾರ ಮಂಜೂರು ಮಾಡಿದೆ. ಈ ಭೂಮಿಯಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ನಡೆಸಲಾಗುತ್ತಿದೆ ಎಂದು ದೂರಿದರು. ಇತರೆ ಸಮುದಾಯಗಳ ಭೂಮಿಯನ್ನು ಬಿಟ್ಟು, ಉದ್ದೇಶಪೂರ್ವಕವಾಗಿ ದಲಿತರ ಭೂಮಿಗೆ ತೊಂದರೆ ನೀಡಲಾಗುತ್ತಿದೆ ಎಂದು ಆರೋಪಿಸಿದರು. ಕಾಮಗಾರಿ ಆರಂಭಿಸುವ ಮೊದಲು ಭೂಮಿ ಮಾಲೀಕರಿಗೆ ಯಾವುದೇ ನೋಟಿಸ್ ನೀಡಿಲ್ಲ. ಅಲ್ಲದೆ ಭೂಮಿ ಸ್ವಾಧೀನಕ್ಕೆ ಸಂಬಂಧಿಸಿದಂತೆ ಸರ್ವೆ, ದಾಖಲೆ ಪರಿಶೀಲನೆ ಹಾಗೂ ಪರಿಹಾರ ಪ್ರಕ್ರಿಯೆ ಕೈಗೊಳ್ಳದೆ ನೇರವಾಗಿ ಕಾಮಗಾರಿ ನಡೆಸಲಾಗುತ್ತಿದೆ' ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ತಕ್ಷಣ ಸ್ಥಳ ಪರಿಶೀಲನೆ ನಡೆಸಿ, ಮರುಸರ್ವೆ ಮಾಡಬೇಕು. ರಸ್ತೆ ಅಗಲೀಕರಣದಿಂದ ಭೂಮಿ ಕಳೆದುಕೊಂಡ ದಲಿತ ಕುಟುಂಬಗಳನ್ನು ಗುರುತಿಸಿ, ನ್ಯಾಯಯುತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಸತ್ಯದೀಪ ಹಾವನೂರ, ರಾಜ್ಯ ಉಪಾಧ್ಯಕ್ಷ ದತ್ತು ಸೂರ್ಯವಂಶಿ, ಜಿಲ್ಲಾ ಅಧ್ಯಕ್ಷ ಯೋಹಾನ ಡಿಸೋಜಾ ಚಿಲ್ಲರ್ಗಿ, ಬಸವಕಲ್ಯಾಣ ತಾಲ್ಲೂಕು ಅಧ್ಯಕ್ಷ ಸಂತೋಷ ಮೇಕ್ಷಮ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಉಮೇಶ್ ಗುತ್ತೆದಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

## ರಾಷ್ಟ್ರಕೂಟರ ಕಾಲದ ಶಾಸನೋಕ್ತ ಗೋದಾನ ಕಲ್ಲುಗಳು ಪತ್ತೆ

• ಉದಯವಾಹಿನಿ ಸೊರಬ

ತಾಲ್ಲೂಕಿನ ಹಾಯ ಗ್ರಾಮದ ಕಲ್ಲೇಶ್ವರ ದೇವಾಲಯದ ಬಳಿ ಮೂರು ಶಾಸನೋಕ್ತ ಗೋದಾನದ ಕಲ್ಲುಗಳು ಪತ್ತೆಯಾಗಿವೆ. ರಾಜ್ಯ ಪುರಾತತ್ವ ಇಲಾಖೆಯ ನಿರ್ದೇಶಕ ಶೇಜೇಶ್ವರ, ಇತಿಹಾಸ ಸಂಶೋಧಕ ರಮೇಶ ಹಿರೇಜಂಬೂರು ಹಾಗೂ ಮಂಜಪ್ಪ ಚುರ್ಚಿಗುಂಡಿ ಅವರ ತಂಡ ಈಚೆಗೆ ಕ್ಷೇತ್ರಕಾರ್ಯ ಕೈಗೊಂಡಾಗ ಪತ್ತೆ ಮಾಡಿದ್ದಾರೆ.

ಗೋದಾನದ 1ನೇ ಕಲ್ಲಿನಲ್ಲಿ (ಗೋಸಾಸ- 1) ನಾಲ್ಕು ಸಾಲುಗಳ ಶಾಸನ ಪಾಠವಿದ್ದು, ಸೂರ್ಯಗ್ರಹಣ ದಿನದಂದು ಚವಠಿಯ ಬಿನಾರದ ಬಡಿಯಣ್ಣನು ದಕ್ಷಿಣೆ ಸಹಿತವಾಗಿ ಕುಪ್ಪಗಡ್ಡೆಯ ಜನರಿಗೆ ಹಾಯ ಗ್ರಾಮದಲ್ಲಿ ಗೋದಾನ ನೀಡಿದ ಮಾಹಿತಿ ಇದೆ. ಆತನೊಂದಿಗೆ ಆತನ ಹೆಂಡತಿ ನಾಲಬ್ಬೆಯೂ ದಾನದಲ್ಲಿ ಪಾಲ್ಗೊಂಡಿದ್ದಾಳೆ. ಇಲ್ಲಿ ಉಲ್ಲೇಖವಾಗಿರುವ ಪ್ರದೇಶವು ಈಗಿನ ತಾಲ್ಲೂಕಿನ ಚವಟಿ ಗ್ರಾಮವಾಗಿರುವ ಸಾಧ್ಯತೆ ಇದೆ.

ಜಕ್ಕಯ್ಯ ಎಂಬುವರು ಇದನ್ನು ಉಲ್ಲೇಖಿಸಿರುವ ಮಾಹಿತಿ ಇದೆ. ಜಕ್ಕಯ್ಯ ಎಂಬ ರೂವಾರಿಯು ಉದ್ದರೆಯ ಚಾವುಂಡೋಜನ ಮಗನಾಗಿದ್ದಾನೆ. ಶಾಸನದಲ್ಲಿ ಉಲ್ಲೇಖವಿರುವ ಕುಪ್ಪಗಡ್ಡೆ ಗ್ರಾಮವು ಒಂದು ಪ್ರಾಚೀನ ಧಾರ್ಮಿಕ ನೆಲೆಯಾಗಿದ್ದು, ಶಾಸನಗಳು ಅನಾದಿ ಅಗ್ರಹಾರ ಎಂದಿವೆ.

ಎರಡನೇ ಗೋದಾನ ಕಲ್ಲಿನಲ್ಲಿ ಎಂಟು ಸಾಲಿನ ಶಾಸನ ಪಾಠವಿದ್ದು, ಕೊನೆಯ ಎರಡು ಸಾಲು ಅಳಿಸಿಹೋಗಿವೆ. ಹಾಯ ಗ್ರಾಮದ ಆಡಳಿತ ನೋಡಿಕೊಳ್ಳುತ್ತಿದ್ದ ಚಂದ್ರಾದಿತ್ಯ ಮತ್ತು ಆತನ ತಾಯಿ ಬಲುಯಬ್ಬೆಯರು ಕುಪ್ಪಗಡ್ಡೆಯ ಮಹಾಜನಗಳಿಗೆ ದಕ್ಷಿಣೆ ಸಹಿತ ಗೋದಾನ ನೀಡಿದ್ದಾರೆ. 3ನೇ ಗೋದಾನ ಕಲ್ಲಿನಲ್ಲಿ ಇರುವ ಅಂಶಗಳ ಬಗ್ಗೆ ಸ್ಪಷ್ಟ ಮಾಹಿತಿ ದೊರೆತಿಲ್ಲ.

ಈ ಮೂರು ಗೋದಾನದ ಕಲ್ಲುಗಳಲ್ಲಿ ಎರಡರಲ್ಲಿ ಶಾಸನ ಪಾಠ ಕೆತ್ತಲಾಗಿದೆ. ಬೃಹತ್ ಸಂಖ್ಯೆಯಲ್ಲಿ ಗೋವುಗಳನ್ನು ದಾನ ನೀಡಿದಾಗ ಅದರ ಸಂಕೇತವಾಗಿ ಈ ರೀತಿಯ ಕಲ್ಲುಗಳನ್ನು ನೆಡಲಾಗುತ್ತಿತ್ತು. ಈ ಗೋಸಾಸ ಕಲ್ಲುಗಳಲ್ಲಿ ಕಾಲದ ಉಲ್ಲೇಖವಿಲ್ಲ. ಲಿಪಿ ವಿನ್ಯಾಸದ ಆಧಾರದಲ್ಲಿ ಇವುಗಳು ಹತ್ತನೇ ಶತಮಾನದ ಅವಧಿಯವು ಎಂಬುದು ಸ್ಪಷ್ಟ. ಇಲ್ಲಿನ ಒಂದು ಗೋಸಾಸದಲ್ಲಿ ರಾಷ್ಟ್ರಕೂಟರ ಚಿಹ್ನೆ ನೇಗಿಲಿಗೆ ಹೂಡಿದ ಎತ್ತುಗಳು, ಮೂರು ಆಯಾಮದ ಮೀನಿನ ಚಿತ್ರ ಮತ್ತು ಕಳಸಗಳ ಸಂಕೇತಗಳಿವೆ. ಇದು ರಾಷ್ಟ್ರಕೂಟರು ಕೃಷಿಗೆ ನೀಡಿದ ಮಹತ್ವವನ್ನು ಸೂಚಿಸುತ್ತದೆ. ಗೋವುಗಳು ಕೃಷಿ ಮತ್ತು ಜೀವಂತ ಸಂಪತ್ತಿನ ಸಂಕೇತಗಳಾಗಿವೆ. ಮೀನು ನೀರಾವರಿಯ ಮತ್ತು ಕಳಸ ಸಮೃದ್ಧಿಯ ದ್ಯೋತಕವಾಗಿ ಚಿತ್ರಿಸಲ್ಪಟ್ಟಿವೆ ಎನ್ನಬಹುದು.


ಉದಯವಾಹಿನಿ ಚಿತ್ರ

**ರಾಷ್ಟ್ರಕೂಟರು ಕೃಷಿಗೆ ನೀಡಿದ ಮಹತ್ವ**

## ಕಾರ್ಮಿಕರ ಕಾರ್ಡ್ ನವೀಕರಣದಲ್ಲಿ ತಾರತಮ್ಯ: ಸಿಬ್ಬಂದಿ ವಜಾಕ್ಕೆ ಆಗ್ರಹಿಸಿ ಮನವಿ

• ಉದಯವಾಹಿನಿ ಶಿಗ್ಗಾವಿ

ಕಾರ್ಮಿಕರ ಕಾರ್ಡ್ ಮರುನವೀಕರಣದಲ್ಲಿನ ತಾರತಮ್ಯ ತೋರುವ ಅಧಿಕಾರಿ, ಸಿಬ್ಬಂದಿ ವಜಾಕ್ಕೆ ಆಗ್ರಹಿಸಿ ಕಾರ್ಮಿಕರ ಸಂಘದ ತಾಲ್ಲೂಕು ಘಟಕದ ಪದಾಧಿಕಾರಿಗಳು ಕಾರ್ಮಿಕ ಇಲಾಖೆ ತಾಲ್ಲೂಕು ಅಧಿಕಾರಿ ಉಮೇಶ ಹುಲ್ಲಣ್ಣವರೆಗೆ ಅವರಿಗೆ ಇತ್ತೀಚೆಗೆ ಮನವಿ ಸಲ್ಲಿಸಲಾಯಿತು. ಕಚೇರಿಯಲ್ಲಿ ಅರ್ಹ ಕಾರ್ಮಿಕರ ಕಾರ್ಡ್ ಮರುನವೀಕರಣ ಮಾಡಿಕೊಡುವಲ್ಲಿ ಸಾಕಷ್ಟು ತಾರತಮ್ಯ ಮಾಡುತ್ತಿದ್ದು, ಬಡ ಕಾರ್ಮಿಕರನ್ನು ಸತಾಯಿಸುತ್ತಿರುವ ಸಿಬ್ಬಂದಿ ವಜಾಗೊಳಿಸುವಂತೆ ಆಗ್ರಹಿಸಿ ಕರುನಾಡು ಕಟ್ಟಡ ನಿರ್ಮಾಣ ಕಾರ್ಮಿಕ ಜಾಗೃತಿ ಹಾಗೂ ಅಭಿವೃದ್ಧಿ ವೇದಿಕೆಯಿಂದ ಮನವಿ ಸಲ್ಲಿಸಿ ಆಗ್ರಹಿಸಿದರು. ಕಾರ್ಮಿಕರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಹನುಮಂತಪ್ಪ ಬಾರಂಗಿ ಮಾತನಾಡಿ, ತಾಲ್ಲೂಕಿನ ಕಾರ್ಮಿಕ ನಿರೀಕ್ಷಕರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಆಧಾರಿತ ನೌಕರ ರಂಗಪ್ಪ ನಿಂಬಣ್ಣವರ ಅವರು ಕಾರ್ಮಿಕರು ಕೆಲಸ ಮಾಡುವ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸದೇ ಅದರಿಂದ ಮನಬಂದಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ನೈಜ ಕಾರ್ಮಿಕರೆ ತೊಂದರೆ ಆಗುತ್ತಿದೆ ಎಂದರು.

ಕಾರ್ಡ್ ಗಳನ್ನು ನವೀಕರಣ ಮಾಡದೇ ಮತ್ತು ಹೊಸ ಕಾರ್ಮಿಕರ ಕಾರ್ಡ್ ಗಳಿಗೆ ಅನುಮೋದನೆ ನೀಡದೇ ಶ್ರಮಿಕ ವರ್ಗದ ಬಡವರನ್ನು ಸತಾಯಿಸುತ್ತಿದ್ದಾರೆ. ಹಲವಾರು ಕಾರ್ಮಿಕರ ನವೀಕರಣಕ್ಕೆ ಹಾಕಿದ ಕಾರ್ಡ್ ಗಳು ಜಿಲ್ಲಾ ಕಚೇರಿಯಲ್ಲಿ ಅನುಮೋದನೆ ಪಡೆದಿದ್ದರು. ನಮ್ಮ ಲಾಗಿನ್‌ಗೆ ಬಂದಿಲ್ಲ ಎಂದು ಸುಳ್ಳು ಹೇಳುತ್ತಿದ್ದಾರೆ. ಇವರಿಂದ ಬಡ ನೈಜ ಕಟ್ಟಡ ಕಾರ್ಮಿಕ ಫಲಾನುಭವಿಗಳಿಗೆ ಅನ್ಯಾಯ ಆಯಾಗುತ್ತಿದ್ದು, ಇಲಾಖೆ ಅಧಿಕಾರಿಗಳು ಪರಿಶೀಲಿಸಿ ಅವರನ್ನು ಕೆಲಸದಿಂದ ವಜಾಗೊಳಿಸಿ, ಬಡ ಕಾರ್ಮಿಕರಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿದರು. ಕಾರ್ಮಿಕ ನಿರೀಕ್ಷಕರ ಕಚೇರಿಯ ತಾಲ್ಲೂಕು ಅಧಿಕಾರಿ ಉಮೇಶ ಹುಲ್ಲಣ್ಣನವರ ಮನವಿ ಸ್ವೀಕರಿಸಿ ಮಾತನಾಡಿ, ಕಾರ್ಮಿಕರಿಗೆ ನ್ಯಾಯ ನೀಡುವ ಕೆಲಸ ಮಾಡುತ್ತೇನೆ. ಬೇಕು, ಬೇಡಿಕೆಗಳನ್ನು ತಕ್ಷಣ ಈಡೇರಿಸುವ ಪ್ರಯತ್ನ ಮಾಡುತ್ತೇವೆ. ಸರ್ಕಾರದ ಯೋಜನೆಗಳು ಅರ್ಹ ಫಲನುಭವಿಗಳಿಗೆ ತಲುಪಬೇಕು ಎಂದರು.


ಉದಯವಾಹಿನಿ ಚಿತ್ರ

## ಮೀನುಗಾರರ ಸುರಕ್ಷತೆಗೆ ಬೇಕಿದೆ ಆದ್ಯತೆ

• ಉದಯವಾಹಿನಿ ಉಡುಪಿ

ಕರಾವಳಿ ಜಿಲ್ಲೆಯಾದ ಉಡುಪಿಯಲ್ಲಿ ಮೀನುಗಾರಿಕೆಯು ಪ್ರಮುಖ ಆರ್ಥಿಕ ಚಟುವಟಿಕೆಯಾಗಿದ್ದು. ಸಾವಿರಾರು ಕುಟುಂಬಗಳ ಜೀವನೋಪಾಯ ಮಾರ್ಗವೂ ಹೌದು.

ಮಳೆಗಾಲದ ಆರಂಭದಲ್ಲಿ ಟ್ರಾಲಿಂಗ್ ನಿಷೇಧ ಜಾರಿಗೆ ಬರುವುದರಿಂದ ಯಾಂತ್ರೀಕೃತ ದೋಣಿಗಳು ದಡಸೇರುತ್ತವೆ. ಈ ಸಂದರ್ಭದಲ್ಲಿ ಸಾಂಪ್ರದಾಯಿಕ ನಾಡದೋಣಿಗಳಲ್ಲಿ ಮೀನುಗಾರಿಕೆ ನಡೆಯುತ್ತದೆ. ಪ್ರತಿ ಮಳೆಗಾಲದಲ್ಲೂ ದೋಣಿ ದುರಂತಗಳು ಸಂಭವಿಸಿ ಮೀನುಗಾರರು ಪ್ರಾಣ ಕಳೆದುಕೊಳ್ಳುವ ಘಟನೆಗಳು ಸಂಭವಿಸುತ್ತವೆ. ಅಳಿವೆ ಬಾಗಿಲಿನಲ್ಲಿ, ಸಮುದ್ರದಲ್ಲಿ ಮೀನುಗಾರಿಕಾ ದೋಣಿಗಳು ಮಗುಚಿದಾಗ ಅದರಲ್ಲಿರುವ ಮೀನುಗಾರರನ್ನು ತುರ್ತಾಗಿ ರಕ್ಷಣೆ ಮಾಡುವ ವ್ಯವಸ್ಥೆ ಇಲ್ಲ ಎನ್ನುವ ದೂರುಗಳು ಕೇಳಿ ಬರುತ್ತಲೇ ಇವೆ. ಜಿಲ್ಲೆಗೆ ಬೋಟ್ ಆ್ಯಂಬುಲೆನ್ಸ್ ಬೇಕೆಂಬ ಬೇಡಿಕೆಯನ್ನು ಮೀನುಗಾರರು ಈ ಹಿಂದೆಯೇ ಮುಂದಿಟ್ಟಿದ್ದರು. ಆದರೆ ಅದು ಈಡೇರಿಲ್ಲ. ಏರ್ ಆ್ಯಂಬುಲೆನ್ಸ್ ಸೇವೆ ಆರಂಭಿಸುವುದಾಗಿ ಈ ಹಿಂದೆ ಘೋಷಿಸಿದ್ದರೂ ಜಿಲ್ಲೆಯಲ್ಲಿ ಅದು ಕಾರ್ಯರೂಪಕ್ಕೆ ಬಂದಿಲ್ಲ ಎನ್ನುತ್ತಾರೆ ಮೀನುಗಾರರು.


ಉದಯವಾಹಿನಿ ಚಿತ್ರ

# ಟಿಪ್ಪರ್, ಗಣಿ ಸಂಬಂಧಿತ ವಸ್ತುಗಳ ಸಾಗಾಟ ಮಾಡುವ ವಾಹನಗಳ ವೇಗಕ್ಕೆ ಬ್ರೇಕ್

### ಜನಸೇವಾ ಟ್ರಸ್ಟ್ ಸೇರಿದಂತೆ ಹಲವು ಕಡೆಗಳಿಂದ ಹಕ್ಕೊತ್ತಾಯಗಳು ಕೇಳಿ ಬಂದ ಕಾರಣ ಜಿಲ್ಲಾಡಳಿತ ಈ ಆದೇಶ ಜಾರಿ

• ಉದಯವಾಹಿನಿ ಕುಂದಾಪುರ

ಜಿಲ್ಲೆಯಲ್ಲಿ ಕೆಲವು ದಿನಗಳಿಂದ ಸಂಭವಿಸುತ್ತಿರುವ ರಸ್ತೆ ಅಪಘಾತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಟಿಪ್ಪರ್ ಹಾಗೂ ಗಣಿ ಸಂಬಂಧಿತ ವಸ್ತುಗಳ ಸಾಗಾಟ ಮಾಡುವ ವಾಹನಗಳೇ ಇರುವುದರಿಂದ ಈ ವಾಹನಗಳಿಗೆ ವೇಗ ನಿಯಂತ್ರಕ (ಸ್ಪೀಡ್ ಗವರ್ನರ್) ಕಡ್ಡಾಯ ಅಳವಡಿಸುವಂತೆ ಜಿಲ್ಲಾಡಳಿತ ನಿರ್ಣಯ ಕೈಗೊಂಡಿದೆ ಎಂದು ಪೊಲೀಸ್ ಇಲಾಖೆ ಮೂಲಗಳು ತಿಳಿಸಿವೆ.

ಮೂಡುಗಿಳಿಯಾರು ಜನಸೇವಾ ಟ್ರಸ್ಟ್ ಸೇರಿದಂತೆ ಹಲವು ಕಡೆಗಳಿಂದ ಹಕ್ಕೊತ್ತಾಯಗಳು ಕೇಳಿ ಬಂದ ಕಾರಣ ಜಿಲ್ಲಾಡಳಿತ ಈ ಆದೇಶ ಜಾರಿಗೊಳಿಸಿದೆ.

ಸಂಜೆ ತಾಲ್ಲೂಕಿನ ಕೆಂಚನೂರು ಗ್ರಾಮದ ಶೆಟ್ರಕಟ್ಟೆ ಎಂಬಲ್ಲಿ ಸಂಭವಿಸಿದ ಟಿಪ್ಪರ್ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಡುವಿನ ಅಪಘಾತದಲ್ಲಿ ಶಾಲಾ- ಕಾಲೇಜು ವಿದ್ಯಾರ್ಥಿಗಳು ಸೇರಿ 18ಕ್ಕೂ ಹೆಚ್ಚು ಪ್ರಯಾಣಿಕರಿಗೆ ಗಾಯಗಳಾಗಿತ್ತು.

ಮೂವರು ಪ್ರಯಾಣಿಕರು ಇನ್ನೂ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ ಇಬ್ಬರು ವಿದ್ಯಾರ್ಥಿನಿಯರಿದ್ದಾರೆ. ಈ ಅಪಘಾತದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದಂತೆ ನೆಟ್ಟಿಗರು, ಸಾಮಾಜಿಕ ಕಳಕಳಿಯುಳ್ಳವರು ಟಿಪ್ಪರ್, ಗಣಿ ಸಂಬಂಧಿತ ವಾಹನಗಳ ವೇಗಕ್ಕೆ ಬ್ರೇಕ್ ಹಾಕುವಂತೆ ಒಕ್ಕೊರಲ ಮನವಿ ಮಾಡಿದ್ದರು. ಇದಕ್ಕೆ ಸ್ಪಂದಿಸಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಅವರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸುವ ಭರವಸೆ ವ್ಯಕ್ತಪಡಿಸಿದ್ದರು. ಬುಧವಾರ ಬೆಳಿಗ್ಗೆ ಜಿಲ್ಲಾಡಳಿತ ಈ ಕುರಿತು ತೀರ್ಮಾನ ಕೈಗೊಂಡಿದೆ.

ಮರಳು, ಕೆಂಪು ಕಲ್ಲು, ಶಿಲೆ ಕಲ್ಲು, ಜೇಡಿ ಮಣ್ಣು, ಮಣ್ಣು ಮುಂತಾದ ಗಣಿ ಸಂಬಂಧಿತ ಕಟ್ಟಡ ನಿರ್ಮಾಣ ವಸ್ತುಗಳ ಸಾಗಾಟ ಮಾಡುವ ಟಿಪ್ಪರ್ ಹಾಗೂ ಇದೇ ಮಾದರಿಯ ಸಾಗಾಟ ವಾಹನಗಳಲ್ಲಿ ಬೆರಳೆಣಿಕೆಯ ವಾಹನಗಳನ್ನು ಹೊರತುಪಡಿಸಿದರೆ, ಉಳಿದ ವಾಹನಗಳ ವೇಗಕ್ಕೆ ಮಿತಿಯೇ ಇಲ್ಲ ಎಂದು ಜನರು ದೂರಿದ್ದಾರೆ. ಟ್ರಿಪ್‌ಗಳ ಗುರಿ ಮುಟ್ಟಿಸಬೇಕು ಎನ್ನುವ ಕಾರಣ ಒಂದಾದರೆ, ಎಷ್ಟು ಬೇಗ ಮನೆ ಸೇರಿಕೊಳ್ಳುತ್ತೇವೆ ಎನ್ನುವ ಧಾವಂತ ಇನ್ನೊಂದೆಡೆ ಎತ್ತರದಲ್ಲಿ ಕುಳಿತುಕೊಳ್ಳುವ ಟಿಪ್ಪರ್ ಚಾಲಕರಿಗೆ ರಸ್ತೆಯಲ್ಲಿ ಹಿಂದೆ-ಮುಂದೆ ಸಾಗುವ ಸಣ್ಣ ವಾಹನಗಳ ಸವಾರರು ಕಣ್ಣಿಗೆ ಕಾಣುವುದೇ ಇಲ್ಲ ಎನ್ನುತ್ತಾರೆ ಜನರು. ಅಪಘಾತಗಳ ಕುರಿತು ಪೊಲೀಸರು ತನಿಖೆ ನಡೆಸುವಾಗ ಚಾಲನಾ ಪರವಾನಗಿ ಇಲ್ಲದೆ ಇರುವುದು, ವಾಹನದ ವಿಮಾ ಕಂತು ಪಾವತಿ ಮಾಡದೆ ಇರುವುದು. ವಿಮಾ ನವೀಕರಣ ಮಾಡದೆ ಇರುವುದು, ತೆರಿಗೆ ಪಾವತಿ ಮಾಡದೆ ಇರುವುದು. ಅಂತರ ರಾಜ್ಯ ವರ್ಗಾವಣೆಯಾಗದೆ ಇರುವುದು ಸೇರಿ ಹಲವು ನ್ಯೂನ್ಯತೆಗಳು ಪತ್ತೆಯಾಗುತ್ತಿವೆ.

ಕೆಲವು ಇಕ್ಕಟ್ಟಾದ ರಸ್ತೆಗಳ ಬದಿಯಲ್ಲಿ ಬೆಳೆದು ನಿಂತಿರುವ ಭಾರಿ ಗಾತ್ರದ ಮರಗಳಿಂದ ಹಾಗೂ ರಸ್ತೆಯ ದುರವಸ್ಥೆಗಳಿಂದಲೂ ಅಪಘಾತಗಳು ವರದಿಯಾಗುತ್ತಿದೆ.

ಮೊನ್ನೆ ಶೆಟ್ರಕಟ್ಟೆ ಬಳಿ ನಡೆದ ಅಪಘಾತದ ವೇಳೆ ಬಸ್‌ನ ಚಾಲಕ ಟಿಪ್ಪರ್ ಬರುತ್ತಿದ್ದ ವೇಗ ನೋಡಿ, ಸಾಕಷ್ಟು ಬದಿಗೆ ಬಸ್ ಕೊಂಡೊಯ್ಯುವ ಪ್ರಯತ್ನ ಮಾಡಿದರೂ, ರಸ್ತೆ ಬದಿಯಲ್ಲಿದ್ದ ಭಾರಿ ಗಾತ್ರದ ಮರಗಳಿಂದಾಗಿ ಸಾಧ್ಯವಾಗಿಲ್ಲ ಎನ್ನಲಾಗಿದೆ.

ಪರಿಸರ ಪ್ರೇಮಿಗಳಿಂದ ಅರಣ್ಯ ಇಲಾಖೆಯ ಮೇಲೆ ಒತ್ತಡ ಇರುವುದರಿಂದ ಇಲ್ಲಿನ ಮರಗಳನ್ನು ತೆರವುಗೊಳಿಸಲು ಸಾಧ್ಯವಾಗಿಲ್ಲ ಎಂದು ಸ್ಥಳೀಯರು ಹೇಳುತ್ತಿದ್ದಾರೆ.

**ನಿಯಮಗಳ ಕಡ್ಡಾಯ ಪಾಲನೆ**

ಗಣಿ ಸಂಬಂಧಿತ ಕಟ್ಟಡ ನಿರ್ಮಾಣ ವಸ್ತುಗಳ ಸಾಗಾಟ ಮಾಡುವ ಸಾರಿಗೆ ವಾಹನಗಳಿಂದ ಸಾರ್ವಜನಿಕರಿಗೆ ತೊಂದರೆಯಾಗಬಾರದು ಎನ್ನುವ ಕಾರಣಕ್ಕಾಗಿ ವಾಹನಗಳ ಸಾಗಾಟ ವಸ್ತುಗಳನ್ನು ಮುಚ್ಚಿ ಸಾಗಿಸಬೇಕು. ಅನಗತ್ಯ ಓವರ್‌ಟೇಕ್ ಮಾಡಬಾರದು, ವೇಗ ನಿಯಂತ್ರಣ ಪಾಲಿಸಬೇಕು, ಸಾರಿಗೆ ನಿಯಮಗಳ ಕಡ್ಡಾಯ ಪಾಲನೆ ಅಗತ್ಯ ಮುಂತಾದ ನಿಯಮಗಳಿದ್ದರೂ ಪಾಲನೆಯಾಗುತ್ತಿಲ್ಲ ಎಂದು ಆರೋಪಿಸಿದ್ದಾರೆ.


ಉದಯವಾಹಿನಿ ಚಿತ್ರ

**ವೇಗ ನಿಯಂತ್ರಣ ಪಾಲಿಸಬೇಕು**

## ಮಿನಿ ನ್ಯೂಸ್

### ಜಿ.ಪಂ.ಯೋಜನಾ ಸಮಿತಿ ಚುನಾವಣೆಗೆ ನಾಮ ಪತ್ರ ಸಲ್ಲಿಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಕೆಂಭಾವಿ

ಜಿಲ್ಲಾ ಪಂಚಾಯತಿ ಯೋಜನಾ ಸಮಿತಿ ಚುನಾವಣೆಗೆ ಪಟ್ಟಣದ ಪುರಸಭೆಯ ಸದಸ್ಯರಾದ ಆರೀಫ್ ಹುಸೇನ್ ಖಾಜಿ ಮತ್ತು ರವಿಶಂಕರ್ ಎಸ್ ಸೋನ್ನದ ಅವರಿಂದ ಗುರುವಾರ ನಾಮ ಪತ್ರ ಸಲ್ಲಿಕೆ ಮಾಡಲಾಯಿತು. ಜನವರಿ 20 ರಂದು ನಡೆಯಲಿರುವ ಪಟ್ಟಣದ ಹಿರಿಯ ಮುಖಂಡರು ಹಾಗೂ ಮಾಜಿ ಜಿಪಂ ಅಧ್ಯಕ್ಷ ಸಿದ್ದನಗೌಡ ಪೊಲೀಸ್ ಪಾಟೀಲ್ ಅವರ ನೇತೃತ್ವದಲ್ಲಿ ಜಿಲ್ಲಾ ಪಂಚಾಯತಿ ಕಾರ್ಯಾಲಯಕ್ಕೆ ತೆರಳಿ ಗುರುವಾರ ಚುನಾವಣಾ ಅಧಿಕಾರಿಗೆ ಕುಮ್ಮಯ್ಯ ಅವರಿಗೆ ನಾಮಪತ್ರ ಸಲ್ಲಿಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಪುರಸಭೆಯ ಮಾಜಿ ಅಧ್ಯಕ್ಷ,, ಸದಸ್ಯ ರೆಹಮಾನ್ ಪಟೇಲ್ ಯಲಗೋಡ, ಮಹಿಪಾಲರೆಡ್ಡಿ ಡಿಗ್ಗಾವಿ , ಪುರಸಭೆಯ ಸದಸ್ಯರಾದ ಸುಧಾಕರ್ ಡಿಗ್ಗಾವಿ, ಮಲ್ಲಿನಾಥಗೌಡ ಪಾಟೀಲ್, ಆಶ್ರಯ ಸಮಿತಿ ಸದಸ್ಯ ರೇವಣಸಿದ್ದಪ್ಪ ಯಾಳಗಿ ಹಾಗೂ ಮಹ್ಮದ ರಫೀಕ ಖಾಜಿ , ರಂಗಪ್ಪ ವಡ್ಡರ್, ಮಹ್ಮದ್ ಹನೀಫ್ ಸಾಸನೂರ, ಪ್ರಭು ದೊರೆ ಪರಶುರಾಮ ವಠಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಆಟೋರಿಕ್ಷಾ ಮೀಟರ್ ಅಳವಡಿಕೆ ಕಡ್ಡಾಯ: ಡಿಸಿ ಮೊಹಮ್ಮದ್ ರೋಷನ್

• ಉದಯವಾಹಿನಿ ಬೆಳಗಾವಿ

ಬೆಳಗಾವಿ ನಗರದ 16 ಕಿ.ಮೀ ವ್ಯಾಪ್ತಿಯಲ್ಲಿ ಸಂಚರಿಸುವ ಆಟೋರಿಕ್ಷಾಗಳಲ್ಲಿ ಎರಡು ತಿಂಗಳೊಳಗೆ ಮೀಟರ್ ಅಳವಡಿಸಿಕೊಳ್ಳುವುದು ಕಡ್ಡಾಯ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು. ಸೂಕ್ತವಾದುದನ್ನೇ ಆರಂಭಿಸಿ, ಸೂಕ್ತ ಮಾರ್ಗದಲ್ಲೇ ಇರಿ. ಇಲ್ಲಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಹಾಗೂ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಜತೆಗೆ ಸಭೆ ನಡೆದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಬೆಳಗಾವಿ ನಗರದಲ್ಲಿ ಇರುವ 11 ಸಾವಿರ ಆಟೋರಿಕ್ಷಾಗಳ ಪೈಕಿ 5 ಸಾವಿರ ವಾಹನಗಳಷ್ಟೇ ಕಾರ್ಯ ನಿರ್ವಹಿಸುತ್ತಿವೆ. ಹಲವು ಸುತ್ತಿನ ಸಭೆ ನಡೆಸಿ, ವಾಹನಗಳಲ್ಲಿ ಮೀಟರ್ ಅಳವಡಿಸಿಕೊಳ್ಳುವಂತೆ ಸೂಚಿಸಲಾಗಿದೆ. ಇದಕ್ಕೆ ಸ್ಪಂದಿಸಿ ಈಗಾಗಲೇ ಕೆಲವರು ಅಳವಡಿಕೆ ಮಾಡಿದ್ದಾರೆ ಎಂದರು. ನಗರದಲ್ಲಿ ಆಟೋರಿಕ್ಷಾಗಳಲ್ಲಿ ಮೀಟರ್ ಅಳವಡಿಕೆ ಕಡ್ಡಾಯಗೊಳಿಸಲು ಒಂದು ವರ್ಷದಿಂದ ತಯಾರಿ ಮಾಡಿಕೊಂಡಿದ್ದೇವೆ. ಇದಕ್ಕಾಗಿ ಕಾಲಾವಕಾಶ ಕೂಡ ಕೊಟ್ಟಿದ್ದೆವು. ಈಗ ಬಾಕಿ ಉಳಿದ ಪ್ರಕ್ರಿಯೆಯನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಈಗ ನಿರ್ದೇಶನ ಕೊಟ್ಟಿದ್ದೇವೆ ಎಂದು ತಿಳಿಸಿದರು. ಈ ಬಾರಿ ಮೀಟರ್ ಅಳವಡಿಕೆ ಕಡ್ಡಾಯ ನಿಯಮ ಕಟ್ಟುನಿಟ್ಟಾಗಿ ಜಾರಿಗೊಳಿಸುತ್ತೇವೆ ಎಂದರು. ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಇತರರಿದ್ದರು.

### ವಿದ್ಯಾರ್ಥಿಗೆ 27 ಲಕ್ಷ ವೇತನ

• ಉದಯವಾಹಿನಿ ದಾವಣಗೆರೆ

ನಗರದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜಿನ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉದ್ಯೋಗಕ್ಕೆ ಕ್ಯಾಂಪಸ್ ಆಯ್ಕೆಯಾಗಿದ್ದಾರೆ. ಎಲೆಕ್ಟ್ರಾನಿಕ್ ಅಂಡ್ ಕಮ್ಯುನಿಕೇಷನ್ ವಿಭಾಗದ ಸಾಯಿ ಪ್ರಥಮ್ ಅವರು ವಾರ್ಷಿಕ 27 ಲಕ್ಷದ ವೇತನ ಪಡೆದಿದ್ದಾರೆ.

ಇನ್ಫೋಸಿಸ್, ಟಿಸಿಎಸ್, ಆಕ್ಸೆಂಚರ್, ಕಾಗ್ನಿಜೆಂಟಲ್, ಪೆಂಟಗಾನ್ ಸ್ಪೇಸ್ ಸೇರಿ ಇತರೆ ಕಂಪನಿಗಳಿಗೆ ಆಯ್ಕೆಯಾಗಿದ್ದಾರೆ. ಬಿಐಇಟಿಯ ಉದ್ಯೋಗ ಮತ್ತು ತರಬೇತಿ ವಿಭಾಗದ ಮುಖ್ಯಸ್ಥ ಸಿ.ಆರ್. ನಿರ್ಮಲಾ ನೇತೃತ್ವದಲ್ಲಿ ಉದ್ಯೋಗಾರ್ಹತೆ ವೃದ್ಧಿಸಲು ನೀಡಲಾದ ತರಬೇತಿಯ ಫಲವಾಗಿ ಇಷ್ಟು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಪ್ರಾಂಶುಪಾಲ ಎಚ್.ಬಿ. ಅರವಿಂದ್ ಪ್ರಕಟಣೆ ತಿಳಿಸಿದ್ದಾರೆ.

### ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಮುಖ್ಯ ಶಿಕ್ಷಕ, ಸಹ ಶಿಕ್ಷಕರಿಗೆ ನೋಟಿಸ್

• ಉದಯವಾಹಿನಿ ಸಂಡೂರು

ತಾಲ್ಲೂಕಿನ ನಾರಾಯಣಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ, ಸಹ ಶಿಕ್ಷಕರಿಗೆ ಶಾಲಾ ಮಕ್ಕಳು ಕಲಿಕೆಯಲ್ಲಿ ಹಿಂದುಳಿದ ಪರಿಣಾಮ ಶಾಲಾ ಶಿಕ್ಷಣ ಇಲಾಖೆಯ ಬಿಇಒ ಐ.ಆರ್. ಅಕ್ಕಿ ಅವರು ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ.

ಶಾಸಕಿ ಅನ್ನಪೂರ್ಣ ತುಕರಾಮ್ ಅವರು ಕಳೆದ ಸೋಮವಾರ ಶಾಲೆಗೆ ಭೇಟಿ ನೀಡಿ ಮಕ್ಕಳ ಕಲಿಕೆಯ ಬಗ್ಗೆ ಪರಿಶೀಲಿಸಿದಾಗ ಮಕ್ಕಳು ಕನ್ನಡ, ಇಂಗ್ಲಿಷ್ ಭಾಷೆಯ ಓದು, ಬರಹದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಗಣಿತ ವಿಷಯದಲ್ಲಿ ಕಡಿಮೆ ಸಾಧನೆ ಮಾಡಿದ್ದಾರೆ. ಶಾಲೆಯಲ್ಲಿ 12 ಮಕ್ಕಳು ಗೈರಾಗಿದ್ದರೂ ಹಾಜರಿ ಹಾಕಿರುವುದು ಸರಿಯಲ್ಲ. ಶಾಲಾ ಅಭಿವೃದ್ಧಿ ಸಮಿತಿಯ ಅವಧಿ ಮುಗಿದಿದ್ದರೂ ಹೊಸ ಸಮಿತಿಯನ್ನು ಯಾಕೆ ನೇಮಕ ಮಾಡಿಲ್ಲ ಶಾಲೆಯಲ್ಲಿ ಇಬ್ಬರು ಕಾಯಂ, ಇಬ್ಬರು ಅತಿಥಿ ಶಿಕ್ಷಕರು ಇದ್ದರು ಸಹ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯಲು ಕಾರಣವೇನು? ಎಂದು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

### ಜೂಜಾಟ: 14 ಮಂದಿ ಬಂಧನ

• ಉದಯವಾಹಿನಿ ಕಲಬುರಗಿ

ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯ ನಾಗನಹಳ್ಳಿ ಗ್ರಾಮದ ಕೊರೆಮ್ಮಾ ದೇವಸ್ಥಾನ ಪಕ್ಕದ ಸಾರ್ವಜನಿಕ ಸ್ಥಳ ಮತ್ತು ಸಬ್-ಅರ್ಬನ್ ಪೊಲೀಸ್ ಠಾಣೆ ವ್ಯಾಪ್ತಿಯ ಅವರಾದ (ಬಿ) ಗ್ರಾಮದಲ್ಲಿ ಜೂಜಾಟವಾಡುತ್ತಿದ್ದ 14 ಜನರನ್ನು ವಿಶ್ವವಿದ್ಯಾಲಯ ಮತ್ತು ಸಿಸಿಬಿ ಘಟಕದ ಪೊಲೀಸರು ಬಂಧಿಸಿದ್ದಾರೆ.

ನಾಗನಹಳ್ಳಿ ಗ್ರಾಮದ ಕೊರೆಮ್ಮ ದೇವಸ್ಥಾನ ಪಕ್ಕದ ಸಾರ್ವಜನಿಕ ಸ್ಥಳದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ಪಿಐ ಚಂದ್ರಶೇಖರ್, ಸಿಬ್ಬಂದಿಗಳಾದ ಈರಣ್ಣಾ, ಜೈಭೀಮ್, ಶಿವಶರಣಪ್ಪ, ವಿಠ್ಠಲ ಮತ್ತು ಭೋಗೇಶ್ ಅವರು ದಾಳಿ ನಡೆಸಿ ಈರಣ್ಣಾ ಪಟ್ಟಣ, ರಾಜಕುಮಾರ ನಾಗನಹಳ್ಳಿ, ಸೂರ್ಯಕಾಂತ ನಡುವಿನಮನೆ, ಶಾಂತಕುಮಾರ ಬಿರಾದಾರ, ರೇವಣಸಿದ್ದಪ್ಪ ಸಾವಳಗಿ, ಶಿವರಾಜ ದಿವಟಗಿ ಮತ್ತು ಸಿದ್ರಾಮಪ್ಪ ಸಿಂಪಿ ಎಂಬುವವರನ್ನು ಬಂಧಿಸಿ 12,100 ರೂ.ನಗದು, 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ಸಂತೋಷದ ಚೈತನ್ಯದಾಯಕ – ಪ್ರಿಯವಾದ ಚಿತ್ತದ – ನಿಮ್ಮ ಖುಷಿಯ ಸ್ವಭಾವ ನಿಮ್ಮ ಸುತ್ತಲಿನವರಿಗೆ ಸಂತೋಷ ಮತ್ತು ಖುಷಿಯನ್ನು ತರುತ್ತದೆ. ಪ್ರೀತಿಯ ಇಂದ್ರಜಾಲ ನಿಮ್ಮನ್ನು ಕಟ್ಟಿಹಾಕಲಿದೆ.

**ವೃಷಭ** ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ಕೈಬಿಡಬೇಡಿ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ.

**ಮಿಥುನ** ಎಲ್ಲರಿಗೂ ಸಹಾಯ ಮಾಡುವ ನಿಮ್ಮನ್ನು ದಣಿಸುತ್ತದೆ. ಕೆಲವು ಪ್ರಮುಖ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ ಹಾಗೂ ಅವು ನಿಮಗೆ ಹೊಸ ಆರ್ಥಿಕ ಲಾಭ ತರುತ್ತವೆ.

**ಕರ್ಕಾಟಕ** ಮುಂಗೋಪ ನಿಮ್ಮನ್ನು ಇನ್ನೂ ಹೆಚ್ಚು ತೊಂದರೆಯಲ್ಲಿ ಸಿಲುಕಿಸಬಹುದು. ಮನೆಯಲ್ಲಿ ಯಾವುದೇ ಕಾರ್ಯಕ್ರಮ ನಡೆಯುವ ಕಾರಣದಿಂದಾಗಿ ಇಂದು ನೀವು ನಿಮ್ಮ ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

**ಸಿಂಹ** ಇಂದು ನೀವು ಪ್ರಮುಖ ನಿರ್ಧಾರ ಕೈಗೊಳ್ಳಬೇಕು. ಇದು ನಿಮ್ಮನ್ನು ಒತ್ತಡ ಹಾಗೂ ಉದ್ವೇಗಕ್ಕೆ ಒಳಪಡಿಸುತ್ತದೆ. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ.

**ಕನ್ಯಾ** ತಪ್ಪು ಸಮಯದಲ್ಲಿ ತಪ್ಪು ವಿಷಯಗಳನ್ನು ಹೇಳದಿರಲು ಪ್ರಯತ್ನಿಸಿ – ನೀವು ಪ್ರೀತಿಸುವವರನ್ನು ನೋಯಿಸದಂತೆ ಎಚ್ಚರ ವಹಿಸಿ. ಇಂದು ನೀವು ಒಂದು ಹೃದಯ ಒಡೆಯುವುದನ್ನು ತಪ್ಪಿಸುತ್ತೀರಿ.

**ತುಲಾ** ಕಣ್ಣಿನ ರೋಗಿಗಳಿಗೆ ಧೂಮಪಾನವು ಅವರ ಕಣ್ಣುಗಳಿಗೆ ಮತ್ತಷ್ಟು ಹಾನಿಯುಂಟುಮಾಡಬಹುದಾದ್ದರಿಂದ ಅವರು ಕಲುಷಿತ ಪರಿಸರದಲ್ಲಿ ಹೋಗಬಾರದು.

**ವೃಶ್ಚಿಕ** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಉದ್ಯೋಗವನ್ನು ಮಾಡುವ ಜನರು, ತಮ್ಮ ಆಫೀಸಿನಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ.

**ಧನಸ್ಸು** ಆರೋಗ್ಯದ ಆರೈಕೆ ಮಾಡಿಕೊಳ್ಳಬೇಕು. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಆದರೆ ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ.

**ಮಕರ** ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಸಂಶಯಾಸ್ಪದ ಹಣಕಾಸು ವ್ಯವಹಾರಗಳಲ್ಲಿ ಸಿಲುಕಿಕೊಳ್ಳದಂತೆ ಎಚ್ಚರಿಕೆ ವಹಿಸಿ.

**ಕುಂಭ** ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮ ವನ್ನು ತಪ್ಪದೆ ಮಾಡಿ. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ.

**ಮೀನ** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಇಂದು, ಒಂದು ಪಾರ್ಟಿಯಲ್ಲಿ ನೀವು ಆರ್ಥಿಕ ಭಾಗವನ್ನು ಬಲಪಡಿಸಲು ಪ್ರಮುಖ ಸಲಹೆಯನ್ನು ನೀಡುವ ವ್ಯಕ್ತಿಯನ್ನು ಭೇಟಿ ಮಾಡಬಹುದು.

### ತುರ್ತು ಸಂದರ್ಭದಲ್ಲಿ ಖಾಸಗಿ ತಜ್ಞ ವೈದ್ಯರ ಸೇವೆ ಪಡೆಯಲು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ

# ಜಿಲ್ಲಾಸ್ಪತ್ರೆಯಿಂದ ಬೇರೆಡೆಗೆ ರೋಗಿಗಳ ಶಿಫಾರಸ್ಸಿಗೆ ತಡೆ

• ಉದಯವಾಹಿನಿ ಚಿತ್ರದುರ್ಗ

ತುರ್ತು ಚಿಕಿತ್ಸೆಗಾಗಿ ರೋಗಿಗಳು ಜಿಲ್ಲಾಸ್ಪತ್ರೆಗೆ ಆಗಮಿಸಿದಾಗ ಅವರನ್ನು ಬೇರೆಡೆಗೆ ಶಿಫಾರಸ್ಸು ಮಾಡುವುದು ನಿಲ್ಲಬೇಕು. ತುರ್ತು ಸಂದರ್ಭದಲ್ಲಿ ಅಗತ್ಯ ತಜ್ಞ ವೈದ್ಯರು ಜಿಲ್ಲಾಸ್ಪತ್ರೆಯಲ್ಲಿ ತಕ್ಷಣಕ್ಕೆ ಲಭ್ಯವಿಲ್ಲದಿದ್ದರೆ, ಕೂಡಲೇ ಜಿಲ್ಲಾ ಕೇಂದ್ರದಲ್ಲಿರುವ ಖಾಸಗಿ ಆಸ್ಪತ್ರೆಗಳ ತಜ್ಞ ವೈದ್ಯರ ಎರವಲು ಸೇವೆ ಪಡೆದು, ಚಿಕಿತ್ಸೆ ನೀಡಿ ಜೀವ ಉಳಿಸುವ ಕೆಲಸವಾಗಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲಾಸ್ಪತ್ರೆಗೆ ಆಗಮಿಸುವ ರೋಗಿಗಳನ್ನು ಅನಗತ್ಯವಾಗಿ ದಾವಣಗೆರೆ ಜಿಲ್ಲಾಸ್ಪತ್ರೆಗೆ ಶಿಫಾರಸ್ಸು ಮಾಡುತ್ತಿರುವುದಾಗಿ ಅಲ್ಲಿನ ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಈ ವ್ಯವಸ್ಥೆ ಬದಲಾಗಬೇಕು, ಸದ್ಯ ಜಿಲ್ಲಾಸ್ಪತ್ರೆ ವೈದ್ಯಕೀಯ ಕಾಲೇಜಿನೊಂದಿಗೆ ಸಂಯೋಜನೆಗೊಂಡಿದೆ. ಎರಡೂ ಕಡೆ ಅಗತ್ಯ ಇರುವ ತಜ್ಞ ವೈದ್ಯರು ಹಾಗೂ ಬೋಧಕರನ್ನು ನೇಮಿಸಿಕೊಳ್ಳಲಾಗಿದೆ. ಆದಾಗ್ಯೂ ಖಾಸಗಿ ಆಸ್ಪತ್ರೆ, ಬೆಂಗಳೂರು ಹಾಗೂ ದಾವಣಗೆರೆಗೆ ರೋಗಿಗಳನ್ನು ಶಿಫಾರಸ್ಸು ಮಾಡುವುದು ನಿಂತಿಲ್ಲ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಬೇಸರ ವ್ಯಕ್ತಪಡಿಸಿದರು.

**ಹಾಕರ್ ಜೋನ್ ನಿರ್ಮಾಣ**

**ಜೋಗಿಮಟ್ಟಿ ಸರ್ಕಲ್ ಸಂಪರ್ಕಿಸುವ ಜಿಲ್ಲಾಸ್ಪತ್ರೆಯ ಮುಂದಿನ ರಸ್ತೆಯನ್ನು ಹಾಕರ್ ಜೋನ್ ಆಗಿ ಪರಿವರ್ತನೆ ಮಾಡಿ, ನಗರಸಭೆಯಿಂದ ಬೀದಿಬದಿ ವ್ಯಾಪಾರಿಗಳಿಗೆ ನೀಡಬೇಕು. ಇದರೊಂದಿಗೆ ಖಾಸಗಿ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಬೇಕು. ಇದಕ್ಕಾಗಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯಿಂದ ಅನುಮೋದನೆ ಪಡೆದು ತಕ್ಷಣ ಕಾರ್ಯಪ್ರವೃತ್ತವಾಗುವಂತೆ ನಗರಸಭೆ ಆಯುಕ್ತರಿಗೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚಿಸಿದರು.**

**ಹೆರಿಗೆ ವಿವರಗಳ ಸಂಪೂರ್ಣ ಮಾಹಿತಿ ನೀಡಲು ಸೂಚನೆ:** ಜಿಲ್ಲಾಸ್ಪತ್ರೆಯಲ್ಲಿ ಸಿಜೇರಿಯನ್ ಹೆರಿಗೆಗಳು ಹೆಚ್ಚಾಗುತ್ತಿರುವುದರ ಕುರಿತು ಕಳೆದ ಆರೋಗ್ಯ ರಕ್ಷಾ ಸಮಿತಿ, ಕೆಡಿಪಿ ಸಭೆಗಳಲ್ಲಿ ಕಳವಳ ವ್ಯಕ್ತವಾಗಿತ್ತು. ಈ ಹಿನ್ನಲೆಯಲ್ಲಿ ಸಹಜ ಹೆರಿಗೆಗಳನ್ನು ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿತ್ತು. ಆದರೂ ಸಹಜ ಹೆರಿಗೆಗಳ ಹೋಲಿಸಿದರೆ, ಸಿಜೇರಿಯನ್ ಹೆರಿಗೆಗಳ ಸಂಖ್ಯೆ ಹೆಚ್ಚಾಗಿದೆ. ಈ ಬಗ್ಗೆ ಜಿಲ್ಲಾಶಸ್ತ್ರಚಿಕಿತ್ಸಕರು ಸೂಕ್ತ ವಿವರಣೆಗಳನ್ನು ಮಾಹಿತಿ ಪುಸ್ತಕದಲ್ಲಿ ನೀಡಿಲ್ಲ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಆಕ್ಷೇಪ ವ್ಯಕ್ತಪಡಿಸಿದರು.


ಉದಯವಾಹಿನಿ ಚಿತ್ರ

ಕಳೆದ ವರ್ಷ ಹಾಗೂ ಪ್ರಸಕ್ತ ವರ್ಷದಲ್ಲಿ ಜಿಲ್ಲಾಸ್ಪತ್ರೆಯಲ್ಲಿ ಹೆರಿಗೆಯಾದವರ ಸಂಪೂರ್ಣ ಮಾಹಿತಿಯನ್ನು ಸಿದ್ದಪಡಿಸಬೇಕು. ಇದರೊಂದಿಗೆ ಪ್ರಥಮ ಬಾರಿಗೆ ಸಿಜೇರಿಯನ್ ಹೆರಿಗೆಯಾದವರು ಹಾಗೂ ಎರಡನೇ ಬಾರಿಗೆ ಸಿಜೇರಿಯನ್ ಹೆರಿಗೆಯಾದವರ ವಿವರನ್ನು ಪ್ರತ್ಯೇಕವಾಗಿ ನೀಡಬೇಕು. ಇವುಗಳನ್ನು ತುಲನಾತ್ಮವಾಗಿ ವಿಶ್ಲೇಷಿಸಿದಾಗ ಮಾತ್ರವೇ ಹೆರಿಗೆ ವಿಚಾರದಲ್ಲಿ ಜಿಲ್ಲಾಸ್ಪತ್ರೆ ಸುಧಾರಿಸಿದಯೇ ಅಥವಾ ಇಲ್ಲವೇ ಎಂಬುದು ತಿಳಿದು ಬರುತ್ತದೆ. ಮುಂದಿನ ಕೆ.ಡಿ.ಪಿ ಸಭೆಯ ಹೊತ್ತಿಗೆ ಸಂಪೂರ್ಣ ಮಾಹಿತಿಯನ್ನು ಸಿದ್ದಪಡಿಸಿ ನೀಡುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚಿಸಿದರು.

**ಮೂಲಭೂತ ಸೌಕರ್ಯ ಒದಗಿಸಲು ನಿರ್ದೇಶನ:** ಜಿಲ್ಲಾಸ್ಪತ್ರೆಗೆ ಬಣ್ಣ ಹಚ್ಚುವುದರಿಂದ ಮೂಲಭೂತ ಸೌಕರ್ಯಗಳು ಸುಧಾರಿಸುವುದಿಲ್ಲ, ಕುಡಿಯುವ ನೀರು, ಶೌಚಾಲಯ ಹಾಗೂ ವೈದ್ಯಕೀಯ ತ್ಯಾಜ್ಯ ನಿರ್ವಹಣೆಗೆ ಹೆಚ್ಚಿನ ಗಮನಹರಿಸುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ನಿರ್ದೇಶನ ನೀಡಿದರು.

ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡಿರುವ ಸಿಬ್ಬಂದಿ ಕೆಲಸದ ಸಮಯದಲ್ಲಿ ಅನಧಿಕೃತವಾಗಿ ಗೈರು ಹಾಜರಾಗುತ್ತಿರುವ ಕುರಿತು ದೂರು ಕೇಳಿಬಂದಿದೆ. ಸುಮಾರು 100 ಜನ ಗ್ರೂಪ್ ಡಿ ಸಿಬ್ಬಂದಿ ಜಿಲ್ಲಾಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರೂ, ಎಲ್ಲಿಯೂ ಸ್ವಚ್ಛತೆ ಕಂಡು ಬರುವುದಿಲ್ಲ. ಎಲ್ಲಾ ವೈದ್ಯಕೀಯ, ಅರೆ ವೈದ್ಯಕೀಯ, ಕ್ಲರಿಕಲ್, ನರ್ಸ್, ಸೆಕ್ಯುರಿಟಿ, ಗ್ರೂಪ್ ಡಿ ನೌಕರರಿಗೆ ಬಯೋಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯಗೊಳಿಸಬೇಕು. ದಿನಕ್ಕೆ ನಾಲ್ಕು ಬಾರಿ ಬಯೋಮೆಟ್ರಿಕ್ ಹಾಜರಾತಿ ಪಡೆಯಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹೇಳಿದರು.

**ತಿಂಗಳಿಗೊಮ್ಮೆ ಆರೋಗ್ಯ ರಕ್ಷಾ ಸಮಿತಿ ಸಭೆ:** ಆರೋಗ್ಯ ರಕ್ಷಾ ಸಮಿತಿ ಸದಸ್ಯರೊಂದಿಗೆ ಜಿಲ್ಲಾಶಸ್ತ್ರಚಿಕಿತ್ಸಕ ನೇತೃತ್ವದಲ್ಲಿ ಪ್ರತಿ ತಿಂಗಳು ಸಭೆ ನಡೆಸಬೇಕು. ಜಿಲ್ಲಾಸ್ಪತ್ರೆಯ ಕಾರ್ಯವೈಖರಿಯಲ್ಲಿ ಬದಲಾವಣೆ ತರಬೇಕು. ನಿಗದಿತ ಮಾರ್ಗಸೂಚಿಗಳನ್ನು ಆಧರಿಸಿ ಚಿಕಿತ್ಸೆ ನೀಡಬೇಕು. ವಾರ್ಡ್‌ಗಳಲ್ಲಿ ಅನಗತ್ಯವಾಗಿ ರೋಗಿಗಳ ಸಂಬಂಧಿಕರು ಆಗಮಿಸದಂತೆ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹೇಳಿದರು. ಜಿಲ್ಲಾಸ್ಪತ್ರೆಯಲ್ಲಿ ಏಪ್ರಿಲ್–2025 ರಿಂದ ಡಿಸೆಂಬರ್–2025 ವರೆಗೆ ಒಟ್ಟು 4,948 ಹೆರಿಗೆಗಳು ಸಂಭವಿಸಿವೆ. ಈ ಪೈಕಿ 1,449 ಸಹಜ, 3,499 ಸಿಜೇರಿಯನ್ ಹೆರಿಗೆಗಳಾಗಿವೆ. ಒಟ್ಟು 3,27,453 ಹೊರ ರೋಗಿಗಳು ಹಾಗೂ 40,477 ಒಳರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ. 952 ಮೇಜರ್, 242 ಮೈನರ್, 16 ಎಲ್.ಟಿ.ಓ, 29 ತುರ್ತು ಶಸ್ತ್ರಚಿಕಿತ್ಸೆ ಸೇರಿಸಿ 1,274 ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ. 796 ಟ್ರಾಮಾ, 642 ಕಣ್ಣಿನ ಶಸ್ತ್ರಚಿಕಿತ್ಸೆ ಕೈಗೊಳ್ಳಲಾಗಿದೆ. 5,710 ಸಿ.ಟಿ.ಸ್ಕ್ಯಾನ್, 9,750 ಎಂ.ಆರ್.ಐ ಸ್ಕ್ಯಾನ್ ಮಾಡಲಾಗಿದೆ. 888 ರೋಗಿಗಳು 8,693 ಸೈಕಲ್‌ಗಳಷ್ಟು ಡಯಾಲಿಸಿಸ್ ನಡೆಸಲಾಗಿದೆ ಎಂದು ಜಿಲ್ಲಾಶಸ್ತ್ರಚಿಕಿತ್ಸಕ ಡಾ.ಎಸ್.ಪಿ.ರವೀಂದ್ರ ಮಾಹಿತಿ ನೀಡಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಪ್ರಸಾದ್, ನಗರಸಭೆ ಆಯುಕ್ತೆ ಲಕ್ಷ್ಮಿ, ನಿವಾಸಿ ವೈದ್ಯಾಧಿಕಾರಿ ಆನಂದ್ ಪ್ರಕಾಶ್, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಡಾ.ಶೀತಲ್ ಪ್ರಶಾಂತ, ಕೋಟೇಶ್, ಟಿ.ಆರ್.ಕಿರಣ್ ಶಂಕರ್, ಗೋವಿಂದರಾಯ, ಆರ್. ಹಬೀಬುಲ್ಲಾ, ಸಕ್ಕರೆ ನಾಗರಾಜ, ಎಂ.ಆರ್.ಸಿ. ಮೂರ್ತಿ ಉಪಸ್ಥಿತರಿದ್ದರು.

**ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಬೇಸರ**

**ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲು ತಾಕೀತು**

**ಜಿಲ್ಲಾಸ್ಪತ್ರೆಗೆ ಅಗತ್ಯವಿರುವ ಔಷಧೋಪಕರಣಗಳ ಟೆಂಡರ್ ಪ್ರಕ್ರಿಯೆಗಳನ್ನು ಕೂಡಲೇ ಪೂರ್ಣಗೊಳಿಸಬೇಕು. ಜಿಲ್ಲಾ ಶಸ್ತ್ರಚಿಕಿತ್ಸಕರಯ ಆರ್ಥಿಕ ವೆಚ್ಚದ ಅಧಿಕಾರದಡಿ ಖರ್ಚು ಮಾಡಿದ ವೆಚ್ಚದ ಮಾಹಿತಿಯನ್ನು ಜಿಲ್ಲಾಸ್ಪತ್ರೆ ಅಧೀಕ್ಷಕರು ಆದೇಶಗಳ ಸಹಿತ ವರದಿ ನೀಡಬೇಕು. ರಾಜ್ಯ ಔಷದೋಗ್ರಾಣದಿಂದ ಸರಬರಾಜು ಆಗುವ ಔಷಧ ಹಾಗೂ ವೈದ್ಯಕೀಯ ಉಪಕರಣಗಳ ಹೊರತು ಪಡಿಸಿ, ಬೇರೆ ಔಷಧಗಳ ಖರೀದಿಗೆ ಮಾತ್ರ ಟೆಂಡರ್ ಕರೆಯಬೇಕು. ಔಷಧೋಗ್ರಾಣದಿಂದ ಸರಬರಾಜು ಮಾಡಿದ ಔಷಧ ಹಾಗೂ ಉಪಕರಣಗಳು ರೋಗಿಗಳ ಬಳಕೆ ಯೋಗ್ಯವಾಗಿಲ್ಲ ಎಂದು ಎನಿಸಿದರೇ, ಕೂಡಲೇ ವರದಿ ನೀಡಿ. ಈ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದು ಗಮನಸೆಳೆಯಲಾಗುವುದು. ಒಂದು ವೇಳೆ ಸರಬರಾಜು ಆದ ಔಷಧಗಳಿಗೆ ಮತ್ತೊಮ್ಮೆ ಟೆಂಡರ್ ಕರೆದು ಔಷಧಗಳನ್ನು ಪಡೆದಿರುವುದು ಗಮನಕ್ಕೆ ಬಂದರೆ, ಸಂಬಂದಪಟ್ಟವರ ವಿರುದ್ದ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಾಗಿ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಎಚ್ಚರಿಕೆ ನೀಡಿದರು. ಇದೇ ವೇಳೆ ಎ.ಬಿ.ಆರ್.ಕೆ ಅನುದಾನದಲ್ಲಿ ವೈದ್ಯರಿಗೆ ನೀಡಿಬೇಕಾದ ಭತ್ಯೆಯನ್ನು ಕೂಡಲೇ ಪಾವತಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಸ್ತ್ರಚಿಕಿತ್ಸಕರಿಗೆ ಸೂಚಿಸಿದರು.**

## ವಿವಸ್ತ್ರ ಪ್ರಕರಣ ನ್ಯಾಯಾಧೀಶರಿಂದ ತನಿಖೆಯಾಗಲಿ: ಬಿಜೆಪಿ ಮಹಿಳಾ ಮೋರ್ಚಾ ಆಗ್ರಹ

• ಉದಯವಾಹಿನಿ ಹುಬ್ಬಳ್ಳಿ

ಸುಜಾತಾ ಹಂಡಿ ಅವರ ಮೇಲೆ ನಡೆದ ಪೊಲೀಸ್ ದೌರ್ಜನ್ಯ, ಕಾಂಗ್ರೆಸ್ ಪ್ರಾಯೋಜಿತ ಗುಂಡಾಗಿರಿಯಾಗಿದೆ. ಘಟನೆ ಕುರಿತು ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಎಂದು ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ.ಮಂಜುಳಾ ಹೇಳಿದರು. ಇಲ್ಲಿನ ಚಾಲುಕ್ಯ ನಗರದಲ್ಲಿರುವ ಸುಜಾತಾ ಹಂಡಿ ಅವರ ಮನೆಗೆ ಭೇಟಿ ನೀಡಿ, ಘಟನೆ ಕುರಿತು ಅವರ ಕುಟುಂಬ ಸದಸ್ಯರಿಂದ ಮಾಹಿತಿ ಪಡೆದು ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಪುಡಾರಿಗಳು ಮಾಡುವ ಕೆಲಸವನ್ನು ಇನ್‌ಸ್ಪೆಕ್ಟರ್ ಕೆ.ಎಸ್. ಹಟ್ಟಿ ಅವರು ಪೊಲೀಸ್ ಸಮವಸ್ತ್ರ ಧರಿಸಿ ಮಾಡಿದ್ದಾರೆ. ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ಅವರು ಹಟ್ಟಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅವರನ್ನು ಸೇವೆಯಿಂದ ವಜಾಗೊಳಿಸಬೇಕು ಎಂದು ಹೇಳಿದರು. ರಾಜ್ಯ ಮಹಿಳಾ ಆಯೋಗವು ನಿಷ್ಪಕ್ಷಪಾತವಾಗಿ ನಡೆದುಕೊಳ್ಳುತ್ತಿಲ್ಲ. ಹೀಗಾಗಿ ರಾಷ್ಟ್ರೀಯ ಮಹಿಳಾ ಆಯೋಗವು ಇಲ್ಲಿಗೆ ಭೇಟಿ ತನಿಖೆ ನಡೆಸಬೇಕು. ಘಟನೆ ಕುರಿತು ಅವರಿಗೆ ಈಗಾಗಲೇ ಮಾಹಿತಿ ನೀಡಲಾಗಿದೆ ಎಂದರು. ಮಹಿಳೆಯೇ ವಿವಸ್ತ್ರಗೊಂಡಿದ್ದಾಳೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಗುರವಾಗಿ ಹೇಳಿಕೆ ನೀಡಿರುವುದು ಖಂಡನೀಯ. ಅವರಿಗೆ ರಾಜ್ಯದ ಮಹಿಳೆಯರ ಬಗ್ಗೆ ಗೌರವ ಇದ್ದರೆ, ಕೂಡಲೇ ಈ ಕುರಿತು ತನಿಖೆಗೆ ಆದೇಶಿಸಬೇಕು. ಮಹಾನಗರ ಪಾಲಿಕೆ ಸದಸ್ಯೆ ಸುವರ್ಣಾ ಕಲ್ಲಕುಂಟ್ಲ ಅವರ ವಿರುದ್ಧ ಈಗಾಗಲೇ ಪ್ರಕರಣ ದಾಖಲಾಗಿದ್ದು, ಅವರನ್ನು ಕೂಡಲೇ ಬಂಧಿಸಬೇಕು. ಸುಜಾತಾ ಅವರ ಮನೆಗೆ ಭದ್ರತೆ ಒದಗಿಸಬೇಕು ಎಂದು ಹೇಳಿದರು.


ಉದಯವಾಹಿನಿ ಚಿತ್ರ

40 ಪೊಲೀಸರು ಒಬ್ಬ ಮಹಿಳೆ ವಿವಸ್ತ್ರವಾಗುವುದನ್ನು ತಡೆಯಲು ಸಾಧ್ಯವಾಗಲಿಲ್ಲವೇ ಎಂದು ಪ್ರಶ್ನಿಸಿದ ಅವರು, ಇದು ಲಜ್ಜೆಗೆಟ್ಟ, ಮಾನಗೇಡಿ ಸರ್ಕಾರ. ಪುಂಡ ಪೋಕರಿಗಳ ಕೈಯಲ್ಲಿ ಕಾನೂನು ಸುವ್ಯವಸ್ಥೆ ಕೊಟ್ಟು ಅವರ ಮುಂದೆ ನಡುಬಗ್ಗಿಸಿದೆ' ಎಂದರು.

## ಸಂಗೀತ ಶಿಕ್ಷಕರ ನೇಮಕಾತಿಗೆ ಮನವಿ

• ಉದಯವಾಹಿನಿ ಕಲಬುರಗಿ

ವಿಜಯಪುರ ಜಿಲ್ಲೆಯ ಸಿಂದಗಿ ನಗರಕ್ಕೆ ಆಗಮಿಸಿದ ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪನವರಿಗೆ ನವ ಕರ್ನಾಟಕ ಸಂಗೀತ ಪದವೀಧರರು ಭೇಟಿ ಮಾಡಿ ಕಳೆದ 15 ವರ್ಷಗಳಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ನೇಮಕಾತಿ ಆಗದೆ ಇರುವ ಸಂಗೀತ ಶಿಕ್ಷಕರನ್ನ ನೇಮಕಾತಿ ಮಾಡಿಕೊಳ್ಳಬೇಕು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕುವೆಂಪು ಶತಮಾನ ಮಾದರಿ ಶಾಲೆಗಳಲ್ಲಿ, ಆದರ್ಶ ವಿಶ್ವವಿದ್ಯಾಲಯ ಶಾಲೆಗಳಲ್ಲಿ, ಕರ್ನಾಟಕ ಪಬ್ಲಿಕ್ ಮತ್ತು ಆಂಗ್ಲ ಶಾಲೆಗಳಲ್ಲಿ ಸಂಗೀತ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಬೇಕು ಎಂದು ಮನವಿ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ಸಿಂದಗಿ ಶಾಸಕ ಅಶೋಕ್ ಮನಗೂಳಿ ಅವರ ನೇತೃತ್ವದಲ್ಲಿ ಅಲಮೇಲ ತಾಲ್ಲೂಕಿನ ಕಾಂಗ್ರೆಸ್ ಮುಖಂಡರಾದ ಅಶೋಕಗೌಡ ಕೋಳಾರಿ ಅವರ ಸಮ್ಮುಖದಲ್ಲಿ ಸಂಗೀತ ಪದವೀಧರರಾದ ಪ್ರಕಾಶ್ ರಾಗರಂಜಿನಿ ಸ್ಟುಡಿಯೋ ಹಾಗೂ ಪೂಜಾ ಹಿರೇಮಠ ಇವರೆಲ್ಲರೂ ಸೇರಿ ಮನವಿ ಸಲ್ಲಿಸಿದ್ದರು ಎಂದು ನವ ಕರ್ನಾಟಕ ಸಂಗೀತ ಪದವೀಧರ ಸಂಘದ ರಾಜ್ಯಾಧ್ಯಕ್ಷರಾದ ಬಂಡಯ್ಯ ಸ್ವಾಮಿಜೀ ಸುಂಟನೂರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗ್ರಾಮ ಲೆಕ್ಕಾಧಿಕಾರಿ ಕಚೇರಿ ಹೊಸ ಕಟ್ಟಡಕ್ಕೆ ಮನವಿ

• ಉದಯವಾಹಿನಿ ಹುಕ್ಕೇರಿ

ತಾಲ್ಲೂಕಿನ ಪಾಶ್ಚಾಪುರ ಗ್ರಾಮದಲ್ಲಿ ಇರುವ ಗ್ರಾಮ ಲೆಕ್ಕಾಧಿಕಾರಿ ಕಚೇರಿ ಶಿಥಿಲಾವಸ್ಥೆಯಲ್ಲಿದ್ದು, ಹೊಸ ಕಟ್ಟಡ ನಿರ್ಮಿಸಬೇಕು ಎಂದು ಪಾಶ್ಚಾಪುರ ಗ್ರಾಮ ಪಂಚಾಯತಿ ಸದಸ್ಯ ಜಾಕೀರ ದಸ್ತಗೀರಸಾಬ ನದಾಫ ಅವರು ಈಚೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು. ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಪಾಶ್ಚಾಪುರ ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿ ಕಚೇರಿ ಕಟ್ಟಡವು ಸಂಪೂರ್ಣ ಬಿದ್ದು ಹೋಗಿದೆ. ಮೂರು ವರ್ಷಗಳಿಂದ ಬಾಡಿಗೆ ಕಟ್ಟಡದಲ್ಲಿ ಕಚೇರಿ ಕೆಲಸ ನಡೆಯುತ್ತಿದೆ. ಕಂದಾಯ ಇಲಾಖೆಯ ಕಟ್ಟಡವಾಗಿದ್ದು ಅಲ್ಲಿ ಹೊಸ ಕಟ್ಟಡ ನಿರ್ಮಿಸಬೇಕು ಎಂದು ಮನವಿ ಮಾಡಿದ್ದಾರೆ. ಬಹಳ ವರ್ಷಗಳಿಂದ ಪಾಶ್ಚಾಪುರ ಗ್ರಾಮದಲ್ಲಿ ನಿವೇಶನದ ಬೇಡಿಕೆ ಇದ್ದು, ಇಲ್ಲಿನ ಜನಸಾಮಾನ್ಯರಿಗೆ ಗ್ರಾಮಮಟ್ಟದಲ್ಲಿ ನಿವೇಶನ ನೀಡುವಂತೆ ಬೆಳಗಾವಿ ಜಿಲ್ಲಾಧಿಕಾರಿಗೆ ಆದೇಶ ನೀಡಬೇಕು. 11ಎ 11ಬಿ ಆಸ್ತಿಯ ಈಗಿನ ಹೊಸ ಬಿ ಖಾತಾ ಉತಾರವನ್ನು ಹುಕ್ಕೇರಿ ತಾಲ್ಲೂಕಿನಾದ್ಯಂತ ಆರಂಭ ಮಾಡಬೇಕೆಂದು ಮನವಿಯಲ್ಲಿ ಕೋರಿದ್ದಾರೆ.

## 17 ಕಾರ್ಮಿಕರು, ಮಕ್ಕಳ ರಕ್ಷಣೆ

• ಉದಯವಾಹಿನಿ ಬಾಗಲಕೋಟೆ

ಕಬ್ಬು ಕಟಾವು ಮಾಡಲು ಬಂದ ಉತ್ತರ ಪ್ರದೇಶ ರಾಜ್ಯದ 17 ಜನ ಕಾರ್ಮಿಕರು ಹಾಗೂ 19 ಮಕ್ಕಳನ್ನು ರಕ್ಷಣೆ ಮಾಡಿ, ಉತ್ತರ ಪ್ರದೇಶದ ಲಲಿತಪುರಕ್ಕೆ ಸುರಕ್ಷಿತವಾಗಿ ಕಳುಹಿಸಿ ಕೊಡಲಾಗಿದೆ.

ಬಾದಾಮಿ ತಾಲ್ಲೂಕಿನ ನೀರಲಗಿ ಗ್ರಾಮದಲ್ಲಿ ಉತ್ತರ ಪ್ರದೇಶ ರಾಜ್ಯದ ಕಾರ್ಮಿಕರು ಕಬ್ಬು ಕಟಾವು ಮಾಡಲು ಬಂದಿದ್ದು, ಸದರಿ ಕಾರ್ಮಿಕರಿಗೆ ವೇತನ ಪಾವತಿಸದೇ, ಸ್ವಂತ ಊರಿಗೆ ಹೋಗಲು ಬಿಡದ ಹಿನ್ನಲೆಯಲ್ಲಿ ಉತ್ತರ ಪ್ರದೇಶದ ಲಲಿತಪುರ ಜಿಲ್ಲೆಯ ಜಿಲ್ಲಾಧಿಕಾರಿ ನೀಡಿದ ದೂರಿನ್ವಯ ಜಿಲ್ಲಾ ಕಾರ್ಮಿಕ ಅಧಿಕಾರಿ ಸೇರಿದಂತೆ ವಿವಿಧ ಅಧಿಕಾರಿಗಳ ತಂಡ ಪರಿಶೀಲನೆ ಮಾಡಿತು.ಕಾರ್ಮಿಕರ ಹೇಳಿಕೆ ಪಡೆದುಕೊಂಡು ಕಾರ್ಮಿಕರಿಗೆ ವೇತನ ನೀಡದೇ ಸತಾಯಿಸುತ್ತಿರುವ ಮಹಾರಾಷ್ಟ್ರದ ಗ್ಯಾಂಗ್ ಮನ್ ದೀಪಕ್ ಮೇಲೆ ಬಾದಾಮಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

## ಬಳ್ಳಾರಿ ಶಾಸಕ ಭರತ್ ರೆಡ್ಡಿ ಬಂಧಿಸಬೇಕು : ಜೆಡಿಎಸ್ ಆರೋಪ

• ಉದಯವಾಹಿನಿ ಯಲಬುರ್ಗಾ

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ದುರಾಡಳಿತ ನಡೆಸುತ್ತಿದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ರಾಜ್ಯದಲ್ಲಿ ಭವಿಷ್ಯವಿಲ್ಲ ಎಂದು ಜೆಡಿಎಸ್ ಜಿಲ್ಲಾ ವಕ್ತಾರ ಮಲ್ಲನಗೌಡ ಕೋನನಗೌಡ ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲ್ಲೂಕಾ ಜೆಡಿಎಸ್ ಪಕ್ಷದ ವತಿಯಿಂದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿ, ಇವರಿಗೆ ರಾಜ್ಯದ ಅಭಿವೃದ್ಧಿಯ ಬಗ್ಗೆ ಕಾಳಜಿ ಇಲ್ಲ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅಧಿಕಾರದ ಕುರ್ಚಿಗಾಗಿ ಅಂಟಿಕೊಂಡಿದ್ದಾರೆ. ಇವರ ದುರಾಡಳಿತಕ್ಕೆ ಜನತೆ ತುಂಬಾ ಬೆಸತ್ತಿದ್ದಾರೆ. ಬಳ್ಳಾರಿಯಲ್ಲಿ ನೆಡದ ಬ್ಯಾನರ್ ಕಟ್ಟುವ ನೆಪದಲ್ಲಿ ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿಯವರು ಮಾಜಿ ಸಚಿವ ಗಾಲಿ ಜನಾರ್ಧನ ರೆಡ್ಡಿ ಯನ್ನು ಕೊಲೆ ಮಾಡುವ ಪೂರ್ವ ನಿಯೋಜಿತ ಸಂಚು ರೂಪಿಸಲಾಗಿತ್ತು. ಆದರೆ ಕೈ ಕಾರ್ಯಕರ್ತ ರಾಜಶೇಖರನ್ ಮೇಲೆ ಪೈರಿಂಗ್ ಮಾಡಿ ಕೊಲೆಗೆ ಕಾರಣರಾದ ಭರತ್ ರೆಡ್ಡಿ ಆಪ್ತರಾದ ಸತೀಶ ರೆಡ್ಡಿ ಇಬ್ಬರನ್ನು ಕೂಡಲೇ ಬಂಧಿಸಬೇಕು ಎಂದರು. ಬಳ್ಳಾರಿಯಲ್ಲಿ ನಡೆದ ಶಾಸಕ ಗಾಲಿ ಜನಾರ್ಧನ ರೆಡ್ಡಿ ಮನೆ ಮುಂದೆ ಬ್ಯಾನರ್ ಕಟ್ಟುವುದು ಎಷ್ಟು ಸರಿ? ಇದರ ನೆಪದಲ್ಲಿ ಇವರನ್ನು ಕೊಲೆ ಮಾಡುವ ಉದ್ದೇಶದಿಂದ ಎರಡೂರ ಬುಲೆಟ್‌ಗಳನ್ನು ಹಾರಿಸಿದ್ದಾರೆ. ಆದರೆ ಅದೃಷ್ಟವಶಾತ್ ಯಾವುದೇ ಪ್ರಾಣಪಾಯವಾಗಿಲ್ಲ. ಇಷ್ಟಾದರೂ ಸರ್ಕಾರ ತಮ್ಮ ಪಕ್ಷದ ಶಾಸಕನನ್ನು ರಕ್ಷಣೆ ಮಾಡುವ ಹುನ್ನಾರ ಇದಾಗಿದೆ ಎಂದರು. ಸರಕಾರಿ ಶಾಲೇಲಿ ಕೂಡ ಇವರ ದಬ್ಬಾಳಿಕೆ ಹೆಚ್ಚಾಗಿದೆ ಬಂಡತನಕ್ಕೆ ನಿಂತ ಕಾಂಗ್ರೆಸ್ ಸರ್ಕಾರ ಇದು. ಹಿಟ್ನಾಳ ಗ್ರಾಮದಲ್ಲಿ ನಡೆದ ರೈಲ್ವೆ ಕಾರ್ಯಕ್ರಮವೊಂದರಲ್ಲಿ ಕೇಂದ್ರ ಸಚಿವ ವಿ. ಸೋಮಣ್ಣನವರನ್ನು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿಯವರು ವಿನಾಕಾರಣ ಕ್ಯಾತೆಗೆದು ಅವಮಾನಿಸಿರುವುದನ್ನು ಸತೀವ್ರವಾಗಿ ಖಂಡಿಸಿದರು.


ಉದಯವಾಹಿನಿ ಚಿತ್ರ

ಜೆಡಿಎಸ್ ತಾಲ್ಲೂಕಾಧ್ಯಕ್ಷ ಬಸವರಾಜ ಗುಳಗುಳಿ ಮಾತನಾಡಿ, ಬಳ್ಳಾರಿ ಘಟನೆಯಲ್ಲಿ ಅಮಾಯಕ ಕಾಂಗ್ರೆಸ್ ಪಕ್ಷದ ಕಾರ್ಯಕರ್ತ ರಾಜಶೇಖರನ ಸಾವಿಗೆ ಶಾಸಕ ಭರತ್ ರೆಡ್ಡಿ ಗನ್ ಮ್ಯಾನ್‌ಗಳಿಂದ ಬುಲೆಟ್ ಹಾರಿಸಿ ಕೊಲೆಗೆ ಕಾರಣರಾಗಿದ್ದಾರೆ. ಇನ್ನೂ ಮೃತ ರಾಜಶೇಖರನ ಮೃತದೇಹವನ್ನು ಎರಡೆರಡು ಬಾರಿ ಪೋರ್ಟ್‌ಮಾಟಂ ಮಾಡಿಸಿರುವುದು ಸಾಕ್ಷಿ ನಾಶ ಮಾಡುವ ಸರ್ಕಾರದ ಷಡ್ಯಂತ್ರವಾಗಿದೆ. ಕೂಡಲೇ ಈ ಘಟನೆಯನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿದರು. ಈ ವೇಳೆಯಲ್ಲಿ ಜೆಡಿಎಸ್ ಪಕ್ಷದ ಮುಖಂಡರಾದ ಶರಣಪ್ಪ ರಾಂಪೂರ, ಹನುಮಪ್ಪ ವಾಲ್ಮೀಕಿ ಮತ್ತಿತರರು ಇದ್ದರು.

## ಗುತ್ತಿಗೆ ನೌಕರರ ಬಾಕಿ ವೇತನ ಪಾವತಿಗೆ ಸೂಚನೆ

• ಉದಯವಾಹಿನಿ ಮಂಗಳೂರು

ಬಂಟ್ವಾಳ ಪುರಸಭೆಯಲ್ಲಿ ವಿವಿಧ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಸಕಾಲದಲ್ಲಿ ವೇತನ ಪಾವತಿಯಾಗದಿರುವ ಗಂಭೀರ ಸಮಸ್ಯೆ ಹಾಗೂ ಪುರಸಭೆ ವ್ಯಾಪ್ತಿಯ ಇತರ ಮೂಲಭೂತ ಸೌಕರ್ಯಗಳ ಕೊರತೆ ಕುರಿತು ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕ ರಾಜೇಶ್ ನಾಯ್ಕ್ ಅವರ ಜಂಟಿ ನೇತೃತ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ ಪ್ರಮುಖ ಅಧಿಕಾರಿಗಳ ಜತೆ ಸಭೆ ನಡೆಸಿದ್ದಾರೆ.

ಬಂಟ್ವಾಳ ಪುರಸಭೆಯ ಕನಿಷ್ಠ ವೇತನದಡಿ ಮತ್ತು ಹೊರಗುತ್ತಿಗೆಯಡಿ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ ಸಕಾಲದಲ್ಲಿ ವೇತನ ಪಾವತಿಯಾಗದ ಕಾರಣ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಇದರಿಂದ ಅವರ ಜೀವನ ನಿರ್ವಹಣೆ ಕಷ್ಟವಾಗಿರುವ ಬಗ್ಗೆ ನೌಕರರು ಸಂಸದರ ಹಾಗೂ ಶಾಸಕರ ಗಮನಕ್ಕೆ ತಂದಿದ್ದರು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿ, ನೌಕರರ ವೇತನ ಬಾಕಿಯನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಸೂಚನೆ ನೀಡಿದ್ದಾರೆ.

ಅಲ್ಲದೆ, ಬಂಟ್ವಾಳ ಪುರಸಭೆ ವ್ಯಾಪ್ತಿಯಲ್ಲಿ ಹಿಂದಿನ ಸರ್ಕಾರದ ಅವಧಿಯಲ್ಲಿ ಒಳಚರಂಡಿ ಯೋಜನೆ ಕಾಮಗಾರಿ ಅನುದಾನ ಮಂಜೂರಾಗಿ ವರ್ಷ ಕಳೆದರೂ ಕಾಮಗಾರಿ ನಡೆಯದೆ ನೇತ್ರಾವತಿ ನದಿ ಕಲುಷಿತಗೊಳ್ಳುತ್ತಿರುವ ಬಗ್ಗೆಯೂ ಮಹತ್ವದ ಚರ್ಚೆ ನಡೆಯಿತು.

ಜಿಲ್ಲೆಯ ಜೀವನದಿಯಾಗಿ ಗುರುತಿಸಿಕೊಂಡ ನೇತ್ರಾವತಿಯ ಸಂಸ್ಕರಿಸದ ಕೊಳಚೆ ನೀರು ಮತ್ತು ತ್ಯಾಜ್ಯ ನದಿಗೆ ಹರಿಯುತ್ತಲೇ ಇದೆ. ಇದು ನೀರಿನ ಮಾಲಿನ್ಯ ಮತ್ತು ಸಾಂಕ್ರಾಮಿಕ ರೋಗಗಳ ಹರಡುವಿಕೆಯ ಭೀತಿಯನ್ನು ಹೆಚ್ಚಿಸಿದೆ.

## ಗ್ರಾಮಪಂಚಾಯತ್ ವಿರುದ್ಧ ಪ್ರತಿಭಟನೆಗೆ ಮುಂದಾದ ವಿದ್ಯಾರ್ಥಿಗಳು

• ಉದಯವಾಹಿನಿ ಚಿಟಗುಪ್ಪ

ಗ್ರಾಮೀಣ ಭಾಗದ ಶಿಕ್ಷಣಕ್ಕಾಗಿ ಸರ್ಕಾರ ನೂರಾರು ಕೋಟಿ ಅನುದಾನ ನೀಡುತ್ತಿದ್ದರು ಕೂಡ ಸ್ಥಳೀಯ ಆಡಳಿತದ ಬೇಜವಾಬ್ದಾರಿಯಿಂದ ಶಾಲಾ ಮಕ್ಕಳಿಗೆ ಮೂಲಭೂತ ಸೌಕರ್ಯಗಳು ಸಿಗುತ್ತಿಲ್ಲ ಎಂದು ತಾಲ್ಲೂಕಿನ ಚಾಂಗಲೇರಾ ಗ್ರಾಮದ ವೀರಭದ್ರೇಶ್ವರ ಬಡಾವಣೆಯಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಎಸ್ ಡಿ ಎಮ್ ಸಿ ಅಧ್ಯಕ್ಷ ವೀರಶೆಟ್ಟಿ ದೇವಗಿರಿ ಆರೋಪಿಸಿದರು.

ಸುಮಾರು 90 ವಿದ್ಯಾರ್ಥಿಗಳು ಕಲಿಯುತ್ತಿರುವ ಶಾಲೆಯಲ್ಲಿ ಮಕ್ಕಳಿಗೆ ಕುಡಿಯುವ ನೀರು ಸಿಗುತ್ತಿಲ್ಲ, ವಿದ್ಯುತ್ ಇಲ್ಲ, ಸಮರ್ಪಕ ರಸ್ತೆಯಿಲ್ಲ ಎಂದು ಆರೋಪಿಸಿದರು. ಶಾಲೆ ಆವರಣದಲ್ಲಿ ಕೊಳವೆ ಬಾವಿ ಇದ್ದು ಅದರ ಮೋಟಾರ್ ಗ್ರಾಪಂ ನವರು ರಿಪೇರಿಗಾಗಿ ತೆಗೆದುಕೊಂಡು ಹೋಗಿ ಅನೇಕ ದಿನಗಳಾದರೂ ತಂದಿಲ್ಲ. ಸಾರ್ವಜನಿಕರಿಗಾಗಿ ಶುದ್ಧ ಕುಡಿಯುವ ನೀರಿನ ಘಟಕವು ಇಲ್ಲಿದೆ ಆದರೆ ಕೊಳವೆಬಾವಿ ರಿಪೇರಿ ಆಗದ ಪರಿಣಾಮ ಮಕ್ಕಳು ಶಿಕ್ಷಕರು ಸೇರಿದಂತೆ ಸಾರ್ವಜನಿಕರಿಗೆ ಕುಡಿಯುವ ನೀರು ಸಿಗುತ್ತಿಲ್ಲ. ಶಾಲಾ ಮಕ್ಕಳು ಕುಡಿಯುವ ನೀರಿಗಾಗಿ ಸುಮಾರು 500 ಮೀಟರ್ ದೂರ ನಡೆದುಕೊಂಡು ಹೋಗಿ ರಾಜ್ಯ ಹೆದ್ದಾರಿ ದಾಟಿಕೊಂಡು ಗ್ರಾಮಕ್ಕೆ ಹೋಗಿ ನೀರು ಕುಡಿದು ಬರುತ್ತಿದ್ದಾರೆ. ಬಿಸಿ ಊಟ ಸಿಬ್ಬಂದಿಗಳು ಕೊಡ ಹೊತ್ತು ನೀರನ್ನು ತರುತ್ತಿದ್ದಾರೆ. ಅನೇಕ ಬಾರಿ ಗ್ರಾಮ ಪಂಚಾಯತ್ ಹಾಗು ಸಂಬಂಧಿಸಿದ ಇಲಾಖೆಗಳಿಗೆ ಮನವಿ ಮಾಡಿದ್ದೇವೆ ಆದರೆ ಯಾವುದೇ ಪ್ರಯೋಜನವಾಗಿಲ್ಲ. ಇದರಿಂದ ಬೇಸತ್ತು ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗೆ ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯತಿಗೆ ಮುತ್ತಿಗೆ ಹಾಕಲು ತೀರ್ಮಾನಿಸಲಾಗಿದೆ.


ಉದಯವಾಹಿನಿ ಚಿತ್ರ

## ಕ್ರಸ್ಟ್‌ಗೇಟ್ ಅಳವಡಿಕೆ ವಿಳಂಬ: ಮುಂಗಾರಿನೊಳಗೆ ಮುಗಿಯುತ್ತಾ ಕಾಮಗಾರಿ?

### ಈ ಬಾರಿ ಎರಡನೇ ಬೆಳೆಗೆ ನೀರು ಹರಿಸಿಲ್ಲ, ಕ್ರಸ್ಟ್‌ಗೇಟ್ ಮಟ್ಟದವರೆಗೆ ನೀರಿನ ಮಟ್ಟ ಇಳಿಸಲು ನದಿಗೆ ಹರಿಸಿ ಖಾಲಿ ಮಾಡಲಾಗಿದೆ

• ಉದಯವಾಹಿನಿ ಹೊಸಪೇಟೆ

ತುಂಗಭದ್ರಾ ಜಲಾಶಯಕ್ಕೆ ಮುಂಗಾರಿನೊಳಗೆ ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಪೂರ್ಣಗೊಳಿಸುವ ಗುರಿಯೊಂದಿಗೆ ಕಾಮಗಾರಿ ಆರಂಭಿಸಿರುವ ತುಂಗಭದ್ರಾ ಮಂಡಳಿ ಎರಡು ವಾರ ಕಳೆದರೂ ಒಂದೂ ಕ್ರಸ್ಟ್ ಗೇಟ್ ಕೂಡಿಸದೇ ಕಾಲಹರಣ ಮಾಡುತ್ತಿರುವುದು ಅಚ್ಚುಕಟ್ಟು ಪ್ರದೇಶದ ರೈತರ ಆತಂಕಕ್ಕೆ ಕಾರಣವಾಗಿದೆ.

- **ಕಾಮಗಾರಿ ಆರಂಭವಾಗಿ 2 ವಾರವಾದರೂ ಒಂದೂ ಪೂರ್ಣಗೊಂಡಿಲ್ಲ**
- **8 ದಿನಕ್ಕೆ ಒಂದು ಕ್ರಸ್ಟ್‌ಗೇಟ್ ಅಳವಡಿಕೆ ಗುರಿಯಿದ್ದು, ಕಳೆದ 15 ದಿನಗಳಿಂದ ಒಂದೂ ಕ್ರಸ್ಟ್‌ಗೇಟ್ ಅಳವಡಿಕೆ ಪೂರ್ಣಗೊಂಡಿಲ್ಲ**
- **ತಜ್ಞರ ಅಭಿಪ್ರಾಯ ಆಧರಿಸಿ, ಸದ್ಯ 18, 27ನೇ ಕ್ರಸ್ಟ್‌ಗೇಟ್ ಅಳವಡಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ**


ಉದಯವಾಹಿನಿ ಚಿತ್ರ

**ತೀವ್ರ ಕೃಷಿ ಬಿಕ್ಕಟ್ಟು**

ಕ್ರಸ್ಟ್‌ಗೇಟ್ ಬದಲಿಸುವ ನೆಪವೊಡ್ಡಿ ಈ ಬಾರಿ ಎರಡನೇ ಬೆಳೆಗೆ ನೀರು ಹರಿಸಿಲ್ಲ, ಕ್ರಸ್ಟ್‌ಗೇಟ್ ಮಟ್ಟದವರೆಗೆ ನೀರಿನ ಮಟ್ಟ ಇಳಿಸಲು ನದಿಗೆ ಹರಿಸಿ ಖಾಲಿ ಮಾಡಲಾಗಿದೆ. ಡಿ.24ರಿಂದ ಕ್ರಸ್ಟ್‌ಗೇಟ್ ಅಳವಡಿಕೆ ಪ್ರಕ್ರಿಯೆ ಆರಂಭಿಸಲಾಗಿದೆ. ಮೊದಲೆರಡು ದಿನ ಬೇಸ್ ಮತ್ತು ಗರ್ಡರ್‌ಗಳನ್ನು ಅಳವಡಿಕೆ ಮಾಡಲಾಗಿತ್ತು. 8 ದಿನಕ್ಕೆ ಒಂದು ಕ್ರಸ್ಟ್‌ಗೇಟ್ ಅಳವಡಿಕೆ ಗುರಿಯಿದ್ದು, ಕಳೆದ 15 ದಿನಗಳಿಂದ ಒಂದೂ ಕ್ರಸ್ಟ್ ಗೇಟ್ ಅಳವಡಿಕೆ ಪೂರ್ಣಗೊಂಡಿಲ್ಲ. ಮುಂಗಾರು ಆರಂಭದೊಳಗೆ ಕಾಮಗಾರಿ ಮುಗಿಯದಿದ್ದರೆ ಈ ಭಾಗದಲ್ಲಿ ತೀವ್ರ ಕೃಷಿ ಬಿಕ್ಕಟ್ಟು ಮತ್ತು ಆರ್ಥಿಕ ಸಂಕಷ್ಟ ಎದುರಾಗುವ ಸಾಧ್ಯತೆಯಿದೆ. 2025, ಆ.10ರಂದು ಕೊಚ್ಚಿಹೋಗಿದ್ದ 19ನೇ ಕ್ರಸ್ಟ್ ಗೇಟ್ ಸೇರಿ ಎಲ್ಲಾ 33 ಕ್ರಸ್ಟ್‌ಗೇಟ್ ಗಳನ್ನು ಬದಲಿಸಿ ನೂತನವಾಗಿ ಅಳವಡಿಸುವ ಗುತ್ತಿಗೆ ಪಡೆದಿರುವ ಗುಜರಾತ್ ಮೂಲದ ಕಂಪನಿಯು ಗದಗ ಮತ್ತು ಜಲಾಶಯ ಆವರಣದಲ್ಲಿ ಎರಡು ಕಡೆ ಕ್ರಸ್ಟ್ ಗೇಟ್‌ಗಳನ್ನು ನಿರ್ಮಿಸುತ್ತಿದೆ. ಈವರೆಗೆ ನಿರೀಕ್ಷೆಯಂತೆ ಕ್ರಸ್ಟ್‌ಗೇಟ್‌ಗಳು ಸಿದ್ಧವಾಗಿಲ್ಲ, ಫೆಬ್ರವರಿ ಅಂತ್ಯದೊಳಗೆ ನಿರ್ಮಾಣ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಆದರೆ, ಅಳವಡಿಕೆ ಪ್ರಕ್ರಿಯೆ ಆಮೆಗತಿಯಲ್ಲಿಸಾಗಿದೆ. ಟಿಬಿ ಡ್ಯಾಂ ಗೇಟ್ ಅಳವಡಿಕೆ ನಿಗದಿತ ಗುರಿಯಂತೆ ಮೇ ಅಂತ್ಯದೊಳಗೆ ಪೂರ್ಣಗೊಳಿಸುವ ಪ್ರಯತ್ನದೊಂದಿಗೆ ಕೆಲಸ ಆರಂಭಿಸಲಾಗಿದೆ. ಮೊದಲ ಗೇಟ್ ಅಳವಡಿಕೆ ಪ್ರಕ್ರಿಯೆ ಸಣ್ಣ-ಪುಟ್ಟ ತಾಂತ್ರಿಕ ಸಮಸ್ಯೆಗಳಿಂದ ತಡವಾಗಿದೆ ಎಂದಿದ್ದಾರೆ ನಾರಾಯಣನಾಯ್ಕ ಅಧೀಕ್ಷಕ ಇಂಜಿನಿಯರ್, ಟಿಬಿ ಮಂಡಳಿ.

ಟಿಬಿ ಡ್ಯಾಂ ನೆಚ್ಚಿಕೊಂಡಿರುವ ಅಚ್ಚುಕಟ್ಟು ಪ್ರದೇಶದ ರೈತರು ಎರಡನೇ ಬೆಳೆ ಇಲ್ಲದೆ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಮೇ ಒಳಗೆ ಎಲ್ಲಾ ಕ್ರಸ್ಟ್‌ಗೇಟ್‌ಗಳನ್ನು ಕೂರಿಸಿ ಮುಂಗಾರು ಬೆಳೆಗೆ ನೀರು ಹರಿಸಬೇಕು ಎಂದಿದ್ದಾರೆ ಮಾಧವರೆಡ್ಡಿ ರಾಜ್ಯಾಧ್ಯಕ್ಷರು, ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ.

**ಮಧ್ಯದ ಕ್ರಸ್ಟ್ ಗೇಟ್‌ಗಳಿಗೆ ಆದ್ಯತೆ**

**ಜಲಾಶಯಕ್ಕೆ ಹೆಚ್ಚಿನ ಪ್ರಮಾಣದ ನೀರು ಬಂದಾಗ ಮಧ್ಯದ ಗೇಟ್‌ಗಳ ಮೇಲೆ ಹೆಚ್ಚಿನ ಒತ್ತಡ ಬೀಳುತ್ತದೆ. ಇದೇ ಕಾರಣಕ್ಕೆ ಜಲಾಶಯ ತುಂಬುತ್ತಿದ್ದಂತೆ ಮಧ್ಯದ ಗೇಟ್‌ಗಳಿಂದಲೇ ನೀರು ಹೊರಹರಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಉಳಿದೆಲ್ಲ ಗೇಟ್‌ಗಳಿಗಿಂತ ಹೆಚ್ಚು ಬಳಕೆಯಾಗುವ ಈ ಗೇಟ್‌ಗಳು ಸವೆಯುವುದು ಹೆಚ್ಚು. 19ನೇ ಗೇಟ್ ಕಳಚುವುದಕ್ಕೂ ಇದೇ ಕಾರಣ ಎಂಬುದು ತಜ್ಞರ ಅಭಿಪ್ರಾಯವಾಗಿದೆ. ತಜ್ಞರ ಅಭಿಪ್ರಾಯ ಆಧರಿಸಿ, ಸದ್ಯ 18, 27ನೇ ಕ್ರಸ್ಟ್‌ಗೇಟ್ ಅಳವಡಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. 20ನೇ ಕ್ರಸ್ಟ್‌ಗೇಟ್ ಸಿದ್ಧಪಡಿಸಲಾಗುತ್ತಿದೆ. ಒಂದೇ ಅವಧಿಯಲ್ಲಿ ಇತರ ಕ್ರಸ್ಟ್‌ಗೇಟ್ ಅಳವಡಿಸಲು ಯೋಜಿಸಲಾಗಿದೆ. 15ನೇ ಕ್ರಸ್ಟ್‌ಗೇಟ್ ನಿರ್ಮಾಣವಾಗಿದ್ದು, 8 ಗೇಟ್‌ಗಳ ನಿರ್ಮಾಣ ಮುಂದುವರಿದಿದೆ.**

ಉದಯ ವಾಹಿನಿ
ಪ್ರಾದೇಶಿಕ
ಶುಕ್ರವಾರ 09 ಜನವರಿ 2026


ಕಠಿಣ ಮಾರ್ಗವನ್ನು ಖಮೇನಿ ಸರ್ಕಾರ ಅನುಸರಿಸುತ್ತಿದ್ದು, ಇದರಿಂದಾಗಿ ಈಗಾಗಲೇ ಸುಮಾರು 35 ಜೀವ ಬಲಿಯಾಗಿವೆ

# ಇರಾನ್‌ನಲ್ಲಿ ಪ್ರತಿಭಟನೆ ಜೋರು, ಟ್ರಂಪ್ ಮಧ್ಯಪ್ರವೇಶದ ಎಚ್ಚರಿಕೆ

**ತೆಹ್ರಾನ್:** ಅಮೆರಿಕಾ ಸೇರಿದಂತೆ ಪಾಶ್ಚಿಮಾತ್ಯ ದೇಶಗಳಿಂದ ನಿರ್ಬಂಧ ಎದುರಿಸುತ್ತಿರುವ ಇರಾನ್ ಈಗ ಅಮೆರಿಕಾದ ಡಾಲರ್ ಎದುರು ತನ್ನ ಕರೆನ್ಸಿ ರಿಯಾಲ್ ಪಾತಾಳಕ್ಕೆ ಕುಸಿದಿದ್ದು, ದೇಶದಲ್ಲಿ ಹಣದುಬ್ಬರ ಸೇರಿದಂತೆ ಆರ್ಥಿಕತೆ ಕುಸಿತಗೊಂಡಿದ್ದು, ಇದರಿಂದ ದಿನದೂಡುವದಕ್ಕು ಕಷ್ಟಪಡುವಂತ ಸ್ಥಿತಿಗೆ ತಲುಪಿದ್ದು, ಇರಾನ್ ಜನತೆಯ ಆಕ್ರೋಶದ ಕಟ್ಟೆ ಹೊಡೆದು ಬೀದಿಗಿಳಿದು ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿದೆ.

ಇದನ್ನು ತಡೆಯಲು ಕಠಿಣ ಮಾರ್ಗವನ್ನು ಖಮೇನಿ ಸರ್ಕಾರ ಅನುಸರಿಸುತ್ತಿದ್ದು, ಇದರಿಂದಾಗಿ ಈಗಾಗಲೇ ಸುಮಾರು 35 ಜೀವ

- ಆರ್ಥಿಕತೆ ಕುಸಿತದಿಂದ ಇರಾನ್‌ನಲ್ಲಿ ಭುಗಿಲೆದ್ದ ಪ್ರತಿಭಟನೆಗಳು 35 ಬಲಿ, ಸಾವಿರಾರು ಜನರ ಬಂಧನ
- ಅಮಾಯಕ ಪ್ರತಿಭಟನಕಾರರನ್ನು ಕೊಂದರೆ ಯುಎಸ್ ಮಧ್ಯಪ್ರವೇಶಿಸಲಿದೆ ಎಂದ ಟ್ರಂಪ್ ಮೇಕ್ ಇರಾನ್ ಗ್ರೇಟ್ ಆಗೇನ್ ಸೂಚನೆ
- ಇರಾನ್ ನಾಯಕರ ಹೇಳಿಕೆಗಳಲ್ಲಿ ಭಿನ್ನತೆ ಕಾಣಿಸುತ್ತಿದ್ದು, ಮತ್ತೊಂದು ವೆನುಜುವೆಲಾ ಆಗಲಿದೆಯಾ ಇರಾನ್ ಎನ್ನುವ ಆತಂಕ ಎದುರಾಗಿದೆ

ಬಲಿಯಾಗಿವೆ. ಇನ್ನು, ಈವೆಲ್ಲದರ ಮಧ್ಯೆ ಇರಾನ್ ಪ್ರತಿಭಟನಕಾರರಿಗೆ ಟ್ರಂಪ್ ಬೆಂಬಲ ಸೂಚಿಸಿದ್ದು, ಪ್ರತಿಭಟನಾಕಾರರನ್ನು ಹಿಂಸಾತ್ಮಕವಾಗಿ ಕೊಲ್ಲುವುದನ್ನು ಮುಂದುವರೆಸಿದರೆ ಯುಎಸ್ ಮಧ್ಯಪ್ರವೇಶಿಸುತ್ತದೆ ಎಂದು ಬೆದರಿಕೆಯಾಗಿದ್ದು, ಇರಾನ್ ಪರಿಸ್ಥಿತಿ ಸಹ ವೆನುಜುವೆಲಾದ ರೀತಿ ಆಗಲಿದೆಯಾ ಎಂಬ ಪ್ರಶ್ನೆಗಳು ಮೂಡಿದೆ. ಈ ಬಗ್ಗೆ ವರದಿ ಇಲ್ಲಿದೆ ನೋಡಿ..

**ಇರಾನ್ ನಲ್ಲಿ ಭುಗಿಲೆದ್ದ ಪ್ರತಿಭಟನೆ:** ಇರಾನ್ ಆರ್ಥಿಕತೆ ಕುಸಿತಗೊಂಡಿದ್ದು, ಇರಾನಿಗರು ಬೀದಿಗಿಳಿದು ಖಮೇನಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಸರ್ವಾಧಿಕಾರಿಗೆ ಸಾವಾಗಲಿ ಹಾಗೂ ಖಮೇನಿ ನಾಶವಾಗಲಿ ಎಂದು ಘೋಷಣೆಗಳನ್ನು ಕೂಗುತ್ತಾ, ಇಡೀ ಇರಾನ್ ರಾಷ್ಟ್ರದಾದ್ಯಂತ ಸುಮಾರು 25 ಪ್ರಾಂತ್ಯಗಳಲ್ಲಿ 250ಕ್ಕೂ ಹೆಚ್ಚು ಸ್ಥಳಗಳಲ್ಲಿ ಸತತ 12 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಪ್ರತಿಭಟನೆಗಳಲ್ಲಿ ಈವರೆಗೂ ಸುಮಾರು 35 ಮಂದಿ ಬಲಿಯಾದರೆ ಬರೋಬ್ಬರಿ 1200ಕ್ಕೂ ಹೆಚ್ಚು ಪ್ರತಿಭಟನಕಾರರ ಬಂಧನವಾಗಿದೆ.

ಈ ಪ್ರತಿಭಟನೆಗಳು ಕೇವಲ ಇರಾನ್ ಗೆ ಮಾತ್ರ ಸೀಮಿತವಾಗಿಲ್ಲ. ಈ ಪ್ರತಿಭಟನೆಗಳು ರಾಜಕೀಯ ಸ್ವರೂಪ ಪಡೆದುಕೊಂಡು ಜಾಗತಿಕ ಮಟ್ಟದಲ್ಲಿ ಸದ್ದು ಮಾಡುತ್ತಿದ್ದು, ಅಮೆರಿಕ ಸಹ ಇದಕ್ಕೆ ಎಂಟ್ರಿ ಕೊಟ್ಟಿದ್ದು, ಪರಿಸ್ಥಿತಿ ಬಿಗಡಾಯಿಸಿದರೆ ಮಧ್ಯಪ್ರವೇಶಿಸುವ ಎಚ್ಚರಿಕೆ ನೀಡಿದೆ. ಪ್ರತಿಬಟನೆ ಆರಂಭವಾದಾಗಿನಿಂದಲೂ ಸಹ ಟ್ರಂಪ್ ಒಂದಲ್ಲ ಒಂದು ಹೇಳಿಕೆಗಳನ್ನು ನೀಡುತ್ತಿದ್ದಾರೆ.

### ಮಾಧ್ಯಮಗಳ ಮೇಲೆ ನಿರ್ಬಂಧ

ಇನ್ನು, ಇರಾನ್ ನಲ್ಲಿ ಮಾಧ್ಯಮಗಳ ಮೇಲೆ ನಿಷೇಧವನ್ನು ಹೇರಿದ್ದು, ಇರಾನಿ ಸರ್ಕಾರಿ ಮಾಧ್ಯಮಗಳು ಸೀಮಿತ ಪ್ರಸಾರವನ್ನು ನೀಡುತ್ತಿವೆ. ಅಲ್ಲದೆ, ದೇಶಿಯ ಹಾಗೂ ವಿದೇಶಿ ಪತ್ರಕರ್ತರು ನಿರ್ಬಂಧಗಳು ಮತ್ತು ಬಂಧನದ ಅಪಾಯವನ್ನು ಎದುರಿಸುತ್ತಿದ್ದಾರೆ. ಆನ್‌ಲೈನ್ ವೀಡಿಯೊಗಳು ಕೇವಲ ಘಟನೆಗಳ ತುಣುಕುಗಳನ್ನು ಮಾತ್ರ ನೀಡುತ್ತಿವೆ.



### ಮತ್ತೊಂದು ವೆನುಜುವೆಲಾ ಆಗುತ್ತಾ ಇರಾನ್?

**ಪರಿಸ್ಥಿತಿ ಬಿಗಡಾಯಿಸಿದರೆ ಮಧ್ಯಪ್ರವೇಶಿಸುವುದಾಗಿ ಟ್ರಂಪ್ ಎಚ್ಚರಿಕೆ:** ಈ ಪ್ರತಿಭಟನೆಗಳ ಕುರಿತು ತಮ್ಮ ಟ್ರೂತ್ ಸೋಶಿಯಲ್‌ನಲ್ಲಿ ಇರಾನ್ ಶಾಂತಿಯುತ ಪ್ರತಿಭಟನಾಕಾರರನ್ನು ಹಿಂಸಾತ್ಮಕವಾಗಿ ಕೊಂದರೆ, ಅಮೆರಿಕಾ ಅವರ ರಕ್ಷಣೆಗೆ ಬರುತ್ತದೆ. ಇದರಿಂದ ಇರಾನ್ ಗೆ ತೀವ್ರ ಹೊಡೆತ ಬೀಳಲಿದೆ ಎಂದು ಗುಡುಗಿದ್ದಾರೆ. ಅಷ್ಟೇ ಅಲ್ಲದೆ, ನಾವು ನಿಮ್ಮೊಂದಿಗೆ ಹೋರಾಡಲು ಸಿದ್ಧರಾಗಿದ್ದೇವೆ. ಈಗಾಗಲೇ ಟಾರ್ಗೆಟ್ ಲಾಕ್ ಆಗಿದೆ, ಲೋಡ್ ಮಾಡಿದ್ದೇವೆ ಮತ್ತು ಹೋಗಲು ಸಿದ್ಧರಾಗಿದ್ದೇವೆ ಎಂದು ತಿಳಿಸಿದ್ದು, ಪ್ರತಿಭಟನೆಯಿಂದ ಪರಿಸ್ಥಿತಿ ಕೆಟ್ಟದಾಗಿ ಪರಿಣಮಿಸಿದರೆ ಯುಎಸ್ ಮಧ್ಯಪ್ರವೇಶಿಸುವುದು ಖಚಿತ ಎಂದು ಘೋಷಿಸಿದ್ದಾರೆ.

ಇದಕ್ಕೆ ಪುಷ್ಠಿ ನೀಡುವಂತೆ ಟ್ರಂಪ್ ವೆನುಜುವೆಲಾದ ಮೇಲೆ ಮಿಲಿಟರಿ ದಾಳಿ ನಡೆಸಿದ ನಂತರ ಅಮೆರಿಕಾದ ಸೌತ್ ಕ್ಯಾರೊಲಿನಾ ಸೆನೆಟರ್ ಲಿಂಡ್ಸೆ ಗ್ರಹಾಂ ಜೊತೆಗೆ ಮೇಕ್ ಇರಾನ್ ಗ್ರೇಟ್ ಅಗೇನ್ ಅಂದರೆ ಇರಾನ್ ಅನ್ನು ಮತ್ತೆ ಉನ್ನತಿಗೆ ತರೋಣ ಎಂಬ ಸಂದೇಶವಿರುವ ಟೋಪಿಯ ಮೇಲೆ ಟ್ರಂಪ್ ತಮ್ಮ ಸಹಿ ಹಾಕಿ ಫೋಟೋವನ್ನು ಬಿಡುಗಡೆ ಮಾಡಿದ್ದಾರೆ. ಈ ಫೋಟೋ ಬಿಡುಗಡೆಯಾದ ಸಮಯ ಬಹಳಷ್ಟು ಚರ್ಚೆಗೆ ಗ್ರಾಸವಾಗಿದ್ದು, ವೆನುಜುವೆಲಾದ ರೀತಿಯೇ ಇರಾನ್ ಮೇಲೂ ದಾಳಿ ನಡೆಸಲು ಯುಎಸ್ ಸಿದ್ಧತೆ ನಡೆಸುತ್ತಿದೆ ಎಂಬ ವಿಶ್ಲೇಷಣೆಗಳು ಹರಿದಾಡುವಂತೆ ಮಾಡಿದೆ.

ಟ್ರಂಪ್ ಅವರ ಹೇಳಿಕೆಗಳನ್ನು ಇರಾನ್ ನಾಯಕರು ಖಂಡಿಸಿದ್ದು, ಸುಪ್ರೀಂ ಲೀಡರ್ ಅಯಾತುಲ್ಲಾ ಅಲಿ ಖಮೇನಿ ಅವರ ಸಲಹೆಗಾರರ ಅಲಿ ಶಮ್ಖಾನಿ ಇರಾನ್ ರಾಷ್ಟ್ರೀಯ ಹಿತಾಸಕ್ತಿಗಳು ದಾಟಬಾರದ ಕೆಂಪುರೇಖೆಯಾಗಿದ್ದು, ಇರಾನ್‌ನ ಭದ್ರತೆಗೆ ಹತ್ತಿರ ಬರುವ ಯಾವುದೇ ಹಸ್ತಕ್ಷೇಪಕಾರಿ ಕೈಯನ್ನು ಕತ್ತರಿಸಲಾಗುತ್ತದೆ ಎಂದು ವಾಗ್ದಾಳಿ ನಡೆಸಿದ್ದಾರೆ.

**ಇರಾನ್ ನಾಯಕರ ಹೇಳಿಕೆಗಳಲ್ಲಿ ಬಿರುಕು?:** ಆದರೆ ಇತ್ತ ಇರಾನ್ ನಾಯಕರಲ್ಲಿ ಬಿರುಕು ಮೂಡಿದೆ ಎಂಬ ಮಾತುಗಳು ಸಹ ಕೇಳಿಬರುತ್ತಿದ್ದು, ಇಸ್ಲಾಮಿಕ್ ರಿಪಬ್ಲಿಕ್ ಅಸ್ತಿತ್ವದ ಹೋರಾಟದಲ್ಲಿದೆ ಎಂದು ಹಲವು ಅಧಿಕಾರಿಗಳು ಖಾಸಗಿಯಾಗಿ ಒಪ್ಪಿಕೊಂಡಿದ್ದಾರೆ. ಇನ್ನು ಇತ್ತೀಚೆಗೆ ಇರಾನ್ ಸರ್ಕಾರ ಪ್ರತಿಭಟನೆಗಳನ್ನು ಅತ್ಯಂತ ಕಡಿಮೆ ಹಿಂಸಾಚಾರದ ಮೂಲಕ ಹತ್ತಿಕ್ಕುವುದು ಹೇಗೆ ಎಂಬ ಬಗ್ಗೆಯೂ ಸಹ ತುರ್ತು ಸಭೆ ನಡೆಸಿದ್ದಾರೆ ಎಂದಿ ವರದಿಯಾಗಿದೆ.

# ವಿ-ಬಿ-ಜಿ-ರಾಮ್-ಜಿ ಕಾಯ್ದೆ ತಿದ್ದುಪಡಿಯಿಂದ ಗ್ರಾಮೀಣ ಸಬಲೀಕರಣ: ಕೇಂದ್ರ ಸರ್ಕಾರ ಸಮರ್ಥನೆ

**ನವದೆಹಲಿ:** ವಿಕಸಿತ್ ಭಾರತ್ ರೋಜ್‌ಗಾರ್ ಮತ್ತು ಅಜೀಕಾ ಮಿಷನ್ (ಗ್ರಾಮೀಣ) (ವಿ-ಬಿ-ಜಿ-ರಾಮ್-ಜಿ) ಕಾಯ್ದೆಯು ದೀರ್ಘಕಾಲೀನ ಕಲ್ಯಾಣ ವಾಸ್ತುಶಿಲ್ಪದ ಮೇಲೆ ನಿರ್ಮಿಸುವ ಮೂಲಕ ಗ್ರಾಮೀಣ ಉದ್ಯೋಗ ಚೌಕಟ್ಟನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ವಿ-ಬಿ-ಜಿ-ರಾಮ್-ಜಿ ಸಾಂಕೇತಿಕತೆಗಿಂತ ಪಾರದರ್ಶಕತೆ, ಹೊಣೆಗಾರಿಕೆ, ಕಾರ್ಮಿಕರ ಘನತೆ ಮತ್ತು ನಿಜವಾದ ಗ್ರಾಮೀಣ ಸಬಲೀಕರಣಕ್ಕೆ ಆದ್ಯತೆ ನೀಡುತ್ತದೆ ಎಂದು ಕೇಂದ್ರ ಸರ್ಕಾರ ಬಲವಾಗಿ ಸಮರ್ಥನೆ ಮಾಡಿಕೊಂಡಿದೆ.

ಇದು ಉದ್ಯೋಗ ಖಾತರಿ, ಕಾರ್ಮಿಕರ ಹಕ್ಕುಗಳು, ಕುಂದುಕೊರತೆ ಪರಿಹಾರ ಅಥವಾ ಸುರಕ್ಷತೆಗಳನ್ನು ಬದಲಾಯಿಸುವುದಿಲ್ಲ. ಮಹಾತ ಗಾಂಧಿಯವರ ಹೆಸರನ್ನು ತೆಗೆದು ಹಾಕುವುದು ನೈತಿಕ ಅಧಿಕಾರವನ್ನು ದುರ್ಬಲಗೊಳಿಸುತ್ತದೆ ಎಂಬುದು ವ್ಯಕ್ತಿನಿಷ್ಠ ಅಭಿಪ್ರಾಯವನ್ನು ಪ್ರತಿಬಿಂಬಿಸುತ್ತದೆ, ಪರಿಶೀಲಿಸಬಹುದಾದ ಸಂಗತಿಯಲ್ಲ. ಹಸ್ತಚಾಲಿತ ಪರಿಶೀಲನೆಯು ವಂಚನೆ ಮತ್ತು ಭ್ರಷ್ಟಾಚಾರದಿಂದ ಕೂಡಿದ್ದು, ಇದು ಬೃಹತ್ ಸೋರಿಕೆ ಮತ್ತು ಫಲಾನುಭಗಳ ಹೊರಗಿಡುವಿಕೆಗೆ ಕಾರಣವಾಯಿತು ಎಂದು ಆರೋಪಿಸಿದೆ.

ಹೆಚ್ಚುವರಿಯಾಗಿ, ಮಧ್ಯವರ್ತಿ ಮಟ್ಟದ ಭ್ರಷ್ಟಾಚಾರದ ಬಹು ಹಂತಗಳಿಂದಾಗಿ ಫಲಾನುಭಗಳಿಗೆ ಉದ್ದೇಶಿಸಲಾದ ನಿಧಿಗಳು ಕಣರೆಯಾಗುತ್ತಿದ್ದವು. ಹಿಂದೆ ಕೇವಲ 0.76 ಕೋಟಿ ಕಾರ್ಮಿಕರನ್ನು ಆಧಾರ್ ಸೀಡಿಂಗ್ ಮೂಲಕ ಪರಿಶೀಲಿಸಲಾಗಿತ್ತು.

### ಗ್ರಾಮೀಣ ಸಬಲೀಕರಣಕ್ಕೆ ಆದ್ಯತೆ

ಇದರಿಂದಾಗಿ ವ್ಯವಸ್ಥೆಯು ಸೋರಿಕೆಗೆ ಗುರಿಯಾಗುತ್ತದೆ. ಆದಾಗ್ಯೂ, ಈಗ ವ್ಯವಸ್ಥೆಯನ್ನು ಸಾಂಸ್ಥಿಕಗೊಳಿಸಲಾಗಿದೆ. ರಾಷ್ಟ್ರೀಯ ಎಲೆಕ್ಟ್ರಾನಿಕ್ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಈಗ 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಂಪೂರ್ಣವಾಗಿ ಜಾರಿಗೆ ತರಲಾಗಿದ್ದು, ವೇತನವು ಸರ್ಕಾರದಿಂದ ಕಾರ್ಮಿಕರ ಬ್ಯಾಂಕ್ ಖಾತೆಗೆ ನೇರವಾಗಿ ಹರಿಯುವುದನ್ನು ಖಚಿತಪಡಿಸುತ್ತದೆ.

ಈ ಕಾಯಿದೆಯು, ವೇತನ ದರವು ಚಾಲ್ತಿಯಲ್ಲಿರುವ ವೇತನ ದರಕ್ಕಿಂತ ಕಡಿಮೆ ಇರಬಾರದು ಮತ್ತು



ವೇತನವನ್ನು ಮೇಲುಖವಾಗಿ ಮಾತ್ರ ಪರಿಷ್ಕರಿಸಬಹುದು ಎಂದು ಖಾತರಿಪಡಿಸುತ್ತದೆ, ಇದು ಆದಾಯದ ಸವೆತದ ಭಯವನ್ನು ಪರಿಣಾಮಕಾರಿಯಾಗಿ ತಟಸ್ಥಗೊಳಿಸುತ್ತದೆ. ವೇತನ ದರಗಳನ್ನು ತಿಳಿಸಲು ಕೇಂದ್ರಕ್ಕೆ ಅಧಿಕಾರ ನೀಡುವ ಮೂಲಕ, ಕಾಯಿದೆಯು ಸರ್ಕಾರವು ಸಂಸತ್ತಿನ ಮೂಲಕ ಪದೇ ಪದೇ ತಿದ್ದುಪಡಿ ಮಾಡದೆಯೇ ಹೆಚ್ಚು ನಿಖರವಾದ ಹಣದುಬ್ಬರ ಸೂಚ್ಯಂಕಗಳಿಗೆ ಬದಲಾಯಿಸಲು ಅನುವು ಮಾಡಿಕೊಡುತ್ತದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಕಾಯಿದೆಯಡಿಯಲ್ಲಿನ ಪ್ರಸ್ತುತ ಚೌಕಟ್ಟು ಜವಾಬ್ದಾರಿಯುತ ಬಳಕೆ, ಹಣಕಾಸಿನ ಶಿಸ್ತು ಮತ್ತು ಫಲಿತಾಂಶ ಆಧಾರಿತ ಖರ್ಚನ್ನು ಉತ್ತೇಜಿಸುತ್ತದೆ, ರಾಜ್ಯ, ಜಿಲ್ಲಾ ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಉತ್ತಮ ಯೋಜನೆ ಮತ್ತು ಕೆಲಸಗಳ ಅನುಕ್ರಮವನ್ನು ಸಕ್ರಿಯಗೊಳಿಸುತ್ತದೆ, ಸಾರ್ವಜನಿಕ ಹಣವನ್ನು ಉತ್ಪಾದಕವಾಗಿ, ಪಾರದರ್ಶಕವಾಗಿ ಮತ್ತು ಬಾಳಿಕೆ ಬರುವ ಆಸ್ತಿ ಸೃಷ್ಟಿಗೆ ಬಳಸಲಾಗುತ್ತಿದೆ ಎಂದು ಖಚಿತಪಡಿಸುತ್ತದೆ. ಕಾಯಿದೆಯಡಿಯಲ್ಲಿ ಪ್ರಧಾನ ಮಂತ್ರಿ ಗತಿ ಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲ್ಯಾನ್‌ನ ಏಕೀಕರಣವು ಸ್ಥಳೀಯ ಅಭಿವೃದ್ಧಿಯ ಸಮಗ್ರ ಮತ್ತು ಸಮಗ್ರ ದೃಷ್ಟಿಕೋನವನ್ನು ಖಚಿತಪಡಿಸುತ್ತದೆ.

# ಕಾರು ಅಪಘಾತದಲ್ಲಿ ನಾಲ್ವರು ಕಾಲೇಜು ವಿದ್ಯಾರ್ಥಿಗಳ ಸಾವು

**ಹೈದರಾಬಾದ್:** ಕಾರೊಂದು ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಕಾಲೇಜು ವಿದ್ಯಾರ್ಥಿಗಳ ಸಾವನ್ನಪ್ಪಿದ್ದ ಭೀಕರ ಘಟನೆ ಇಲ್ಲಿನ ಮಿರ್ಜಾಗುಡ ಬಳಿ ನಡೆದಿದೆ. ಮೃತರನ್ನು ಐಸಿಎಫ್ ಎಐ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದ ಸೂರ್ಯತೇಜ, ಸುಮಿತ್, ಶ್ರೀನಿಖಿಲ್ ಮತ್ತು ಎಂಜಿಐಟಿಯ ವಿದ್ಯಾರ್ಥಿ ರೋಹಿತ್ ಎಂದು ಗುರುತಿಸಲಾಗಿದೆ.

ಮೋಕಿಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬೆಳಗಿನ ಜಾವ 1 ರಿಂದ 1.30ರ ನಡುವೆ ಈ ಘಟನೆ ಸಂಭವಿಸಿದೆ. ಪ್ರಾಥಮಿಕ ತನಿಖೆಯ ಪ್ರಕಾರ ಅತಿವೇಗವೇ ಅಪಘಾತಕ್ಕೆ ಕಾರಣ ಎಂದು ಎಂದು ಅವರು ಪೊಲೀಸರು ತಿಳಿಸಿದ್ದಾರೆ. ಸುಮಾರು 18 ರಿಂದ 21 ವರ್ಷ ವಯಸ್ಸಿನ ಐವರು ಕಾಲೇಜು ವಿದ್ಯಾರ್ಥಿಗಳು ಅತಿವೇಗದಲ್ಲಿ ಚಲಿಸುತ್ತಿದ್ದ ಕಾರಿನಲ್ಲಿದ್ದದ್ದರು ಎಂದು ಹೇಳಿದರು. ಅಪಘಾತದಲ್ಲಿ ಐಸಿಎಫ್‌ಎಐ ವಿವಿಯ ವಿದ್ಯಾರ್ಥಿನಿ ನಕ್ಷತ್ರಾ ಗಂಭೀರವಾಗಿ ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದರು. ಘರ್ಷಣೆ ಎಷ್ಟು ತೀವ್ರವಾಗಿತ್ತೆಂದರೆ ಕಾರು ಎರಡು ಭಾಗಗಳಾಗಿ ಛಿದ್ರಗೊಂಡಿದೆ ಎಂದು ಅವರು ಹೇಳಿದರು. ಪೊಲೀಸರ ಪ್ರಕಾರ, ವಿದ್ಯಾರ್ಥಿಗಳು ಮೋಕಿಲಾದಿಂದ ಹೈದರಾಬಾದ್‌ಗೆ ಪ್ರಯಾಣಿಸುತ್ತಿದ್ದಾಗ ಅಪಘಾತ ಸಂಭವಿಸಿದೆ. ಹುಟ್ಟುಹಬ್ಬದ ಪಾರ್ಟಿಯಲ್ಲಿ ಎಲ್ಲರು ಬಾಗಿಯಾಗಿದ್ದರು ಮತ್ತು ಇವರು ಬಿಬಿಎಂ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಎಂದು ತಿಳಿದುಬಂದಿದೆ.

# ಸಂಕ್ರಾಂತಿಗೆ 150 ವಿಶೇಷ ರೈಲುಗಳ ಸಂಚಾರ

**ಹೈದರಾಬಾದ್:** ದಕ್ಷಿಣ ಮಧ್ಯ ರೈಲ್ವೆ ಮತ್ತು ತೆಲಂಗಾಣದ ರಸ್ತೆ ಮತ್ತು ಕಟ್ಟಡಗಳ ಇಲಾಖೆ ಮುಂಬರುವ ಸಂಕ್ರಾಂತಿ ಹಬ್ಬಕ್ಕೆ ಸಿದ್ಧತೆಗಳನ್ನು ಹೆಚ್ಚಿಸುತ್ತಿವೆ. ಭಾರಿ ಪ್ರಯಾಣಿಕರು ಮತ್ತು ವಾಹನಗಳ ದಟ್ಟಣೆಯನ್ನು ನಿರೀಕ್ಷಿಸುತ್ತಿದ್ದು, ಪ್ರಮುಖ ಪ್ರದೇಶಗಳನ್ನು ಸಂಪರ್ಕಿಸುವ ವಿಶೇಷ ರೈಲುಗಳು ಮತ್ತು ಹೆದ್ದಾರಿ ದಟ್ಟಣೆಯನ್ನು ಕಡಿಮೆ ಮಾಡಲು ನಿರ್ದೇಶನಗಳೊಂದಿಗೆ, ಮನೆಗೆ ಹೋಗುವ ಅಥವಾ ಆಚರಣೆಗಳಿಗೆ ಹೋಗುವ ಲಕ್ಷಾಂತರ ಜನರಿಗೆ ಸುಗಮ ಪ್ರಯಾಣವನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಅಧಿಕಾರಿಗಳು ಹೊಂದಿದ್ದಾರೆ. ದಕ್ಷಿಣ ಮಧ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಎ. ಶ್ರೀಧರ್, ಸಂಕ್ರಾಂತಿ ದಿನಗಳಲ್ಲಿ ಸುಮಾರು 150 ವಿಶೇಷ ರೈಲುಗಳನ್ನು ಓಡಿಸುವುದಾಗಿ ಘೋಷಿಸಿದ್ದಾರೆ. ಈ ರೈಲುಗಳು ಉತ್ತರ, ಪೂರ್ವ ಮತ್ತು ದಕ್ಷಿಣ ಭಾರತಕ್ಕೆ ಸಂಪರ್ಕವನ್ನು ವಿಸ್ತರಿಸುತ್ತವೆ. ಇದರಲ್ಲಿ ತಿರುಪತಿ ಮತ್ತು ಶಿರಡಿಯನ್ನು ಸಂಪರ್ಕಿಸುವ ವಿಶೇಷ ಸೇವೆಗಳು ಸೇರಿವೆ- ಜನಪ್ರಿಯ ಯಾತ್ರಾ ಸ್ಥಳಗಳು ಉತ್ಸವದ ಸಮಯದಲ್ಲಿ ಭಾರಿ ಜನಸಂದಣಿಯನ್ನು ಸೆಳೆಯುತ್ತವೆ. ಒಟ್ಟಾರೆಯಾಗಿ, 600ಕ್ಕೂ ಹೆಚ್ಚು ರೈಲುಗಳು ಋತುವಿನಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತವೆ.

### ಲಕ್ಷಾಂತರ ಜನರಿಗೆ ಸುಗಮ ಪ್ರಯಾಣ

ಈ ವಿಸ್ತರಣೆಯು ಪ್ರಯಾಣಿಕರ ನಿರೀಕ್ಷಿತ ಪ್ರವಾಹವನ್ನು ಪರಿಹರಿಸುತ್ತದೆ, ವಿಶೇಷವಾಗಿ ಸಿಕಂದರಾಬಾದ್ ರೈಲ್ವೆ ನಿಲ್ದಾಣದಂತಹ ಪ್ರಮುಖ ಕೇಂದ್ರಗಳಲ್ಲಿ. ಸಿಕಂದರಾಬಾದ್ ನಿಲ್ದಾಣವು ಒಂದು ವಿಶಿಷ್ಟ ಸವಾಲನ್ನು ಎದುರಿಸುತ್ತಿದೆ. ಇದು ಹಬ್ಬದ ಉತ್ತುಂಗದ ನಡುವೆ ಪ್ರಮುಖ ಪುನರಾಭಿವೃದ್ಧಿ ಕಾರ್ಯಗಳಿಗೆ ಒಳಗಾಗುತ್ತಿದೆ. ಇದು ಒಳಬರುವ ಪ್ರಯಾಣಿಕರಿಗೆ ಅಡಚಣೆಗಳನ್ನು ಉಂಟುಮಾಡುತ್ತದೆ. ಇದನ್ನು ತಗ್ಗಿಸಲು, ದಕ್ಷಿಣ ಮಧ್ಯ ರೈಲ್ವೆ ಹಲವಾರು ಪ್ರಮುಖ ರೈಲುಗಳನ್ನು ಪರ್ಯಾಯ ನಿಲ್ದಾಣಗಳಾದ ಚಾರ್ಲಪಲ್ಲಿ, ಕಾಚಿಗುಡ ಮತ್ತು ಲಿಂಗಂಪಳ್ಳಿಗೆ ಶಾಶ್ವತವಾಗಿ ಸ್ಥಳಾಂತರಿಸಿದೆ ಮತ್ತು ಇತರ ರೈಲುಗಳನ್ನು ತಾತ್ಕಾಲಿಕವಾಗಿ ಸ್ಥಳಾಂತರಿಸಿದೆ. ಈ ಪೂರ್ವಭಾವಿ ಕ್ರಮಗಳು ನಿಲ್ದಾಣದಲ್ಲಿ ದಟ್ಟಣೆಯನ್ನು ಕಡಿಮೆ ಮಾಡುವ ಮತ್ತು ಪ್ರಯಾಣಿಕರಿಗೆ ತಡೆರಹಿತ ಪ್ರವೇಶವನ್ನು ಒದಗಿಸುವ ಗುರಿಯನ್ನು ಹೊಂದಿವೆ. ಇಂತಹ ಕ್ರಮಗಳು ಹೆಚ್ಚಿನ ಸಂಚಾರ ಅವಧಿಯಲ್ಲಿ ಅಡಚಣೆಗಳನ್ನು ತಡೆಯುತ್ತವೆ ಎಂದು ಶ್ರೀಧರ್ ಒತ್ತಿ ಹೇಳಿದರು.



# ಮುಂಬೈ ಬೇರ್ಪಡಿಸಲು ಬಿಜೆಪಿ ಪಿತೂರಿ

**ಮುಂಬೈ:** ಮಹಾರಾಷ್ಟ್ರದಿಂದ ಮುಂಬೈಯನ್ನು ಬೇರ್ಪಡಿಸಲು ಪ್ರಯತ್ನಿಸುತ್ತಿರುವವರು ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿದ್ದಾರೆ ಎಂದು ಆರೋಪಿಸಿ ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ ಮತ್ತು ಅವರು ಪುರಸಭೆಗಳನ್ನು ನಿಯಂತ್ರಿಸಿದರೆ, ಮರಾಠಿ ಮನೂಸ್ ಅಧಿಕಾರಹೀನರಾಗುತ್ತಾರೆ ಎಂದು ಎಚ್ಚರಿಸಿದ್ದಾರೆ. ರಾಜ್ ಮತ್ತು ಶಿವಸೇನೆ (ಯುಬಿಟಿ) ಅಧ್ಯಕ್ಷ ಉದ್ಧವ್ ಠಾಕ್ರೆ, ಅವರ ಪಕ್ಷದ ಮುಖವಾಣಿ ಸಾಮ್ನಾದಲ್ಲಿ ಪ್ರಕಟವಾದ ಜಂಟಿ ಸಂದರ್ಶನದ ಮೊದಲ ಭಾಗದಲ್ಲಿ, ಮಹಾರಾಷ್ಟ್ರ ನವ ನಿರ್ಮಾಣ್ ಸೇನಾ (ಎಂಎನ್‌ಎಸ್) ಮುಖ್ಯಸ್ಥರು ತಾವು ಮತ್ತು ತಮ್ಮ ಸೋದರಸಂಬಂಧಿ ರಾಜ್ಯದಲ್ಲಿ ಮರಾಠಿ ಮನೂಸ್‌ಗಾಗಿ ಒಟ್ಟಿಗೆ ಬಂದಿದ್ದೇವೆ ಎಂದು ಹೇಳಿದ್ದಾರೆ.

ಸೇನಾ (ಯುಬಿಟಿ) ರಾಜ್ಯಸಭಾ ಸದಸ್ಯ ಮತ್ತು ಸಾಮ್ನಾದ ಕಾರ್ಯನಿರ್ವಾಹಕ ಸಂಪಾದಕ ಸಂಜಯ್ ರಾವತ್ ಮತ್ತು ಖ್ಯಾತ ನಿರ್ದೇಶಕ ಮಹೇಶ್ ಮಂಜ್ರೇಕರ್ ಅವರು ಠಾಕ್ರೆ ಸೋದರಸಂಬಂಧಿಗಳನ್ನು ಸಂದರ್ಶಿಸಿದರು. ಕಳೆದ ತಿಂಗಳು, ಜನವರಿ 15 ರ ಬೃಹನ್ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ (ಬಿಎಂಸಿ) ಚುನಾವಣೆಗೆ ತಮ್ಮ ಪಕ್ಷಗಳ ಮೈತ್ರಿಯನ್ನು ಸೋದರಸಂಬಂಧಿಗಳು ಘೋಷಿಸಿದರು. ಸಾಮ್ನಾ ಸಂದರ್ಶನದಲ್ಲಿ, ರಾಜ್ ಠಾಕ್ರೆ, ರಾಜ್ಯದ ಹೊರಗಿನವರು ಜೀವನೋಪಾಯಕ್ಕಾಗಿ ಬರುತ್ತಿಲ್ಲ, ಬದಲಾಗಿ ತಮ್ಮದೇ ಆದ ಕ್ಷೇತ್ರಗಳನ್ನು ರಚಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಇದು ಹಳೆಯ ಗಾಯ ಮುಂಬೈಯನ್ನು ಮಹಾರಾಷ್ಟ್ರದಿಂದ ಬೇರ್ಪಡಿಸುವ ಕನಸನ್ನು ನನಸಾಗಿಸಲು ಪ್ರಯತ್ನಗಳು ನಡೆಯುತ್ತಿವೆ ಎಂದು ಅವರು ಹೇಳಿದರು.

ಸಂಯುಕ್ತ ಮಹಾರಾಷ್ಟ್ರ ಚಳವಳಿಯ ಸಮಯದಲ್ಲಿ ಗುಜರಾತ್ ಮುಂಬೈ ತನ್ನ ಭಾಗವಾಗಬೇಕೆಂದು ಬಯಸಿದಾಗ ಇದ್ದ ವಾತಾವರಣವೇ ಇದೆ ಎಂದು ಅವರು ಹೇಳಿದರು. ಮಹಾರಾಷ್ಟ್ರದಿಂದ ಮುಂಬೈಯನ್ನು ಬೇರ್ಪಡಿಸಲು ಬಯಸುವವರು ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿದ್ದಾರೆ ಎಂದು ರಾಜ್ ಠಾಕ್ರೆ, ಬಿಜೆಪಿಯನ್ನು ಗುರಿಯಾಗಿಸಿಕೊಂಡು ಹೇಳಿದರು. ಮರಾಠಿ ಮನೂಗಳು (ಬಿಜೆಪಿ) ಪುರಸಭೆಗಳನ್ನು ನಿಯಂತ್ರಿಸಿದರೆ ಅವರು ಏನನ್ನೂ ಮಾಡಲು ಸಾಧ್ಯವಾಗುವುದಿಲ್ಲ ಎಂದು ಅವರು ಪ್ರತಿಪಾದಿಸಿದರು.



# ಮಹಾರಾಷ್ಟ್ರ: ಬಿಜೆಪಿ ಸೇರಿದ 12 ಕಾಂಗ್ರೆಸ್ ಕೌನ್ಸಿಲರ್‌ಗಳು

**ಅಂಬರ್‌ನಾಥ್:** ಮಹಾರಾಷ್ಟ್ರದ ಅಂಬರ್‌ನಾಥ್‌ನಲ್ಲಿ 12 ಕಾಂಗ್ರೆಸ್ ಕೌನ್ಸಿಲರ್‌ಗಳು ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ. ಈ ಕ್ರಮವು ಪುರಸಭೆಯಲ್ಲಿ ರಾಜಕೀಯ ಸಮೀಕರಣಗಳನ್ನು ಗಮನಾರ್ಹವಾಗಿ ಬದಲಾಯಿಸಿದೆ.

ಚುನಾವಣೆಯ ನಂತರ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಕ್ಕಾಗಿ ಕಾಂಗ್ರೆಸ್‌ನಿಂದ ಅಮಾನತುಗೊಂಡಿದ್ದ ಅಂಬರ್‌ನಾಥ್ ಪುರಸಭೆಯಲ್ಲಿ ಹೊಸದಾಗಿ ಆಯ್ಕೆಯಾದ ಹನ್ನೆರಡು ಕೌನ್ಸಿಲರ್‌ಗಳು ಔಪಚಾರಿಕವಾಗಿ ಕೇಸರಿ ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ. ಮಹಾರಾಷ್ಟ್ರ ಭಾರತೀಯ ಜನತಾ ಪಕ್ಷದ ಅಧ್ಯಕ್ಷ ರವೀಂದ್ರ ಚವಾಣ್ ತಡರಾತ್ರಿ ಇಲ್ಲಿನ ಬಿಜೆಪಿ ಕಚೇರಿಯಲ್ಲಿ ಈ ಬೆಳವಣಿಗೆಯನ್ನು ಘೋಷಿಸಿದರು, ಈ ಕ್ರಮವು ಅಧಿಕಾರದಿಂದ ಪ್ರೇರಿತವಾಗಿಲ್ಲ, ಬದಲಾಗಿ ಅಭಿವೃದ್ಧಿಗೆ ಹಂಚಿಕೆಯ ಬದ್ಧತೆಯಿಂದ ನಡೆಸಲ್ಪಟ್ಟಿದೆ ಎಂದು ಪ್ರತಿಪಾದಿಸಿದರು.

ಜನರು ಈ ಕೌನ್ಸಿಲರ್‌ಗಳನ್ನು ಆಯ್ಕೆ ಮಾಡಿದರು ಮತ್ತು ಅವರು ನಾಗರಿಕರಿಗೆ ಅಭಿವೃದ್ಧಿಯ ಭರವಸೆ ನೀಡಿದ್ದರು. ಸರ್ಕಾರವು ಕ್ರಿಯಾತ್ಮಕ ರೀತಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಮತ್ತು ಜನರಿಗೆ ನ್ಯಾಯ ಮತ್ತು ಅಭಿವೃದ್ಧಿಯನ್ನು ತಲುಪಿಸಲು ಸಮರ್ಥವಾಗಿರುವುದರಿಂದ ಅವರು ನಮ್ಮೊಂದಿಗೆ ಬಂದಿದ್ದಾರೆ ಎಂದು ಅವರು ಹೇಳಿದರು. ಡಿ. 20 ರಂದು ನಡೆದ ಸ್ಥಳೀಯ ಚುನಾವಣೆಯ ನಂತರ, ಬಿಜೆಪಿ ತನ್ನ ಬದ್ಧ ಎದುರಾಳಿ ಕಾಂಗ್ರೆಸ್ ನೊಂದಿಗೆ ಕೈಜೋಡಿಸಿ ಅಂಬರ್‌ನಾಥ್ ವಿಕಾಸ್ ಅಘಾಡಿ ಬ್ಯಾನರ್ ಅಡಿಯಲ್ಲಿ ಅಂಬರ್ನಾಥ್ ಪುರಸಭೆಯನ್ನು (ಥಾಣೆ ಜಿಲ್ಲೆಯಲ್ಲಿ) ನಾಯಕತ್ವವನ್ನು ಬದಿಗಿಟ್ಟು, ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಮಿತ್ರಪಕ್ಷ ಶಿವಸೇನೆಯನ್ನು ಬದಿಗಿಟ್ಟಿತು. ಅಘಾಡಿ ಪಕ್ಷವು ಅಜಿತ್ ಪವಾರ್ ನೇತೃತ್ವದ ರಾಷ್ಟ್ರೀಯತಾವಾದಿ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಯನ್ನೂ ಒಳಗೊಂಡಿದೆ.

60 ಸದಸ್ಯರ ಸ್ಥಳೀಯ ಸಂಸ್ಥೆಯಲ್ಲಿ ಎವಿಎ 31 ಸ್ಥಾನಗಳ ಬಹುಮತವನ್ನು ಗಳಿಸಿತು. ಇತ್ತೀಚಿನ ಚುನಾವಣೆಗಳಲ್ಲಿ, ಶಿವಸೇನೆ 27 ಸ್ಥಾನಗಳನ್ನು ಗೆದ್ದು, ಬಹುಮತಕ್ಕೆ ಕೇವಲ ನಾಲ್ಕು ಸ್ಥಾನಗಳ ಕೊರತೆಯನ್ನು ಅನುಭವಿಸಿತು. ಬಿಜೆಪಿ 14 ಸ್ಥಾನಗಳನ್ನು, ಕಾಂಗ್ರೆಸ್ 12, ಎನ್‌ಸಿಪಿ 4 ಸ್ಥಾನಗಳನ್ನು ಗಳಿಸಿತು, ಮತ್ತು 2 ಸ್ವತಂತ್ರರು ಸಹ ಆಯ್ಕೆಯಾಗಿದ್ದರು.

## ಮಿನಿ ನ್ಯೂಸ್

### ಮಹಿಳೆಯ ಮೇಲೆ ಗುಂಡು ಹಾರಿಸಿ ಹತ್ಯೆ

**ಮಿನ್ನಿಯಾಪೋಲಿಸ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ದೇಶದಲ್ಲಿ ಅಕ್ರಮ ವಲಸಿಗರ ವಿರುದ್ಧ ಅಭಿಯಾನ ಆರಂಭಿಸಿದ್ದಾರೆ. ಅಮೆರಿಕದಲ್ಲಿ ವಾಸಿಸುವವರ ಕಾನೂನುಬದ್ಧತೆಯ ಬಗ್ಗೆ ಟ್ರಂಪ್ ಏಜೆಂಟ್‌ಗಳು ತನಿಖೆ ನಡೆಸುತ್ತಿದ್ದಾರೆ. ಏತನ್ಮಧ್ಯೆ, ಮಿನ್ನಿಯಾಪೋಲಿಸ್‌ನಿಂದ ಆಘಾತಕಾರಿ ವಿಡಿಯೋ ಹೊರಬಿದ್ದಿದ್ದು, ಅಲ್ಲಿ ಟ್ರಂಪ್ ಏಜೆಂಟ್ ಒಬ್ಬ ಅಮೇರಿಕನ್ ಮಹಿಳೆಯನ್ನು ಗುಂಡಿಕ್ಕಿ ಕೊಂದಿದ್ದಾನೆ. ದಕ್ಷಿಣ ಮಿನ್ನಿಯಾ ಪೊಲೀಸ್‌ನಲ್ಲಿ ಈ ಘಟನೆ ನಡೆದಿದೆ. ಮೃತ ಮಹಿಳೆಯನ್ನು 37 ವರ್ಷದ ರೆನೀ ನಿಕೋಲ್ ಗುಡ್ ಎಂದು ಗುರುತಿಸಲಾಗಿದೆ. ಕಾರನ್ನು ನಿಲ್ಲಿಸಲು ಪ್ರಯತ್ನಿಸಿದ ನಂತರ ಯುಎಸ್ ವಲಸೆ ಮತ್ತು ಕಸ್ಟಮ್ಸ್ ಜಾರಿ (ಐಸಿಇ) ಏಜೆಂಟ್ ಮಹಿಳೆಯನ್ನು ಗುಂಡು ಹಾರಿಸಿ ಕೊಂದಿದ್ದಾರೆ. ಫೆಡರಲ್ ಅಧಿಕಾರಿಗಳು ಇದನ್ನು ಆತ್ಮರಕ್ಷಣೆಯ ಕ್ರಮ ಎಂದು ಹೇಳಿಕೊಂಡಿದ್ದಾರೆ ಆದರೆ ನಗರದ ಮೇಯರ್ ಅದನ್ನು ಅಜಾಗರೂಕ ಮತ್ತು ಅನಗತ್ಯ ಎಂದು ಬಣ್ಣಿಸಿದ್ದಾರೆ.

ಮೂರು ಐಸಿಇ ಏಜೆಂಟ್‌ಗಳು ಕಾರನ್ನು ಸುತ್ತುವರೆದಿರುವುದನ್ನು ವಿಡಿಯೋ ಸ್ಪಷ್ಟವಾಗಿ ತೋರಿಸುತ್ತದೆ. ಅವರು ಕಾರಿನ ಬಾಗಿಲು ತೆರೆಯಲು ಪ್ರಯತ್ನಿಸುತ್ತಾರೆ, ಆದರೆ ಮಹಿಳೆ ಕಾರನ್ನು ಮುಂದೆ ಓಡುತ್ತಾಳೆ. ಈ ಸಮಯದಲ್ಲಿ, ಐಸಿಇ ಏಜೆಂಟ್ ಕಾರಿನ ಮೇಲೆ ಸತತ ಮೂರು ಗುಂಡು ಹಾರಿಸುತ್ತಾನೆ. ಒಂದು ಗುಂಡು ಮಹಿಳೆಯ ತಲೆಗೆ ತಗುಲಿ ಆಕೆ ತಕ್ಷಣವೇ ಸಾವನ್ನಪ್ಪಿದ್ದಾಳೆ. ಈ ಘಟನೆಯ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದೆ.

### 14 ವರ್ಷದ ಬಾಲಕಿಯನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರ

**ಕಾನ್ಪುರ:** ಉತ್ತರ ಪ್ರದೇಶದ ಕಾನ್ಪುರದಲ್ಲಿ 14 ವರ್ಷದ ಬಾಲಕಿಯನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರ ನಡೆಸಲಾಗಿದೆ ಎಂದು ಆರೋಪಿಸಲಾಗಿದೆ. ಈ ಅಪರಾಧವೆಸಗಿದ ಯೂಟ್ಯೂಬರ್ ಒಬ್ಬನನ್ನು ಬಂಧಿಸಲಾಗಿದೆ. ಇನ್ನೋರ್ವ ಆರೋಪಿಯಾದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಾಗಿ ಹುಡುಕಾಟ ನಡೆಸಲಾಗುತ್ತಿದೆ. ಹಿರಿಯ ಪೊಲೀಸ್ ಅಧಿಕಾರಿಗಳನ್ನು ಕೆಲಸದಿಂದ ಅಮಾನತುಗೊಳಿಸಲಾಗಿದೆ. ಸ್ಥಳೀಯ ಪೊಲೀಸರು ಈ ಕೃತ್ಯವನ್ನು ಮುಚ್ಚಿಹಾಕಿದ್ದಾರೆ ಎಂದು ಸಂತ್ರಸ್ತೆಯ ಕುಟುಂಬ ಆರೋಪಿಸಿದೆ. ಎಲ್ಲಾ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಭರವಸೆಯೊಂದಿಗೆ ತನಿಖೆಗಳು ನಡೆಯುತ್ತಿವೆ. ಈ ಪ್ರಕರಣದಲ್ಲಿ ಸತ್ಯಗಳನ್ನು ತಪ್ಪಾಗಿ ನಿರೂಪಿಸಿದ ಆರೋಪದ ಮೇಲೆ ಕಾನ್ಪುರ ಪೊಲೀಸ್ ಆಯುಕ್ತ ರಘುಬೀರ್ ಲಾಲ್ ಅವರು ಉಪ ಪೊಲೀಸ್ ಆಯುಕ್ತ (ಪಶ್ಚಿಮ) ದಿನೇಶ್ ಚಂದ್ರ ತ್ರಿಪಾಠಿ ಅವರನ್ನು ವಜಾಗೊಳಿಸಿದ್ದಾರೆ. ಸಚೇಂಡಿ ಸ್ಟೇಷನ್ ಹೌಸ್ ಅಧಿಕಾರಿ ವಿಕ್ರಮ್ ಸಿಂಗ್ ಅವರನ್ನು ಅಮಾನತುಗೊಳಿಸಲಾಗಿದೆ.

ಕಾನ್ಪುರದ ಸಚೆಂಡಿ ಪ್ರದೇಶದಲ್ಲಿ 14 ವರ್ಷದ ಬಾಲಕಿಯನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರ ನಡೆಸಲಾಗಿತ್ತು. 7ನೇ ತರಗತಿಯ ವಿದ್ಯಾರ್ಥಿನಿಯನ್ನು ರಾತ್ರಿ 10 ಗಂಟೆ ಸುಮಾರಿಗೆ ಮಹೀಂದ್ರಾ ಸ್ಕಾರ್ಪಿಯೋದಲ್ಲಿ ಅಪಹರಿಸಲಾಗಿತ್ತು. ಆಕೆಯನ್ನು ಸ್ಕಾರ್ಪಿಯೋದಲ್ಲೇ ರೈಲ್ವೆ ಹಳಿಯ ಬಳಿಯ ದೂರದ ಸ್ಥಳಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಸುಮಾರು ಎರಡು ಗಂಟೆಗಳ ಕಾಲ ಆಕೆಯ ಮೇಲೆ ಅತ್ಯಾಚಾರ ನಡೆಸಿ, ನಂತರ ಆಕೆಯ ಮನೆಯ ಹೊರಗೆ ಎಸೆಯಲಾಗಿತ್ತು.

### ಬಂಗಾಳದ 5 ಕಡೆಗಳಲ್ಲಿ ಇಡಿ ದಾಳಿ

**ಕೊಲ್ಕತ್ತಾ:** ಪಶ್ಚಿಮ ಬಂಗಾಳದ 5 ಕಡೆಗಳಲ್ಲಿ ಇಡಿ ದಾಳಿ ನಡೆದಿದೆ. ಅದರಲ್ಲೂ ಮುಖ್ಯವಾಗಿ ಜಾರಿ ನಿರ್ದೇಶನಾಲಯ ಪ್ರತೀಕ್ ಜೈನ್ ಅವರ ಮನೆ ಮೇಲೆ ದಾಳಿ ಮಾಡಿದೆ. ಈ ವರ್ಷದ ವಿಧಾನಸಭಾ ಚುನಾವಣೆ ನಡೆಯಲಿರುವ ಬಂಗಾಳದಲ್ಲಿ ನಡೆದ ಈ ದಾಳಿ ಬಹಳ ಮಹತ್ವ ಪಡೆದಿದೆ. ಪಶ್ಚಿಮ ಬಂಗಾಳದಲ್ಲಿ ಜಾರಿ ನಿರ್ದೇಶನಾಲಯದ ದಾಳಿ ನಡೆಸಿದ ವೇಳೆ ಹೈಡ್ರಾಮಾ ನಡೆದಿದೆ. ಈ ಸಂದರ್ಭದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಮ್ಮ ಚುನಾವಣಾ ಸಲಹೆಗಾರ ಐಪ್ಯಾಕ್ ಮುಖ್ಯಸ್ಥ ಪ್ರತೀಕ್ ಜೈನ್ ಅವರ ಮನೆಯಿಂದ ಲ್ಯಾಪ್‌ಟಾಪ್, ಫೋನ್ ಮತ್ತು ಬಹು ದಾಖಲೆಗಳನ್ನು ಹೊತ್ತೊಯ್ದಿದ್ದಾರೆ ಎಂದು ಇಡಿ ಆರೋಪಿಸಿದೆ.

ಈ ದಾಳಿಯನ್ನು ಬಿಜೆಪಿಯ ರಾಜಕೀಯ ಪ್ರೇರಿತ ಎಂದು ಸಿಎಂ ಮಮತಾ ಬ್ಯಾನರ್ಜಿ ಆರೋಪಿಸಿದ್ದರೂ ಇಡಿ ಈ ಆರೋಪಗಳನ್ನು ನಿರಾಕರಿಸಿದೆ. ಇದು ಯಾವುದೇ ರಾಜಕೀಯ ಪಕ್ಷಗಳನ್ನು ಗುರಿಯಾಗಿಸಿಕೊಂಡು ನಡೆದ ದಾರಿಯಲ್ಲ ಎಂದು ಹೇಳಿದೆ. ನಾವು ಯಾವುದೇ ಪಕ್ಷದ ಕಚೇರಿಯನ್ನು ಶೋಧಿಸಿಲ್ಲ. ಈ ಶೋಧನೆಯು ಯಾವುದೇ ಚುನಾವಣೆಗಳಿಗೆ ಸಂಬಂಧಿಸಿಲ್ಲ ಮತ್ತು ಹಣ ವರ್ಗಾವಣೆಯ ವಿರುದ್ಧ ನಿಯಮಿತ ಕ್ರಮದ ಭಾಗವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರತೀಕ್ ಜೈನ್ ಅವರ ನಿವಾಸದಿಂದ ಹೊರಬಂದ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಬಿಜೆಪಿ ನಾಯಕರ ವಿರುದ್ಧ ಹರಿಹಾಯ್ದಿದ್ದಾರೆ. ಒಂದು ಪಕ್ಷದ ಹಾರ್ಡ್ ಡಿಸ್ಕ್‌ಗಳು ಮತ್ತು ಅಭ್ಯರ್ಥಿಗಳ ಪಟ್ಟಿಗಳನ್ನು ವಶಪಡಿಸಿಕೊಳ್ಳುವುದು ಇಡಿ ಅಥವಾ ಅಮಿತ್ ಶಾ ಅವರ ಕೆಲಸವೇ ಇದು ದ್ವೇಷದ ರಾಜಕಾರಣ ಇದಕ್ಕೆ ನಾವು ತಕ್ಕ ಉತ್ತರ ನೀಡುತ್ತೇವೆ ಎಂದು ಹೇಳಿದ್ದಾರೆ.

# Gen Z ದಂಗೆಯ ಭಯದಲ್ಲಿ ಇಟ್ಸ್ ಓವರ್ ಲೇಖನ ಅಳಿಸಿದ ಪಾಕ್

## ಅಮೆರಿಕ ಮೂಲದ ಪಾಕಿಸ್ತಾನಿ ಪಿಹೆಚ್‌ಡಿ ಪದವಿಧರ ಜೊರೈನ್ ನಿಜಾಮಾನಿ, ಪಾಕಿಸ್ತಾನ ಸರ್ಕಾರ ಮತ್ತು ಸೇನೆಯ ಉನ್ನತ ನಾಯಕತ್ವದ ಬಗ್ಗೆ ವಿಶ್ಲೇಷಣೆ

**ಇಸ್ಲಾಮಾಬಾದ್:** ನಮ್ಮನ್ನು ಕೆಣಕುವ ಯಾವುದೇ ಜಾಗತಿಕ ಶಕ್ತಿಯನ್ನು ಮೂಲೆಗುಂಪು ಮಾಡುತ್ತೇವೆ ಎಂದು ಅಬ್ಬರಿಸಿ ಬೊಬ್ಬೊರಿಯುವ ಪಾಕಿಸ್ತಾನ, ತನ್ನ ಯುವ ಸಮುದಾಯ ಎಲ್ಲಿ ದಂಗೆಯ ದಾರಿ ಹಿಡಿಯಲಿದೆಯೋ ಎಂಬ ಭಯದಲ್ಲಿ ದಿನ ದೂಡುತ್ತಿದೆ. Gen Z ದಂಗೆಯ ಭಯದಲ್ಲಿ ಯುವ ಧ್ವನಿಯನ್ನು ಹತ್ತಿಕ್ಕಲು ಮುಂದಾಗಿರುವ ಪಾಕಿಸ್ತಾನದ ಸರ್ಕಾರ ಮತ್ತು ಸೇನೆ, ತನ್ನ ವಿರುದ್ಧ ಪ್ರಕಟವಾದ ಮಾಧ್ಯಮ ಲೇಖನವೊಂದನ್ನು ಅಳಿಸಿ ಹಾಕಿದೆ.

ಹೌದು, ಅಮೆರಿಕ ಮೂಲದ ಪಾಕಿಸ್ತಾನಿ ಪಿಹೆಚ್‌ಡಿ ಪದವಿಧರ ಜೊರೈನ್ ನಿಜಾಮಾನಿ, ಪಾಕಿಸ್ತಾನ ಸರ್ಕಾರ ಮತ್ತು ಸೇನೆಯ ಉನ್ನತ ನಾಯಕತ್ವದ ಬಗ್ಗೆ ವಿಶ್ಲೇಷಣೆ ಮಾಡಿ ಇಟ್ಸ್ ಓವರ್ ಎಂಬ ಲೇಖನವನ್ನು ಬರೆದಿದ್ದರು. ನಿಜಾಮಾನಿ ಅವರ ಅವರ ಈ ವಿಶ್ಲೇಷಣಾತ್ಮಕ ಲೇಖನವನ್ನು ಪಾಕಿಸ್ತಾನದ ದಿನಪತ್ರಿಕೆ ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಕಳೆದ ಜ.1ರಂದು ಪ್ರಕಟಿಸಿತ್ತು. ನಿಜಾಮಾನಿ ತಮ್ಮ ಲೇಖನದಲ್ಲಿ ಪ್ರಧಾನಮಂತ್ರಿ ಶೆಹಬಾಜ್ ಷರೀಫ್ ಮತ್ತು ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಕಾರ್ಯವೈಖರಿಯನ್ನು ತರಾಟೆಗೆ ತೆಗೆದುಕೊಂಡಿದ್ದರು.

ಆದರೆ ಈ ಲೇಖನದಿಂದಾಗಿ ಎಲ್ಲಿ ಪಾಕಿಸ್ತಾನದಲ್ಲಿ Gen Z ದಂಗೆ ಏಳುವುದೋ ಎಂಬ ಭಯದಲ್ಲಿ, ಸರ್ಕಾರ ಮತ್ತು ಸೇನೆ ಜಂಟಿಯಾಗಿ ಯುವ ಧ್ವನಿಯನ್ನು ಹತ್ತಿಕ್ಕುವ ಕಾರ್ಯಕ್ಕೆ ಮುಂದಾಗಿದೆ. ಅದರ ಭಾಗವಾಗಿ ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್‌ನಲ್ಲಿ ಪ್ರಕಟವಾದ

### ಪಾಕ್ ಯುವ ಸಮುದಾಯದಲ್ಲಿ ಅಸಮಾಧಾನ

**Gen Z ಮತ್ತು ಜನರೇಷನ್ ಆಲ್ಫಾ ದೃಷ್ಟಿಕೋನದಿಂದ ಬರೆಯುತ್ತಾ, ಅಧಿಕಾರದಲ್ಲಿರುವವರು ಮುಂದಿಟ್ಟ ದೇಶಭಕ್ತಿಯನ್ನು ಒತ್ತಾಯದಿಂದ ಹೇರಿದ ನಿರೂಪಣೆ ಎಂದು ಕರೆದಿರುವ ಜೊರೈನ್ ನಿಜಾಮಾನಿ, ಅಂತಹ ಪ್ರಯತ್ನಗಳು ಇನ್ನು ಮುಂದೆ ಯುವ ಪಾಕಿಸ್ತಾನಿಗಳಿಗೆ ಅನುರಣಿಸುವುದಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಯುವ ಮನಸ್ಸುಗಳು ದೇಶದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನಿಖರವಾಗಿ ಗುರುತಿಸಿದ್ದು, ಸರ್ಕಾರ ಮತ್ತು ಸೇನೆಯ ಮಾತಿಗೆ ಮರುಳಾಗುವುದಿಲ್ಲ ಎಂದು ತಮ್ಮ ಲೇಖನದ ಮೂಲಕ ನಿಜಾಮಾನಿ ಎಚ್ಚರಿಕೆ ನೀಡಿದ್ದಾರೆ.**

ಲೇಖನವನ್ನು ಪಾಕಿಸ್ತಾನ ಮಿಲಿಟರಿಯು ತೆಗೆಸಿದೆ. ಜೊರೈನ್ ನಿಜಾಮಾನಿ ಲೇಖನವನ್ನು ಹಿಂಪಡೆಯುವಂತೆ, ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಮೇಲೆ ಪಾಕಿಸ್ತಾನದ ಮಿಲಿಟರಿ ಒತ್ತಡ ಹೇರದೆ ಎಂದು ಮೂಲಗಳು ಖಚಿತಪಡಿಸಿವೆ.

**ಇಟ್ಸ್ ಓವರ್:** ಶೆಹಬಾಜ್ ಷರೀಫ್ ಅವರು ಪಾಕಿಸ್ತಾನದ ಪ್ರಧಾನಿಯಾಗಿದ್ದರೂ, ವಾಸ್ತವವಾಗಿ ಎಲ್ಲಾ ಅಧಿಕಾರವನ್ನು ಸೇನಾಧ್ಯಕ್ಷ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ಚಲಾಯಿಸುತ್ತಿದ್ದಾರೆ. ಆದರೆ ದೇಶದ ಯುವ ಸಮುದಾಯದಲ್ಲಿ ಇವರಿಬ್ಬರ ಆಡಳಿತದ ವಿರುದ್ಧ ತೀವ್ರ ಅಸಮಾಧಾನ ಭುಗಿಲೆದ್ದಿದೆ. ಶೀಘ್ರದಲ್ಲೇ ಪಾಕಿಸ್ತಾನದಲ್ಲಿ ಶಾಂತ ದಂಗೆಯೊಂದು ಸಿಡಿಯಲಿದೆ ಎಂದು ಜೊರೈನ್ ನಿಜಾಮಾನಿ ತಮ್ಮ ಇಟ್ಸ್ ಓವರ್ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.


ಪಾಕಿಸ್ತಾನದ ಆಡಳಿತ ಸ್ಥಾಪನೆಯನ್ನು ಬೂಮರ್‌ಗಳು ಎಂದು ಕರೆದಿರುವ ಜೊರೈನ್ ನಿಜಾಮಾನಿ, ತಮ್ಮ ಲೇಖನದಲ್ಲಿ ಸರ್ಕಾರ ಮತ್ತು Gen Z ಸಮುದಾಯದ ನಡುವೆ ವಿಸ್ತರಿಸುತ್ತಿರುವ ವಿಭಜನೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಅಲ್ಲದೇ ಸೇನೆ ಮತ್ತು ಸರ್ಕಾರದ ವತಿಯಿಂದ ನೈಜವಲ್ಲದ ದೇಶಭಕ್ತಿ ಮಾರಾಟ ಮಾಡಲಾಗುತ್ತಿದ್ದು, ಅದನ್ನು ಖರೀದಿಸಲು Gen Z ಉತ್ಸುಕವಾಗಿಲ್ಲ ಎಂದು ನಿಜಾಮಾನಿ ಹೇಳಿದ್ದಾರೆ. ಇತ್ತೀಚಿಗೆ ಪಾಕ್ ಸೇನೆಯು ಅಸಿಮ್ ಮುನೀರ್ ಕಂಡರೆ ಪ್ರಧಾನಿ ಮೋದಿ ಅವರಿಗೆ ಭಯ ಎಂಬ ಸುಳ್ಳು ನಿರೂಪಣೆ ಹರಡಿತ್ತು.

ದೇಶಭಕ್ತಿಯನ್ನು ಉತ್ತೇಜಿಸಲು ನೀವು ಶಾಲೆಗಳು ಮತ್ತು ಕಾಲೇಜುಗಳಲ್ಲಿ ಎಷ್ಟೇ ಭಾಷಣಗಳು ಮತ್ತು ವಿಚಾರ ಸಂಕಿರಣ ಏರ್ಪಡಿಸಿದರೂ ಅದು ಕೆಲಸ ಮಾಡುತ್ತಿಲ್ಲ. ದೇಶಭಕ್ತಿಯ ಹೆಸರಿನಲ್ಲಿ ನೀವು ನಿಮ್ಮ ಜೇಬು ತುಂಬಿಸಿಕೊಳ್ಳುತ್ತಿದ್ದೀರಿ ಎಂಬ ಸಂಗತಿಯನ್ನು Gen Z ಸಮುದಾಯ ಅರಿತುಕೊಂಡಿದೆ.

ವವಸ್ಥೆಯ ಸುಳ್ಳುಗಳು ಇನ್ನು ಬಹಳ ದಿನಗಳ ಕಾಲ ನಡೆಯುವುದಿಲ್ಲ. ಶೀಘ್ರದಲ್ಲೇ ಪಾಕಿಸ್ತಾನದಲ್ಲಿ ಶಾಂತ ದಂಗೆಯೊಂದು ಸಿಡಿಯಲಿದೆ ಎಂದು ಜೊರೈನ್ ನಿಜಾಮಾನಿ ತಮ್ಮ ಲೇಖನದಲ್ಲಿ ಕಿಡಿಕಾರಿದ್ದಾರೆ. ಜನಸಾಮಾನ್ಯರನ್ನು ಸಾಧ್ಯವಾದಷ್ಟು ಅನಕ್ಷರಸ್ಥರನ್ನಾಗಿ ಮಾಡಲು ನೀವು ಮಾಡಿದ ಅತ್ಯುತ್ತಮ ಪ್ರಯತ್ನಗಳ ಹೊರತಾಗಿಯೂ, ಸಮಾಜ ನಿಮ್ಮ ದುಷ್ಟ ಯೋಜನೆಗಳನ್ನು ವಿಫಲಗೊಳಿಸಿದೆ. ದೇಶಕ್ಕೆ ಯಾವುದು ಒಳಿತು ಎಂಬುದನ್ನು ಅರಿತುಕೊಂಡಿರುವ ಯುವ ಸಮುದಾಯ, ಆ ಒಳಿತನ್ನು ಸ್ಥಾಪಿಸಲು ಶೀಘ್ರದಲ್ಲೇ ಬೀದಿಗಿಳಿಯಲಿದ್ದಾರೆ. ಬಲವಂತದ ದೇಶಭಕ್ತಿ, ಭಾಷಣಗಳು ಮತ್ತು ವಿಚಾರ ಸಂಕಿರಣಗಳು ನ್ಯಾಯ, ಅವಕಾಶ ಮತ್ತು ಮೂಲಭೂತ ಹಕ್ಕುಗಳನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ನಿಜಾಮಾನಿ ಗುಡುಗಿದ್ದಾರೆ. ಜೊರೈನ್ ನಿಜಾಮಾನಿ ಲೇಖನ ತಮ್ಮ ಕುರ್ಚಿಯನ್ನು ಅಲುಗಾಡಿಸಬಹುದು ಎಂಬ ಭಯದಲ್ಲಿ, ಸರ್ಕಾರ ಮತ್ತು ಸೇನೆ, ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಮೇಲೆ ಒತ್ತಡ ಹೇರಿ ಈ ಲೇಖನವನ್ನು ಅಳಿಸಿ ಹಾಕಿದೆ. ಆದರೆ ಈ ಲೇಖನಕ್ಕೆ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಅನುಯಾಯಿಗಳಿಂದ ಭಾರೀ ಬೆಂಬಲ ವ್ಯಕ್ತವಾಗಿದ್ದು, ಇದನ್ನು ತಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಲಾರಂಭಿಸಿದ್ದಾರೆ.




- ಆಪರೇಷನ್ ಸಿಂಧೂರ ಮಿನಿ ಯುದ್ಧದಲ್ಲಿ ಪಾಕಿಸ್ತಾನವೇ ಗೆದ್ದಿದ್ದು, ಎಂದು ಪುನರುಚ್ಚರಿಸಿದ ಪಾಕ್ ರಕ್ಷಣಾ ಸಚಿವ
- ಈ ಯುದ್ಧದ ಬಳಿಕ ತಮ್ಮ ಯುದ್ಧವಿಮಾನಗಳ ಬೇಡಿಕೆ ಹೆಚ್ಚಾಗಿದ್ದು, 6 ತಿಂಗಳ ನಂತರ ನಮಗೆ Gen Z ಅವಶ್ಯಕತೆ ಇಲ್ಲ ಎಂದು ಹೇಳಿಕೆ




## ಕ್ಲೈಮ್ಯಾಕ್ಸ್ ಬಗ್ಗೆ ಅಸಮಾಧಾನ

'ಕಾಂತಾರ: ಚಾಪ್ಟರ್ 1' ಸಿನಿಮಾಲ್ಲಿ ರಿಷಬ್ ಶೆಟ್ಟಿ ಪಾತ್ರ ಬಹಳ ಪ್ರಧಾನವಾದುದಾಗಿತ್ತು. ಸಿನಿಮಾದ ವಿಲನ್ ಪಾತ್ರದಲ್ಲಿ ರುಕ್ಮಿಣಿ ವಸಂತ್ ಅದ್ಭುತವಾಗಿ ನಟಿಸಿದ್ದರು. ಆದರೆ ಅವರು ವಿಲನ್ ಆಗಿ ಬದಲಾಗುವುದು ಸಿನಿಮಾದ ಕ್ಲೈಮ್ಯಾಕ್ಸ್‌ನಲ್ಲಿ ಮಾತ್ರ. ಆದರೆ ಸಿನಿಮಾದ ಆರಂಭದಿಂದಲೂ ನಾಯಕನಿಗೆ ಎದುರಾಗಿ ನಿಂತಿರುವ ಪಾತ್ರವೆಂದರೆ ಅದು ಕುಲಶೇಖರನದ್ದು.

ಆದರೆ ಸಿನಿಮಾದ ಕ್ಲೈಮ್ಯಾಕ್ಸ್ ಬಗ್ಗೆಕುಲಶೇಖರ ಪಾತ್ರಧಾರಿ ಗುಲ್ಷನ್ ದೇವಯ್ಯಗೆ ಇದೆಯೇ ಅಸಮಾಧಾನ. ರಿಷಬ್ ಶೆಟ್ಟಿ ನಟಿಸಿ ನಿರ್ದೇಶನ ಮಾಡಿರುವ 'ಕಾಂತಾರ: ಚಾಪ್ಟರ್ 1' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಭಾರಿ ದೊಡ್ಡ ಹಿಟ್ ಆಗಿದೆ. ಭಾಷೆ, ಗಡಿಯ ಹಂಗಿಲ್ಲದೇ ದೇಶದಾದ್ಯಂತ ಬಹುತೇಕ ಬಿಡುಗಡೆ ಆದ ಎಲ್ಲಾ ರಾಜ್ಯಗಳಲ್ಲಿಯೂ 'ಕಾಂತಾರ: ಚಾಪ್ಟರ್ 1' ಸಿನಿಮಾ ಹಿಟ್ ಎನಿಸಿಕೊಂಡಿದೆ. 2022ರ 'ಕಾಂತಾರ'ಕ್ಕೆ ಹೋಲಿಸಿದರೆ ಭಾರಿ ಬಜೆಟ್, ದೊಡ್ಡ ತಂಡದ ನೆರವಿನೊಂದಿಗೆ ಹಲವು ಜನಪ್ರಿಯ ನಟರನ್ನು ಒಳಗಾಗಿಸಿಕೊಂಡು ಸಿನಿಮಾವನ್ನು ನಿರ್ದೇಶಕ ರಿಷಬ್ ಶೆಟ್ಟಿ ಕಟ್ಟಿದ್ದರು. ಸಿನಿಮಾ ನೋಡಿದ ಬಹುತೇಕರು ಉಫ್ ಎಂದಿದ್ದಾರೆ. ಆದರೆ ಸಿನಿಮಾದ ಮುಖ್ಯ ಪಾತ್ರ ಒಂದರಲ್ಲಿ ನಟಿಸಿದ ಕಲಾವಿದರೊಬ್ಬರಿಗೆ 'ಕಾಂತಾರ: ಚಾಪ್ಟರ್ 1' ಕ್ಲೈಮ್ಯಾಕ್ಸ್ ಬಗ್ಗೆ ಸಣ್ಣ ಅಸಮಾಧಾನ ಇದೆಯೇ ಎಂಬ ಅನುಮಾನ ಇದೀಗ ಮೂಡಿದೆ. ಸಿನಿಮಾಲ್ಲಿ ರಿಷಬ್ ಪಾತ್ರ ಬಹಳ ಪ್ರಧಾನವಾದುದಾಗಿತ್ತು. ಸಿನಿಮಾದ ವಿಲನ್ ಪಾತ್ರದಲ್ಲಿ ರುಕ್ಮಿಣಿ ವಸಂತ್ ಅದ್ಭುತವಾಗಿ ನಟಿಸಿದ್ದರು.






## ಕೆಟ್ಟದಾಗಿ ಹಾಡಿ ಟ್ರೋಲ್ ಆದ ಮಮಿತಾ

ನಟಿ ಮಮಿತಾ ಬೈಜು 'ಜನ ನಾಯಗನ್' ಹಾಡು ಬಿಡುಗಡೆ ಸಮಾರಂಭದಲ್ಲಿ 'ಎಲ್ಲಾ ಪುಗಳುಮ್' ಗೀತೆ ಹಾಡಿದ್ದು ಭಾರಿ ಟ್ರೋಲ್‌ಗೆ ಒಳಗಾಗಿದೆ. ಅವರ ಗಾಯನ ಶೈಲಿ ಮತ್ತು ವಿಜಯ್ ಅವರ ಪ್ರತಿಕ್ರಿಯೆ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದು, ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

ಸದ್ಯಕ್ಕೆ 'ಜನ ನಾಯಗನ್' ಸಿನಿಮಾ ರಿಲೀಸ್ ಕೂಡ ಸೆನ್ಸಾರ್ ಸಮಸ್ಯೆಯಿಂದ ಮುಂದಕ್ಕೆ ಹೋಗಿದೆ. ಮಲಯಾಳಂ ನಟಿ ಮಮಿತಾ ಬೈಜು ಬಗ್ಗೆ ಹೊಸದಾಗಿ ಹೇಳಬೇಕಾಗಿಲ್ಲ. ಅವರು 'ಪ್ರೇಮುಲು' ಚಿತ್ರದ ಮೂಲಕ ಅಪಾರ ಜನಪ್ರಿಯತೆ ಪಡೆದುಕೊಂಡಿದ್ದು ಗೊತ್ತೇ ಇದೆ. ಈಗ ಅವರು 'ಜನ ನಾಯಗನ್' ಸಿನಿಮಾದಲ್ಲಿ ವಿಜಯ್ ಅವರ ಸಾಕು ಮಗಳ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಹಾಡಿನ ಸಾಂಗ್ ರಿಲೀಸ್ ಕಾರ್ಯಕ್ರಮದಲ್ಲಿ ಅವರು ಹಾಡಿದ್ದು, ಇದನ್ನು ಟ್ರೋಲ್ ಮಾಡಲಾಗುತ್ತಿದೆ. ಸೋಶಿಯಲ್ ಮೀಡಿಯಾದಲ್ಲಿ ಈ ಬಗ್ಗೆ ಚರ್ಚೆ ನಡೆದಿದೆ. ಮಮಿತಾ ಅವರು ತಮ್ಮ ಗ್ಲಾಮರ್ ಮೂಲಕ ಗಮನ ಸೆಳೆದವರು. ನಟನೆಯನ್ನು ಕೂಡ ಉತ್ತಮವಾಗಿ ಅವರು ಮಾಡುತ್ತಾರೆ. ಇದಕ್ಕಾಗಿಯೇ ವಿಜಯ್ ಸಿನಿಮಾದಲ್ಲಿ ಆಫರ್ ಸಿಕ್ಕಿತು. ಅವರು ಹಲವು ದಿನ ಸಿನಿಮಾ ಶೂಟ್ ಮಾಡಿದರು ಮತ್ತು ವಿಜಯ್ ಜೊತೆ ಒಳ್ಳೆಯ ಬಾಂಧವ್ಯ ಬೆಳೆಸಿಕೊಂಡರು.

## ಅಲೆಗಳ ವಿರುದ್ಧ ಹೋಗಲು ಸಮಯ ಬೇಕು
# ಟಾಕ್ಸಿಕ್ ಟೀಸರ್‌ಗೆ ಸುದೀಪ್ ವಿಶ್



ಯಶ್ ಅವರ 'ಟಾಕ್ಸಿಕ್' ಟೀಸರ್ ಬಿಡುಗಡೆಯಾದ ಹಿನ್ನೆಲೆಯಲ್ಲಿ ಸುದೀಪ್ ಶುಭಾಶಯ ಕೋರಿದ್ದಾರೆ. ಇದು ಕನ್ನಡ ಚಿತ್ರರಂಗದಲ್ಲಿ ಸ್ಟಾರ್‌ಗಳ ನಡುವೆ ಐಕ್ಯತೆ ಇಲ್ಲ ಎಂಬ ಮಾತಿಗೆ ಭಿನ್ನವಾಗಿ, ಸಕಾರಾತ್ಮಕ ಬೆಳವಣಿಗೆಯಾಗಿದೆ. ಯಶ್ ಜನ್ಮದಿನದಂದು ರಿಲೀಸ್ ಆಗಿರುವ ಟೀಸರ್ 'ಬೋಲ್ಡ್' ಎನ್ನುವ ಟೀಕೆಗಳಿಗೂ ಸುದೀಪ್ ಪ್ರತ್ಯುತ್ತರ ನೀಡಿದ್ದಾರೆ ಎನ್ನಲಾಗುತ್ತಿದೆ. ಕನ್ನಡ ಚಿತ್ರರಂಗದಲ್ಲಿ ಸ್ಟಾರ್‌ಗಳ ಮಧ್ಯೆ ಯಾವುದೂ ಸರಿ ಇಲ್ಲ, ಒಬ್ಬರಿಗೊಬ್ಬರು ಬೆಂಬಲ ಕೊಡೋದಿಲ್ಲ ಎಂಬಿತ್ಯಾದಿ ಮಾತುಗಳು ಆಗಾಗ ಕೇಳಿ ಬರುತ್ತಾ ಇರುತ್ತವೆ. ಈಗ ಕನ್ನಡ ಚಿತ್ರರಂಗದಲ್ಲಿ ಅಚ್ಚರಿಯ ಬೆಳವಣಿಗೆ ನಡೆದಿದೆ. 'ಟಾಕ್ಸಿಕ್' ಸಿನಿಮಾದ ಟೀಸರ್ ನೋಡಿದ ಸುದೀಪ್ ಅವರು ಯಶ್‌ಗೆ ವಿಶ್ ಮಾಡಿದ್ದಾರೆ. 'ಟಾಕ್ಸಿಕ್' ಟೀಸರ್ ಬೋಲ್ಡ್ ಎಂದವರಿಗೂ ಅವರ ಬಳಿ ಉತ್ತರವಿದೆ. ಈ ಬೆಳವಣಿಗೆ ಸ್ಯಾಂಡಲ್‌ವುಡ್ ಪಾಲಿಗೆ ಪಾಸಿಟಿವ್ ಎಂಬ ಮಾತುಗಳು ಕೇಳಿ ಬಂದಿವೆ. ಯಶ್ ಜನ್ಮದಿನ. ಈ ವಿಶೇಷ ದಿನದಂದು 'ಟಾಕ್ಸಿಕ್' ಚಿತ್ರದ ಟೀಸರ್ ರಿಲೀಸ್ ಆಗಿದೆ. ಈ ಟೀಸರ್ ಬಗ್ಗೆ ಮಾಹಿತಿ ನೀಡಲು ಯಶ್ ಟ್ವಿಟ್ ಮಾಡಿದ್ದರು. ರಾಯ ಅನ್ನೋದು ಯಶ್ ಮಾಡುತ್ತಿರುವ ಪಾತ್ರದ ಹೆಸರು. ಪಾತ್ರವನ್ನು ಪರಿಚಯಿಸುವ ರೀತಿಯಲ್ಲಿ ಈ ಟೀಸರ್ ಇದೆ. ಈ ಟೀಸರ್ ಬಗ್ಗೆ ಯಶ್ ಮಾಡಿದ ಟ್ವೀಟ್‌ನ ಸುದೀಪ್ ರೀಟ್ವೀಟ್ ಮಾಡಿಕೊಂಡಿದ್ದಾರೆ. 'ಯಶ್‌ಗೆ ಶುಭಾಶಯಗಳು. ಅಲೆಗಳ ವಿರುದ್ಧ ಸಾಗಲು ಯಾವಾಗಲೂ ಸಮಯ ಬೇಕಾಗುತ್ತದೆ.ಈ ಹೊಸ ಹೆಜ್ಜೆ ನಿಮ್ಮನ್ನು ಅದೃಷ್ಟದ ಬಳಿ ಕೊಂಡೊಯ್ಯಲಿ. ನೀವು ನಿಮ್ಮ ಗುರಿಯನ್ನು ನಿರ್ಧರಿಸಿದ್ದೀರಿ' ಎಂದು ಸುದೀಪ್ ಹೇಳಿದ್ದಾರೆ. ಈ ಟ್ವೀಟ್ ಸಾಕಷ್ಟು ವೈರಲ್ ಆಗುತ್ತಿದೆ. ಫ್ಯಾನ್ಸ್ ಅಚ್ಚರಿ ಹೊರಹಾಕಿದ್ದಾರೆ.

## ಹೊಸ ಹಾಲಿವುಡ್ ಸಿನಿಮಾನಲ್ಲಿ ಪ್ರಿಯಾಂಕಾ

ಇತ್ತೀಚೆಗಿನ ವರ್ಷಗಳಲ್ಲಿ ಪ್ರಿಯಾಂಕಾ ಚೋಪ್ರಾ ಅವರಿಗೆ ಹಾಲಿವುಡ್‌ನಲ್ಲಿ ಪ್ರಮುಖ ನಾಯಕಿಯ ಪಾತ್ರಗಳು ಅದರಲ್ಲೂ ಆಕ್ಷನ್ ನಾಯಕಿಯ ಪಾತ್ರಗಳೇ ಹೆಚ್ಚಾಗಿ ಸಿಗುತ್ತಿವೆ. ಸಿನಿಮಾಗಳು ಯಶಸ್ವಿಯೂ ಆಗುತ್ತಿವೆ. ಇದೀಗ ಪ್ರಿಯಾಂಕಾ ಮುಖ್ಯ ಪಾತ್ರದಲ್ಲಿ ನಟಿಸಿರುವ ಮತ್ತೊಂದು ಆಕ್ಷನ್ ಸಿನಿಮಾ ಬಿಡುಗಡೆಗೆ ರೆಡಿಯಾಗಿದ್ದು, ಪೋಸ್ಟರ್ ಬಿಡುಗಡೆ ಆಗಿದೆ. ಪ್ರಿಯಾಂಕಾ ಚೋಪ್ರಾ ಭಾರತದ ನಟಿಯಾದರೂ ಮಿಂಚುತ್ತಿರುವುದು ಹಾಲಿವುಡ್‌ನಲ್ಲಿ. 2017 ರಲ್ಲಿ ಹಾಲಿವುಡ್‌ಗೆ ಎಂಟ್ರಿ ಕೊಟ್ಟ ಪ್ರಿಯಾಂಕಾ ಆರಂಭದಲ್ಲಿ ಅಷ್ಟೇನೂ ಪ್ರಾಮುಖ್ಯತೆ ಇಲ್ಲದ ಕೆಲವು ಪಾತ್ರಗಳಲ್ಲಿ ನಟಿಸಿದರಾದರೂ ವರ್ಷಗಳು ಕಳೆದಂತೆ ತಮ್ಮನ್ನು ತಾವು ಹಾಲಿವುಡ್‌ನಲ್ಲಿ ಗಟ್ಟಿಯಾಗಿ ನೆಲೆಗೊಳಿಸಿಕೊಂಡಿದ್ದಾರೆ. ಇತ್ತೀಚೆಗಿನ ವರ್ಷಗಳಲ್ಲಿ ಪ್ರಿಯಾಂಕಾ ಚೋಪ್ರಾ ಅವರಿಗೆ ಪ್ರಮುಖ ನಾಯಕಿಯ ಪಾತ್ರಗಳು ಅದರಲ್ಲೂ ಆಕ್ಷನ್ ನಾಯಕಿಯ ಪಾತ್ರಗಳೇ ಹೆಚ್ಚಾಗಿ ಸಿಗುತ್ತಿವೆ. ಸಿನಿಮಾಗಳು ಯಶಸ್ವಿಯೂ ಆಗುತ್ತಿವೆ. ಇದೀಗ ಪ್ರಿಯಾಂಕಾ ಮುಖ್ಯ ಪಾತ್ರದಲ್ಲಿ ನಟಿಸಿರುವ ಮತ್ತೊಂದು ಆಕ್ಷನ್ ಸಿನಿಮಾ ಬಿಡುಗಡೆಗೆ ರೆಡಿಯಾಗಿದ್ದು, ಪೋಸ್ಟರ್ ಬಿಡುಗಡೆ ಆಗಿದೆ. ಪ್ರಿಯಾಂಕಾ ಚೋಪ್ರಾ 'ದಿ ಬ್ಲಫ್' ಹೆಸರಿನ ಆಕ್ಷನ್ ಜಾನರ್‌ನ ಹಾಲಿವುಡ್ ಸಿನಿಮಾನಲ್ಲಿ ನಟಿಸಿದ್ದಾರೆ. 'ದಿ ಬ್ಲಫ್' ಸಿನಿಮಾನಲ್ಲಿ ಪ್ರಿಯಾಂಕಾ ಅವರದ್ದು ನಾಯಕಿಯ ಪಾತ್ರ, ಸಿನಿಮಾದ ಪ್ರಧಾನ ಪಾತ್ರವೂ ಅವರದ್ದೆ. ಸಿನಿಮಾನಲ್ಲಿ ಪೈರೇಟ್ (ಕಡಲ್ಗಳ್ಳ) ಪಾತ್ರದಲ್ಲಿ ಪ್ರಿಯಾಂಕಾ ನಟಿಸಿದ್ದಾರೆ. ತಾಯಿಯಾಗಿ ತನ್ನ ಮಗುವನ್ನು ಕಾಪಾಡಿಕೊಳ್ಳುವ ಪೈರೇಟ್ ಪಾತ್ರ ಪ್ರಿಯಾಂಕಾ ಚೋಪ್ರಾ ಅವರದ್ದು.

## ಬಯೋಪಿಕ್‌ನಲ್ಲಿ ರಕ್ಷಿತ್ ಶೆಟ್ಟಿ



ಮುಂಬರುವ ಹಲವಾರು ಯೋಜನೆಗಳಲ್ಲಿ ರಕ್ಷಿತ್ ಬ್ಯುಸಿಯಾಗಿದ್ದು, 'ರಿಚರ್ಡ್ ಆ್ಯಂಟೋನಿ, ಪುಣ್ಯಕೋಟಿ ಮತ್ತು ಮಿಡ್‌ವೇ ಟು ಮೋಕ್ಷನಂತಹ ಚಿತ್ರಗಳು ಶೀಘ್ರದಲ್ಲೇ ನಿರ್ಮಾಣವನ್ನು ಪ್ರಾರಂಭಿಸುವ ನಿರೀಕ್ಷೆಯಿದೆ.

ಸಪ್ತ ಸಾಗರದಾಚೆ ಎಲ್ಲೋ ಸೈಡ್ ಎ ಮತ್ತು ಬಿ ರಿಲೀಸ್ ಆದ ನಂತರ ಕಣ್ಮರೆಯಾಗಿರುವ ನಟ ರಕ್ಷಿತ್ ಶೆಟ್ಟಿ ಅವರು ತಮ್ಮ ಮುಂದಿನ ಬಹುನಿರೀಕ್ಷಿತ ರಿಚರ್ಡ್ ಆ್ಯಂಟೋನಿ ಚಿತ್ರೀಕರಣವನ್ನು ಯಾವಾಗ ಪ್ರಾರಂಭಿಸುತ್ತಾರೆ ಎಂದು ಅಭಿಮಾನಿಗಳು ಕಾಯುತ್ತಿದ್ದಾರೆ. ಈ ಬೆನ್ನಲ್ಲೇ ಹೊಸ ಮತ್ತು ಕುತೂಹಲಕಾರಿ ಪಾತ್ರದಲ್ಲಿ ನಟ ಕಾಣಿಕೊಳ್ಳಲಿದ್ದಾರೆ ಎನ್ನುವ ಸುದ್ದಿಗಳು ಚಂದನವನದ ಅಂಗಳದಲ್ಲಿ ಹರಿದಾಡುತ್ತಿವೆ. ಸ್ಪರ್ಶ ಮಸಾಲಾ ಬ್ರ್ಯಾಂಡ್‌ನ ಸ್ಥಾಪಕರಾಗಿ ಯಶಸ್ವಿಯಾದ ಮಾಜಿ ಸೈನಿಕ ಶಿವಕುಮಾರಯ್ಯ ಪ್ರೇರಿತ ಬಯೋಪಿಕ್‌ಗಾಗಿ ರಕ್ಷಿತ್ ಅವರನ್ನು ಸಂಪರ್ಕಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇನ್ನೂ ಅಧಿಕೃತವಾಗಿ ದೃಢೀಕರಣವಿಲ್ಲದಿದ್ದರೂ, ಈ ಮಾತುಕತೆ ಈಗಾಗಲೇ ಉದ್ಯಮದ ಒಳಗಿನವರ ಗಮನ ಸೆಳೆದಿದೆ.

ಶಿವಕುಮಾರಯ್ಯ ಕಾರ್ಗಿಲ್ ಯುದ್ಧದಲ್ಲಿ ಸೇವೆ ಸಲ್ಲಿಸಿದರು. ನಂತರ ನಾಗರಿಕ ಜೀವನಕ್ಕೆ ಮರಳಿದರು. ಉದ್ಯಮಿಯಾಗಿ ಕಷ್ಟಪಟ್ಟರು ಮತ್ತು ಅಂತಿಮವಾಗಿ ಹಲವಾರು ಕೋಟಿ ಮೌಲ್ಯದ ವ್ಯವಹಾರವನ್ನು ಕಟ್ಟುವಲ್ಲಿ ಯಶಸ್ವಿಯಾದರು ಎಂದು ಹೇಳಲಾಗುತ್ತದೆ. ಈ ಚಿತ್ರವು, ಅವರ ಶಿಸ್ತು, ನಷ್ಟ, ಮಹತ್ವಾಕಾಂಕ್ಷೆ ಮತ್ತು ವೈಯಕ್ತಿಕ ಬೆಳವಣಿಗೆಯಿಂದ ಗುರುತಿಸಲ್ಪಟ್ಟ ಪ್ರಯಾಣವನ್ನು ಮತ್ತು ಮಿಲಿಟರಿಯಲ್ಲಿನ ಜೀವನವನ್ನು ತೆರೆಮೇಲೆ ತರಲಿದೆ.

# ಕರ್ನಾಟಕಕ್ಕೆ ಮುಳುವಾದ ಆರ್‌ಸಿಬಿ ಬಾಯ್ಸ್; ಟೂರ್ನಿಯಲ್ಲಿ ಮೊದಲ ಸೋಲು

ವಿಜಯ್ ಹಜಾರೆ ಟ್ರೋಫಿಯಲ್ಲಿ ಸತತ 6 ಗೆಲುವುಗಳ ನಂತರ ಕರ್ನಾಟಕ ತಂಡ ಮಧ್ಯಪ್ರದೇಶದ ವಿರುದ್ಧ ಮೊದಲ ಸೋಲು ಕಂಡಿತು. ನರೇಂದ್ರ ಮೋದಿ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಕರ್ನಾಟಕ 207 ರನ್‌ಗಳಿಗೆ ಆಲೌಟ್ ಆಗಿ, ಸುಲಭವಾಗಿ ಸೋಲೊಪ್ಪಿಕೊಂಡಿತು. ಮಧ್ಯಪ್ರದೇಶ 7 ವಿಕೆಟ್‌ಗಳ ಅಂತರದಿಂದ ಗೆದ್ದಿತು. ಆರ್‌ಸಿಬಿ ಆಟಗಾರರಾದ ಪಡಿಕ್ಕಲ್ ವೈಫಲ್ಯ ಮತ್ತು ವೆಂಕಟೇಶ್ ಅಯ್ಯರ್ ಪ್ರದರ್ಶನ ಸೋಲಿಗೆ ಪ್ರಮುಖ ಕಾರಣವಾಯಿತು.

ವಿಜಯ್ ಹಜಾರೆ ಟ್ರೋಫಿಯಲ್ಲಿ ಸತತ 6 ಪಂದ್ಯಗಳನ್ನು ಗೆದ್ದು ಎಲೈಟ್ ಎ ಗುಂಪಿನಲ್ಲಿ ಅಜೇಯ ತಂಡ ಎನಿಸಿಕೊಂಡಿದ್ದ ಕರ್ನಾಟಕ ಟೂರ್ನಿಯಲ್ಲಿ ಮೊದಲ ಸೋಲು ಅನುಭವಿಸಿದೆ. ನರೇಂದ್ರ ಮೋದಿ ಮೈದಾನದಲ್ಲಿ ನಡೆದ ಟೂರ್ನಿಯ ಎಲೈಟ್ ಎ ಗುಂಪಿನ ಕೊನೆಯ ಪಂದ್ಯದಲ್ಲಿ ಮಧ್ಯಪ್ರದೇಶ ತಂಡವನ್ನು ಎದುರಿಸಿದ್ದ ಕರ್ನಾಟಕ ತಂಡ 7 ವಿಕೆಟ್‌ಗಳ ಹೀನಾಯ ಸೋಲು ಅನುಭವಿಸಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ಮಧ್ಯಪ್ರದೇಶದ ಬೌಲಿಂಗ್ ಎದುರು ತತ್ತರಿಸಿತು. ಹೀಗಾಗಿ ತಂಡ ಟೂರ್ನಿಯಲ್ಲಿ ಇದೇ ಮೊದಲ ಬಾರಿಗೆ ಅತಿ ಕಡಿಮೆ ಮೊತ್ತ 207 ರನ್‌ಗಳಿಗೆ ಆಲೌಟ್ ಆಯಿತು. ಈ ಗುರಿ ಬೆನ್ನಟ್ಟಿದ ಮಧ್ಯಪ್ರದೇಶ ಕೇವಲ 3 ವಿಕೆಟ್ ಕಳೆದುಕೊಂಡು 24ನೇ ಓವರ್‌ನಲ್ಲಿಯೇ ಗೆಲುವಿನ ದಡ ಮುಟ್ಟಿತು. ಕರ್ನಾಟಕದ ಈ ಸೋಲಿನಲ್ಲಿ ಆರ್‌ಸಿಬಿ ತಂಡದಲ್ಲಿ ಆಡುವ ಆಟಗಾರರು ಪ್ರಮುಖ ಪಾತ್ರವಹಿಸಿದರು.



ವೆಂಕಟೇಶ್ ಅಯ್ಯರ್ ಅಜೇಯ ಅರ್ಧಶತಕ

**ಕರ್ನಾಟಕ ತಂಡಕ್ಕೆ ಮೊದಲ ಸೋಲು**

ಮೋದಿ ಮೈದಾನದಲ್ಲಿ ಈ ಹಿಂದೆ ಆಡಿದ್ದ ಎಲ್ಲಾ ಪಂದ್ಯಗಳನ್ನು ಗೆದ್ದುಕೊಂಡಿದ್ದ ಕರ್ನಾಟಕಕ್ಕೆ, ಈ ಪಂದ್ಯದಲ್ಲೂ ಸುಲಭ ಜಯ ಧಕ್ಕಲಿದೆ ಎಂದು ಎಲ್ಲರೂ ಭಾವಿಸಿದ್ದರು.

ಆದರೆ ಮಧ್ಯಪ್ರದೇಶದ ಬೌಲರ್‌ಗಳು ಇದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಎಂದಿನಂತೆ ಕರ್ನಾಟಕ ತಂಡಕ್ಕೆ ಆರಂಭಿಕರಿಬ್ಬರು ಮೊದಲ ವಿಕೆಟ್‌ಗೆ 77 ರನ್‌ಗಳ ಜೊತೆಯಾಟವನ್ನು ಒದಗಿಸಿಕೊಟ್ಟರು. ಆದರೆ ಈ ಜೋಡಿ ಬೇರ್ಪಟ್ಟ ಬಳಿಕ ತಂಡದ ಇನ್ನಿಂಗ್ಸ್ ಕುಸಿಯಿತು.

ಈ ಟೂರ್ನಿಯಲ್ಲಿ ಅತ್ಯದ್ಭುತ ಫಾರ್ಮ್‌ನಲ್ಲಿರುವ ದೇವದತ್ ಪಡಿಕ್ಕಲ್ ಈ ಪಂದ್ಯದಲ್ಲೂ ಉತ್ತಮ ಆರಂಭ ಪಡೆದುಕೊಂಡರು. ಆದರೆ ಅದನ್ನು ದೊಡ್ಡ ಇನ್ನಿಂಗ್ಸ್ ಆಗಿ ಪರಿವರ್ತಿಸುವಲ್ಲಿ ಎಡವಿದರು.

**5 ವಿಕೆಟ್ ಪಡೆದ ಶಿವಾಂಗ್**

ಪಡಿಕ್ಕಲ್ 35 ರನ್ ಬಾರಿಸಿ ಔಟಾದ ಬಳಿಕ ತಂಡದ ಇತರೆ ಬ್ಯಾಟ್ಸ್‌ಮನ್‌ಗಳು ಬಂದಷ್ಟೇ ವೇಗವಾಗಿ ಪೆವಿಲಿಯನ್ ಸೇರಿಕೊಂಡರು.

ಅನುಭವಿ ಕರುಣ್ ನಾಯರ್ ಕಳಪೆ ಪ್ರದರ್ಶನ ಈ ಪಂದ್ಯದಲ್ಲೂ ಮುಂದುವರೆಯಿತು. ಅವರು ಕೇವಲ 10 ರನ್‌ಗಳಿಗೆ ಇನ್ನಿಂಗ್ಸ್ ಮುಗಿಸಿದರು. ಶ್ರೀಜಿತ್, ಸ್ಮರಣ್ ಹಾಗೂ ಅಭಿನವ್ ಕೂಡ ಬೇಗನೆ ವಿಕೆಟ್ ಒಪ್ಪಿಸಿದರು. ಹೀಗಾಗಿ ತಂಡ ಒತ್ತಡಕ್ಕೊಳಗಾಗಿತು.

ತಂಡದ ಪರ ನಾಯಕ ಮಯಾಂಕ್ ಅತ್ಯಧಿಕ 49 ರನ್‌ಗಳ ಇನ್ನಿಂಗ್ಸ್ ಆಡಿದರೆ, ವಿದ್ಯಾದರ್ ಪಾಟೀಲ್ 34 ರನ್‌ಗಳ ಕಾಣಿಕೆ ನೀಡಿದರು. ಅಂತಿಮವಾಗಿ ತಂಡ 48 ನೇ ಓವರ್‌ನಲ್ಲಿ ತನ್ನೆಲ್ಲ ವಿಕೆಟ್ ಕಳೆದುಕೊಂಡು 207 ರನ್‌ಗಳಿಗೆ ತನ್ನ ಇನ್ನಿಂಗ್ಸ್ ಮುಗಿಸಿತು. ಮಧ್ಯಪ್ರದೇಶ ಪರ ಬೌಲಿಂಗ್‌ನಲ್ಲಿ ಮಿಂಚಿದ ಶಿವಾಂಗ್ ಕುಮಾರ್ 5 ವಿಕೆಟ್‌ಗಳ ಗೊಂಚಲು ಪಡೆದರು.

ಈ ಗುರಿ ಬೆನ್ನಟ್ಟಿದ ಮಧ್ಯಪ್ರದೇಶಕ್ಕೆ ಉತ್ತಮ ಆರಂಭ ಸಿಕ್ಕಿತು. ಮೊದಲ ವಿಕೆಟ್‌ಗೆ 78 ರನ್‌ಗಳ ಜೊತೆಯಾಟ ನಡೆಯಿತು. ಆರಂಭಿಕರಾದ ಯಶ್ ದುಬೆ 48 ರನ್ ಬಾರಿಸಿದರೆ, ಹಿಮಾಂಶು ಮಂತ್ರಿ 34 ರನ್ ಕಲೆಹಾಕಿದರು. ಆ ಬಳಿಕ ಬಂದ ವೆಂಕಟೇಶ್ ಅಯ್ಯರ್ ಅಜೇಯ 65 ರನ್ ಬಾರಿಸಿ ತಂಡದ ಗೆಲುವು ಖಚಿತಪಡಿಸಿದರು. ವೆಂಕಟೇಶ್ ಅಯ್ಯರ್ ಈ ಆವೃತ್ತಿಯ ಐಪಿಎಲ್‌ನಲ್ಲಿ ಆರ್‌ಸಿಬಿ ಪರ ಕಣಕ್ಕಿಳಿಯುತ್ತಿದ್ದು, ಅವರು ಫಾರ್ಮ್ ಕಂಡುಕೊಂಡಿರುವುದು ತಂಡಕ್ಕೆ ಶುಭ ಸೂಚಕವಾಗಿದೆ. ವೆಂಕಟೇಶ್ ಜೊತೆಗೆ ಆರ್‌ಸಿಬಿ ನಾಯಕ ರಜತ್ ಪಾಟಿದರ್ ಕೂಡ ಮಧ್ಯಪ್ರದೇಶ ತಂಡದಲ್ಲಿದ್ದರು. ಆದರೆ ಅವರಿಗೆ ಈ ಪಂದ್ಯದಲ್ಲಿ ಬ್ಯಾಟಿಂಗ್ ಮಾಡುವ ಅವಕಾಶ ಸಿಗಲಿಲ್ಲ. ಇನ್ನು ಈ ಪಂದ್ಯದಲ್ಲಿ ಸೋಲಿನ ಹೊರತಾಗಿಯೂ ಕರ್ನಾಟಕ ತಂಡ ಈ ಗುಂಪಿನಲ್ಲಿ ಅಗ್ರಸ್ಥಾನದಲ್ಲೇ ಮುಂದುವರೆದಿದ್ದು, ಕರ್ನಾಟಕವನ್ನು ಸೋಲಿಸಿದ ಮಧ್ಯಪ್ರದೇಶ 2ನೇ ಸ್ಥಾನವನ್ನು ಪಡೆದುಕೊಂಡಿದೆ.

## ಹ್ಯಾರಿ ಬ್ರೂಕ್‌ಗೆ 36 ಲಕ್ಷ ರೂ. ದಂಡ

ಆಸ್ಟ್ರೇಲಿಯಾ ವಿರುದ್ಧ ಆಶಸ್ ಸರಣಿ ಸೋತ ಬಳಿಕ ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್‌ಗೆ ಆಘಾತ ಎದುರಾಗಿದೆ. ನ್ಯೂಜಿಲೆಂಡ್ ಪ್ರವಾಸದಲ್ಲಿ ಬಾರ್ ಬೌನ್ಸರ್ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಅವರಿಗೆ 36 ಲಕ್ಷ ರೂ. ದಂಡ ವಿಧಿಸಲಾಗಿದೆ. ಈ ಘಟನೆಗಾಗಿ ಬ್ರೂಕ್ ಕ್ಷಮೆಯಾಚಿಸಿದ್ದು, ನಾಯಕತ್ವದಲ್ಲಿ ಮುಂದುವರಿಯಲಿದ್ದಾರೆ. ಇದೇ ರೀತಿ ಇಂಗ್ಲೆಂಡ್‌ನ ಇತರೆ ಆಟಗಾರರ ವಿರುದ್ಧವೂ ಮದ್ಯಪಾನದ ಆರೋಪಗಳು ಕೇಳಿಬಂದಿವೆ. ಆಸ್ಟ್ರೇಲಿಯಾ ಹಾಗೂ ಇಂಗ್ಲೆಂಡ್ ನಡುವೆ ನಡೆದ ಪ್ರತಿಷ್ಠಿತ ಆಶಸ್ ಸರಣಿಗೆ ತೆರೆ ಬಿದ್ದಿದೆ. ಆತಿಥೇಯ ಆಸ್ಟ್ರೇಲಿಯಾ ತಂಡ ಈ ಸರಣಿಯನ್ನು 4-1 ಅಂತರದಿಂದ ಗೆದ್ದುಕೊಂಡಿದೆ.

ಈ ಮೂಲಕ ಕಾಂಗರೂಗಳ ನಾಡಲ್ಲಿ ಆಶಸ್ ಸರಣಿ ಗೆಲ್ಲುವ ಇರಾದೆಯಲ್ಲಿದ್ದ ಇಂಗ್ಲೆಂಡ್ ಹೀನಾಯ ಸೋಲಿನೊಂದಿಗೆ ತವರಿಗೆ ಮರಳಲಿದೆ. ಇದೆಲ್ಲದರ ನಡುವೆ ಇಂಗ್ಲೆಂಡ್ ಏಕದಿನ ಹಾಗೂ ಟಿ20 ತಂಡದ ನಾಯಕ ಹ್ಯಾರಿ ಬ್ರೂಕ್‌ಗೆ ದಂಡದ ರೂಪದಲ್ಲಿ ಆಘಾತವೊಂದು ಎದುರಾಗಿದೆ. ಆಶಸ್ ಸರಣಿಯಲ್ಲಿ ಇಂಗ್ಲೆಂಡ್ ಪರ ಆಡಿದ್ದ ಸ್ಟಾರ್ ಆಟಗಾರ ಹ್ಯಾರಿ ಬ್ರೂಕ್, ಬಾರ್‌ನಲ್ಲಿ ಬೌನ್ಸರ್ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ತಪ್ಪಿತಸ್ಥರೆಂದು ಸಾಭೀತಾಗಿದ್ದು, ಅವರಿಗೆ ಬರೋಬ್ಬರಿ 36 ಲಕ್ಷ ರೂಗಳನ್ನು ದಂಡವಾಗಿ ವಿಧಿಸಲಾಗಿದೆ. ವಾಸ್ತವವಾಗಿ ಆಶಸ್‌ಗೂ ಮೊದಲು ನಡೆದಿದ್ದ ನ್ಯೂಜಿಲೆಂಡ್ ಪ್ರವಾಸದಲ್ಲಿ ಬ್ರೂಕ್, ಬಾರ್ ಬೌನ್ಸರ್ ಜೊತೆ ಜಗಳವಾಡಿದ್ದರು. ದಿ ಟೆಲಿಗ್ರಾಫ್ ಪ್ರಕಾರ, ವೆಲ್ಲಿಂಗ್ಟನ್‌ನಲ್ಲಿ ನಡೆದ ಮೂರನೇ ಏಕದಿನ ಪಂದ್ಯಕ್ಕೂ ಮುನ್ನ ಈ ಘಟನೆ ನಡೆದಿತ್ತು. ವಾಸ್ತವವಾಗಿ ಅತಿಯಾಗಿ ಮದ್ಯಪಾನ್ ಮಾಡಿದ್ದ ಹ್ಯಾರಿ ಬ್ರೂಕ್‌ಗೆ ನೈಟ್‌ಕ್ಲಬ್‌ಗೆ ಪ್ರವೇಶ ನಿರಾಕರಿಸಲಾಯಿತು. ಇದರಿಂದ ತಾಳ್ಮೆ ಕಳೆದುಕೊಂಡ ಬ್ರೂಕ್, ಬೌನ್ಸರ್ ಜೊತೆ ಜಗಳಕ್ಕಿಳಿದಿದ್ದರು. ಅಚ್ಚರಿಯೆಂದರೆ ಜಗಳ ಮಾಡಿದ್ದ ಬ್ರೂಕ್ ಅವರೇ ಈ ಘಟನೆಯ ಬಗ್ಗೆ ಇಂಗ್ಲೆಂಡ್ ತಂಡಕ್ಕೆ ವರದಿ ಮಾಡಿದ್ದರು. ಅದಾದ ಬಳಿಕ ಹ್ಯಾರಿ ಬ್ರೂಕ್ ವಿರುದ್ಧ ತನಿಖೆ ನಡೆಸಿದ್ದ ಇಂಗ್ಲೆಂಡ್ ಕ್ರಿಕೆಟ್ ಮಂಡಳಿಯು ತಪ್ಪಿತಸ್ಥರೆಂದು ಸಾಬೀತಾಗಿರುವ ಬ್ರೂಕ್ 3.6 ಮಿಲಿಯನ್‌ಗಿಂತ ಹೆಚ್ಚು ದಂಡವನ್ನು ವಿಧಿಸಿದೆ. ಆದರೂ ಅವರನ್ನು ಟಿ20 ಮತ್ತು ಏಕದಿನ ತಂಡಗಳ ನಾಯಕನಾಗಿ ಉಳಿಸಿಕೊಳ್ಳಲಾಗಿದೆ.



## ಬಾಬರ್ ವಿಶ್ವ ದಾಖಲೆ ಮುರಿದ
# ರುತುರಾಜ್ ಗಾಯಕ್ವಾಡ್

ರುತುರಾಜ್ ಗಾಯಕ್ವಾಡ್ ವಿಜಯ್ ಹಜಾರೆ ಟ್ರೋಫಿಯಲ್ಲಿ ಗೋವಾ ವಿರುದ್ಧ ಅದ್ಭುತ ಶತಕ ಗಳಿಸಿ ಮಹಾರಾಷ್ಟ್ರವನ್ನು ಸಂಕಷ್ಟದಿಂದ ಪಾರು ಮಾಡಿದರು. ಈ ಇನ್ನಿಂಗ್ಸ್ ಜೊತೆ ಲಿಸ್ಟ್ ಕ್ರಿಕೆಟ್‌ನಲ್ಲಿ 5000 ರನ್‌ಗಳನ್ನು ಪೂರೈಸಿದ ಅವರು, ಪಾಕಿಸ್ತಾನದ ಬಾಬರ್ ಅಜಮ್ ಅವರ ವಿಶ್ವ ದಾಖಲೆಯನ್ನು ಮುರಿದು ಇತಿಹಾಸ ಸೃಷ್ಟಿಸಿದರು. ಭಾರತ ತಂಡದಿಂದ ಹೊರಬಿದ್ದಿದ್ದ ರುತುರಾಜ್ ತಮ್ಮ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ. ಭಾರತ ಏಕದಿನ ತಂಡದಿಂದ ಹೊರಬಿದ್ದಿರುವ ಪ್ರತಿಭಾವಂತ ಬ್ಯಾಟ್ಸ್‌ಮನ್ ರುತುರಾಜ್ ಗಾಯಕ್ವಾಡ್ ದೇಶಿ ಟೂರ್ನಿ ವಿಜಯ್ ಹಜಾರೆ ಟ್ರೋಫಿಯಲ್ಲಿ ಮತ್ತೊಮ್ಮೆ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ನಾಯಕನಾಗಿ ಮಹಾರಾಷ್ಟ್ರ ತಂಡವನ್ನು ಮುನ್ನಡೆಸುತ್ತಿರುವ ರುತುರಾಜ್, ಗೋವಾ ವಿರುದ್ಧದ ಪಂದ್ಯದಲ್ಲಿ ಅದ್ಭುತ ಶತಕ ಬಾರಿಸಿದರು. ಈ ಪಂದ್ಯದಲ್ಲಿ ತಂಡದ ಇನ್ನಿಂಗ್ಸ್ ನಿಭಾಯಿಸಿದ್ದು ಮಾತ್ರವಲ್ಲದೆ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ರುತುರಾಜ್ ತಂಡವನ್ನು ಸಂಕಷ್ಟದಿಂದ ಹೊರತಂದರು. ಏಕೆಂದರೆ ಅರ್ಧದಷ್ಟು ತಂಡ ಕೇವಲ 52 ರನ್‌ಗಳಿಗೆ ಪೆವಿಲಿಯನ್ ಸೇರಿಕೊಂಡಿದ್ದ ಸಮಯದಲ್ಲಿ ಕಣಕ್ಕಿಳಿದ ರುತುರಾಜ್ ಶತಕ ಬಾರಿಸುವುದರೊಂದಿಗೆ ಮಹಾರಾಷ್ಟ್ರವನ್ನು ಗೌರವಾನ್ವಿತ ಸ್ಕೋರ್‌ಗೆ ಮುನ್ನಡೆಸಿದರು. ಇದರೊಂದಿಗೆ ಪಾಕ್ ಮಾಜಿ ನಾಯಕ ಬಾಬರ್ ಆಝಂ ಅವರ ವಿಶ್ವ ದಾಖಲೆಯನ್ನು ಮುರಿದರು. ಗೋವಾ ವಿರುದ್ಧ ರುತುರಾಜ್ ಗಾಯಕ್ವಾಡ್ 131 ಎಸೆತಗಳನ್ನು ಎದುರಿಸಿ 134 ರನ್‌ಗಳ ಇನ್ನಿಂಗ್ಸ್ ಆಡಿದರು. ಅವರ ಈ ಇನ್ನಿಂಗ್ಸ್‌ನಲ್ಲಿ 8 ಬೌಂಡರಿ ಮತ್ತು 6 ಸಿಕ್ಸರ್‌ಗಳು ಸೇರಿದ್ದವು. ವಿಜಯ್ ಹಜಾರೆ ಟ್ರೋಫಿಯ ಪ್ರಸ್ತುತ ಆವೃತ್ತಿಯ ಕೊನೆಯ 4 ಪಂದ್ಯಗಳಲ್ಲಿ ಇದು ಅವರ ಮೂರನೇ ಐವತ್ತು ಪ್ಲಸ್ ಸ್ಕೋರ್ ಆಗಿದೆ. ಇದಕ್ಕೂ ಮೊದಲು, ಕಳೆದ 3 ಇನ್ನಿಂಗ್ಸ್‌ಗಳಲ್ಲಿ, ಅವರು 124 ರನ್, 66 ರನ್ ಮತ್ತು 22 ರನ್ ಕಲೆಹಾಕಿದ್ದರು. ಇದು ರುತುರಾಜ್ ಅವರ ಲಿಸ್ಟ್ ಎ ವೃತ್ತಿಜೀವನದ 20 ನೇ ಶತಕವಾಗಿದ್ದು, ತಮ್ಮ ಲಿಸ್ಟ್ ಎ ವೃತ್ತಿಜೀವನದಲ್ಲಿ ಅರ್ಧಶತಕಗಳಿಗಿಂತ ಹೆಚ್ಚು ಶತಕಗಳನ್ನು ಬಾರಿಸಿರುವುದು ಅವರ ಉತ್ತಮ ಪ್ರದರ್ಶನಕ್ಕೆ ಹಿಡಿದ ಕೈಗನ್ನಡಿಯಾಗಿದೆ.




ಅದೃಷ್ಟ ಕೈ ಹಿಡಿಯುವುದೇ

# ಟಿ20 ವಿಶ್ವಕಪ್‌ಗೆ ಶ್ರೇಯಸ್ ಆಯ್ಕೆ

ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಆಯೋಜನೆ ಮಾಡಿರುವ ಟಿ20 ವಿಶ್ವಕಪ್ 2026 ರಲ್ಲಿ ಒಟ್ಟು 20 ತಂಡಗಳು ಕಣಕ್ಕಿಳಿಯಲಿವೆ. ಈ 20 ತಂಡಗಳನ್ನು ನಾಲ್ಕು ಗ್ರೂಪ್‌ಗಳಾಗಿ ವಿಂಗಡಿಸಲಾಗಿದೆ. ಗ್ರೂಪ್-1 ರಲ್ಲಿ ಸ್ಥಾನ ಪಡೆದಿರುವ ಭಾರತ ತಂಡದಿಂದ ಯುವ ಆಟಗಾರನೊರ್ವ ಹೊರಗುಳಿಯುವ ಸಾಧ್ಯತೆಯಿದೆ.

ಟಿ20 ವಿಶ್ವಕಪ್‌ಗೆ 15 ಸದಸ್ಯರುಗಳ ಭಾರತ ತಂಡವನ್ನು ಘೋಷಿಸಲಾಗಿದೆ. ಈ ತಂಡದಲ್ಲಿ ಸ್ಥಾನ ಪಡೆದಿದ್ದ ಟೀಮ್ ಇಂಡಿಯಾದ ಎಡಗೈ ದಾಂಡಿಗ ತಿಲಕ್ ವರ್ಮಾ ಗಾಯಗೊಂಡಿದ್ದಾರೆ.

ಈ ಗಾಯದ ಕಾರಣ ಅವರು ಮುಂಬರುವ ಟಿ20 ಸರಣಿಯಲ್ಲಿ ಕಾಣಿಸಿಕೊಳ್ಳುವುದು ಅನುಮಾನ. ಏಕೆಂದರೆ ತೊಡೆಸಂಧು ಗಾಯದ ಸಮಸ್ಯೆಗೆ ಒಳಗಾಗಿರುವ ತಿಲಕ್ ವರ್ಮಾ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಹೀಗಾಗಿ ನ್ಯೂಝಿಲೆಂಡ್ ವಿರುದ್ಧದ ಐದು ಪಂದ್ಯಗಳ ಸರಣಿಯ ಮೊದಲೆರಡು ಪಂದ್ಯಗಳಿಗೆ ಅಲಭ್ಯರಾಗಲಿರುವುದು ಖಚಿತವಾಗಿದೆ. ಆ ಬಳಿಕ ಸಂಪೂರ್ಣ ಫಿಟ್‌ನೆಸ್ ಸಾಧಿಸಿದರೆ ಮಾತ್ರ ಅವರು ನ್ಯೂಝಿಲೆಂಡ್ ವಿರುದ್ಧದ ಸರಣಿಯಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಒಂದು ವೇಳೆ ನ್ಯೂಝಿಲೆಂಡ್ ವಿರುದ್ಧದ ಸರಣಿಯಲ್ಲಿ ತಿಲಕ್ ವರ್ಮಾ ಕಣಕ್ಕಿಳಿಯದಿದ್ದರೆ ಅವರನ್ನು ಟಿ20 ವಿಶ್ವಕಪ್‌ನಿಂದ ಕೈ ಬಿಡುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಏಕೆಂದರೆ ಟಿ20 ವಿಶ್ವಕಪ್ ಶುರುವಾಗುವುದು ಫೆಬ್ರವರಿ 7 ರಿಂದ. ಅದರೊಳಗೆ ತಿಲಕ್ ವರ್ಮಾ ಸಂಪೂರ್ಣ ಫಿಟ್‌ನೆಸ್ ಸಾಧಿಸಬೇಕು. ಇತ್ತ ನ್ಯೂಝಿಲೆಂಡ್ ವಿರುದ್ಧದ ಸರಣಿ ವೇಳೆ ಅವರು ಫಿಟ್‌ನೆಸ್ ಸಾಧಿಸಲು ಸಾಧ್ಯವಾಗದೇ ಇದ್ದರೆ ಬಿಸಿಸಿಐ ಆಯ್ಕೆ ಸಮಿತಿ ಬದಲಿ ಆಟಗಾರನ ಮೊರೆ ಹೋಗಲಿದ್ದಾರೆ. ಹೀಗೆ ಬದಲಿ ಆಟಗಾರನಾಗಿ ಎಂಟ್ರಿ ಕೊಡಲು ಇತ್ತ ಶ್ರೇಯಸ್ ಅಯ್ಯರ್ ಸಜ್ಜಾಗಿದ್ದಾರೆ. ಶ್ರೇಯಸ್ ಅಯ್ಯರ್ ಮಧ್ಯಮ ಕ್ರಮಾಂಕದ ಬ್ಯಾಟರ್. ಈಗಾಗಲೇ ಟಿ20 ಕ್ರಿಕೆಟ್‌ನಲ್ಲಿ ಸ್ಫೋಟಕ ಬ್ಯಾಟಿಂಗ್ ಮೂಲಕ ಗಮನ ಸೆಳೆದಿದ್ದಾರೆ. ಹೀಗಾಗಿ ತಿಲಕ್ ವರ್ಮಾ ನ್ಯೂಝಿಲೆಂಡ್ ವಿರುದ್ಧದ ಸರಣಿಯಿಂದ ಸಂಪೂರ್ಣವಾಗಿ ಹೊರಗುಳಿದರೆ ಶ್ರೇಯಸ್ ಅಯ್ಯರ್‌ಗೆ ಚಾನ್ಸ್ ಸಿಗಬಹುದು. ಹೀಗೆ ಅದೃಷ್ಟ ಖುಲಾಯಿಸಿದರೆ ಶ್ರೇಯಸ್ ಅಯ್ಯರ್ ಮುಂಬರುವ ಟಿ20 ವಿಶ್ವಕಪ್‌ನಲ್ಲೂ ತಿಲಕ್ ವರ್ಮಾ ಬದಲಿಗೆ ಕಣಕ್ಕಿಳಿಯುವುದನ್ನು ಎದುರು ನೋಡಬಹುದು.

**ಭಾರತ ತಂಡ:** ಸೂರ್ಯಕುಮಾರ್, ಅಕ್ಷರ್ ಪಟೇಲ್ , ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಸಂಜು ಸ್ಯಾಮ್ಸನ್ , ಜಸ್‌ಪ್ರೀತ್ ಬುಮ್ರಾ, ಅರ್ಷದೀಪ್ ಸಿಂಗ್, ವರುಣ್ ಚಕ್ರವರ್ತಿ, ಹರ್ಷಿತ್ ರಾಣಾ, ವಾಷಿಂಗ್ಟನ್ ಸುಂದರ್, ಕುಲ್ದೀಪ್ ಯಾದವ್, ಇಶಾನ್, ರಿಂಕು ಸಿಂಗ್.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966